Breakdown of Water Supply to Raichur City.

*Q.—381. Sri S. BHOJRAJ (Yadgir).—

Will the Government be pleased to state:—

(a) whether they are aware of the fact that water supply to Raichur City broke down completely on 20th April 1962 and the Raichur City Municipality was unable to make any arrangement to supply water to the public;

(b) whether the expected break-down had come to their notice earlier;

(c) if so, the immediate action they had taken in this respect;

(d) the reasons for this breakdown of water supply;

(e) the action they proposed to take against the authority responsible for this breakdown?

A.—Sri K. PUTTASWAMY (Minister for Municipal Administration).—

(a) There was no breakdown on 20th April 1962. There was, however, interruption of supply on 26th, 27th and 28th April 1962. Alternative water supply arrangements were, however, made by the Municipality, by requisitioning 7 lorries equipped with water tanks as also a jeep. Twenty standposts were arranged within the reservoir premises from where the public near the reservoir could get potable water. To supplement these, wells, irrespective of their being public or private were disinfected by the Municipality with the assistance and co-operation of the District Health Officer.

(b) About the middle of January 1962 it had been noticed that certain parts of the machinery were worn out and required replacements.

(c) Action was taken for the replacement of worn out spare parts of the Head works machinery at Davasugur and the reconditioning of the low lift pumps.

(d) The machinery having been installed in 1934 had become old and till recently no major repairs had been undertaken.

(e) This is under consideration.

(The hon. member Sri S. Bhojraj was not present)

Mr. SPEAKER.—This is a very important question. Since the member is not there to put the question, I am putting the question.

Sri ANGADI CHANNABASAPPA.—Is this Municipal Council an elected body or a nominated body?

Sri K. PUTTASWAMY.—It is an elected body.

Sri J. P. SARVESH.—Will Government assure the House that new machinery will be provided to Raichur in the current year?

Sri K. PUTTASWAMY.—The worn-out machinery has already been replaced. It is only a question of long range improvements. That is a thing which is under examination.

ಶ್ರೀ ಗಂಗಾಧರ ನಾಮೋಷಿ.—1934ನೆಯ ಇಸವಿಯಲ್ಲಿ ಇನ್‌ಸ್ಟಾಲ್ ಮಾಡಿದ ಯಂತ್ರಗಳಿದ್ದರೆ, ಅವನ್ನು ರಿಪೇರಿ ಮಾಡುವುದು ಯಾರ ಕರ್ತವ್ಯ?

ಶ್ರೀ ಕೆ. ಪುಟ್ಟಸ್ವಾಮಿ.—ಮುನಿಸಿಪಾಲಿಟಿಯವರು ಮಾಡಬೇಕು.

ಶ್ರೀ ಗಂಗಾಧರ ನಾಮೋಷಿ.—ಮುನಿಸಿಪಾಲಿಟಿಯವರು ನಿರ್ಣಯಮಾಡಿ ಹಣವನ್ನು ಕಟ್ಟಿದ ಮೇಲೆ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಮಾಡಬೇಕಾದ ಕೆಲಸವನ್ನು ಮಾಡಿಲ್ಲ ಅಲ್ಲವೆ?

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರದಲ್ಲಿರುವ ಸಮಾಚಾರದ ಪ್ರಕಾರ, ಪಬ್ಲಿಕ್‌ವರ್ಕ್ಸ್ ಇಲಾಖೆಯವರು ಆ ಯಂತ್ರಗಳಲ್ಲಿ ದೋಷವಿದೆ, break-down ಆಗಬಹುದು, ಹಣಕೊಟ್ಟರೆ ರಿಪೇರಿ ಮಾಡುತ್ತೇವೆ ಎಂದರೂ ಹಣವನ್ನೊದಗಿಸಲಿಲ್ಲ. ಹಾಗಿದ್ದರೂ ಆ ಮೇಲೆ ತರಾತುರಿಯಲ್ಲಿ ಸರ್ಕಾರದವರೇ ರಿಪೇರಿ ಮಾಡಿಸಿದ್ದಾರೆ.

Mr. SPEAKER.—Question hour is over.

---

2 P.M.

NON-OFFICIAL RESOLUTION.

Re: **Recommendation to Government of India to take necessary steps to change the present name of Mysore State to Karnataka State.**

Mr. SPEAKER.—The hon. member Sri R. M. Desai may move his resolution.

[*Hon. member Sri R. M. Desai was not present in the House.*]

Mr. SPEAKER.—Then Sri R. S. Patil may move his resolution.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ.

"ಮೈಸೂರು ರಾಜ್ಯ ಎಂಬ ಈಗಿರುವ ಹೆಸರನ್ನು ಕರ್ಣಾಟಕ ರಾಜ್ಯವೆಂದು ಬದಲಾಯಿಸಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಕೊಳ್ಳುವಂತೆ ಭಾರತ ಸರ್ಕಾರದವರಿಗೆ ಶಿಫಾರಸ್ಸು ಮಾಡಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ."

Mr. SPEAKER.—Resolution moved:

"That this Assembly is of the opinion that a recommendation be made to the Government of India to take necessary steps urgently to change the present name of Mysore State to Karnataka State."

Sri ANGADI CHANNABASAPPA (Hadagalli).—Sir, before the debate begins, I want to raise an objection. Under article 3 of the Constitution, the views of this House have to be expressed. But as I see, the resolution makes a recommendation. How can that be done? We can at best express our views. Under article 3 the Parliament need not wait for the recommendation of any State Legislature.

Mr. SPEAKER.—Do I understand the hon. member to say that this House has no right to debate on this resolution?

Sri ANGADI CHANNABASAPPA.—The House has got the right; I am questioning the form of the resolution.

Mr. SPEAKER.—The rest we shall see as we proceed with the discussion and the hon. member may make suggestions if he gets a chance.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಇದಕ್ಕೆ ಸಂಬಂಧವಾದ 51 ನಿರ್ಣಯಗಳಿವೆ. ಈ ಗೊತ್ತುವಳಿ ಸ್ವೀಕೃತವಾದರೆ ತೀರ್ಮಾನವೇನಾಗುತ್ತದೆ? ಈಗ 51 ನಿರ್ಣಯಗಳೂ ಕೂಡ ಸಭೆ ಮುಂದೆ ಇಡಲ್ಪಟ್ಟಿವೆಯೇ?

Mr. SPEAKER.—Where are you taking me and the House? There are separate resolutions for separate days under separate nomenclature. How can I put all the resolutions? There is the agenda before the House and we have to follow it.

ಶ್ರೀ ಎ. ಜೆ. ದೊಡ್ಡಮೇಟಿ.—ಈ ನಿರ್ಣಯ ನಾಳೆ ಸ್ವೀಕೃತವಾದರೆ ಮರುದಿವಸ ಇತರ ನಿರ್ಣಯಗಳ ವಿಚಾರವೇನಾಗುವುದು?

Mr. SPEAKER.—The hon. member has studied it so much that there are so many ideas. I have not gone into it to that extent. I will progress slowly. Before the debate begins, I would very much like to address the House for a few minutes. I am not going to take much time.

The hon. members will kindly bear in mind that we are going to discuss a matter of vital importance. The present generation will be viewing these problems that are before us with a certain amount of animated enthusiasm. Future generation and historians will look upon any decision taken by the House today as a landmark in the course of the current history.

The matter is not new. Some aspect of it has been agitating the minds of the public for over a decade prior to integration. This led to the unification and reorganisation of the State. The present subject-matter, the naming or renaming of the State in its reorganised form has also been actively engaging the attention of the public and also the hon. members for the past over six years. Much has been and can be said on both sides. Unanimous decision should be achieved and would be ideal but as at present envisaged, the chances appear to be extremely remote. The discussion will begin and remarks and speeches will arouse the feelings of the one or the other. They are bound to act and react. There will be resistance as also added vigour to overcome the resistance. Ultimately, be it remembered that it is for the House to take a decision. In so arriving at a decision or in deciding the matter in any other fashion that the House might resolve to do, I appeal to every member who participates in the debate and every member present in the House that he should, as far as possible, try to take a dispassionate view and while speaking with all the emphasis at his command, yet speak in reasonable and restrained manner which will maintain the high traditions of the House and the great decorum

(MR. SPEAKER)

that has prevailed in the House at all times. Let us discuss this vital problem with all earnestness, strength of language, best of arguments and fulness of debate. But let us do it in a most dignified manner so that there will be no kind of acrimony during the course of the debate. I seek the co-operation of every member in this behalf. I do not minimise the importance of the subject but even a difficult subject is best tackled in a cool argumentative manner rather than by using indecorous language or acts. I trust the members will give me the fullest co-operation in this behalf.

Now, there is one more aspect which I would like to mention to the House. The House is aware that the time allotted to this resolution is 3½ hours. That means, practically the whole of today and tomorrow official business will have to be done. Tomorrow has not been allotted for non-official business. Looking to the importance of the subject, I do not know how many would like to participate. I am trying to accommodate to the maximum extent possible. Take it that I am in your hands. I shall see that what can be done is done to the satisfaction of the maximum number of people. Throughout yesterday and for the last three days I have been adhering to 15 minutes for each member. Even then, how many will be able to participate— not all that are desirous. How to solve the problem ? Twelve members can participate and I do not know what time will be required for reply.

Sri B. D. JATTI (Minister for Finance).—Fifteen minutes, Sir.

Sri ANGADI CHANNABASAPPA.—The Chair was pleased to give us some lessons. I want to know the number of lessons that has been taught to us on the floor of the House.

Mr. SPEAKER.—Who is the teacher and who is the taught ?

Sri ANGADI CHANNABASAPPA.—I believe that you are the teacher

Mr. SPEAKER.—I am not a teacher. If he proceeds on that line, he will be going on very wrong lines.

Sri ANGADI CHANNABASAPPA.—I want to know how the Chair apprehended all that.

Mr. SPEAKER.—If that is all the point, then he has heard me fully or he has not heard me fully. I said that I was anticipating. Anticipating means to see as far as possible. If we know that the subject is a bit delicate, there is nothing wrong on my part in saying so. He must not take it as a lesson. I never treat anybody as a student; nor am I prepared to be a teacher. I am seeking the co-operation of the House. His observation as to how many lessons have been taught is a little misplaced. Please do not do that.

Sri ANGADI CHANNABASAPPA.—I only wanted to bring to your notice that there has been no occasion to apprehend that.

Mr. SPEAKER.—I am grateful to the Hon'ble Member. Throughout the debate I will wait and see. I will apologise to the House if all my anticipations go wrong.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅದನ್ನೇ ನಾನು ಹೇಳುತ್ತೇನೆ. ತಾವು ಟ್ರಬಲ್ ಆಂಟಿಸಿಪೇಟ್ ಮಾಡಿದರೆ ಈ ಸಭೆಯನ್ನು ಕಂಟ್ರೋಲ್ ಮಾಡುವುದಕ್ಕೆ ತಾವೇ ಇದ್ದೀರಿ. ಏನೋ ಅನಾಹುತ ಆಗಿ ಹೋಗಿ ಬಿಡುತ್ತದೆ ಎಂದು ಸರ್ವಸಿದ್ಧತೆಗಳನ್ನು ಮಾಡಿಕೊಂಡು ಬರುತ್ತಾರೆಂದು ಜನಗಳು ಅಂದುಕೊಳ್ಳುತ್ತಾರೆ. Will that not give an impression outside ?

Mr. SPEAKER.—I have already said that I can address the House. I addressed it. The Members have brought it to my notice and I will wait and see. If my anticipations are found wrong, I will apologise to the House. Hereafter there should be no discussion on this point.

ಶ್ರೀ ಆರ್. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಕಾಮನ್ಸ್ ಸಭೆಯಲ್ಲಿ ಮಾನ್ಯ ಸದಸ್ಯರು ಮಾತನಾಡುವ ಆತುರತೆಯನ್ನು ತೋರಿಸಿದಾಗ ಮಾನ್ಯ ಡಿಜ ರೇಲಿಯವರು "ಮಾನ್ಯ ಸದಸ್ಯರು ಮಾತನಾಡುವುದಕ್ಕಿಂತ ಮಾತನಾಡದೆ ಇರುವುದರ ಬಗ್ಗೆ ಆತ್ಯಾಶ್ಚರ್ಯ ಪಡುತ್ತಿರಬೇಕು" ಎಂದು ಹೇಳಿದರು. ಇದುವೇ ನಮ್ಮ ಸೂತ್ರವೆಂದು ನಂಬಿಕೊಂಡವರಲ್ಲಿ ನಾನೂ ಒಬ್ಬ. ಆದರೆ ಇಂದು ಈ ಗೊತ್ತುವಳಿಯನ್ನು ಯಾರು ತರಬೇಕಾಗಿತ್ತೋ ಅವರು ಈ ಸಭೆಗೆ ಬಾರದೆ ಇರುವುದರಿಂದ ನಾನು ಮಾತನಾಡಬೇಕಾಯಿತು. ನಾನು ಈ ಗೊತ್ತುವಳಿಯನ್ನು ಈ ಸಭೆಯ ಮುಂದೆ ಮಂಡಿಸಬೇಕೆಂದು ಆ ಕರ್ಣಾಟಕ ಮಾತೆ ಬಯಸಿದ್ದಳೋ ಏನೋ ಅನಿಸುತ್ತದೆ. ಇಂದಿನ ದಿನ

ನನಗಂತೂ ಸುವರ್ಣಾಕ್ಷರಗಳಲ್ಲಿ ಬರೆದಿಡತಕ್ಕಂಥ ದಿನವಾಗಿದೆ.

(*Interruptions*)

Mr. SPEAKER.—Hon'ble Members have been already interjecting. I find Sri Muckannappa himself is interjecting.

ಶ್ರೀ ಆರ್. ಎಸ್. ಪಾಟೀಲ್.—"ದೀಕ್ಷೆಯ ತೊಡು ಇಂದೇ, ಕಂಕಣ ಕಟ್ಟಂದೇ, ಕನ್ನಡ ಕನ್ನಡ ನಾಡೊಂದೇ" ಎಂದು ಹಾಡಿ ಅಂದು ಕನ್ನಡಿಗರ ಮನಗಳನ್ನು ಹುರುದುಂಬಿಸಿದ ಕವಿಗಳು "ಉದಯ ವಾಗಲಿ ನಮ್ಮ ಚಲುವ ಕನ್ನಡನಾಡು" ಎಂದು ಹಾಡಿ ಹರಸಿದ ಕವಿಗಳು ಇಂದು ಆನಂದದಿಂದ ಕುಣಿದಾಡುತ್ತಿರಬೇಕು. ಕನ್ನಡ ಕುಲ ದೇವತೆಗಳು ಕನ್ನಡ ಕುಲ ಗುರುಗಳು, ಕನ್ನಡ ಕುಲ ಗುರುಗಳು ನಮ್ಮ ಕನ್ನಡ ನಾಡಿನ ಇತಿಹಾಸ ಸಂಸ್ಕೃತಿಗೆ ಕೀರ್ತಿ ಪ್ರಾಯರಾದ ನಮ್ಮ ಪೂರ್ವಜರು ಇಂದು ಹರ್ಷಾರವ ಗೈಯ್ಯುತ್ತಿರಬೇಕು. ನಮ್ಮ ನಾಡಿನ ಜಲ ದೇವತೆ, ವನ ದೇವತೆ ಸ್ಥಳ ದೇವತೆಗಳು ನಾವು ಕೈ ಗೊಳ್ಳುವ ಈ ನಿರ್ಣಯಕ್ಕೆ ಅಶೀರ್ವದಿಸುವರು.

ಕನ್ನಡಿಗರ ಕನಸು ನನಸಾದದ್ದು 1956 ನೇ ಇಸವಿಯ ನವಂಬರ್ ತಿಂಗಳು ಒಂದನೇ ತಾರೀಖು. ಅಂದೆಯೇ ಈ ರಾಜ್ಯಕ್ಕೆ ಕರ್ಣಾಟಕವೆಂದು ನಾಮಕರಣವಾಗಬೇಕಾಗಿತ್ತು. ಆದಾವದೋ ಕಾರಣದಿಂದ ಮೈಸೂರು ಎಂದಾಯಿತು. ಮೈಸೂರು ಕರ್ಣಾಟಕದಲ್ಲಿ ಒಂದು ನಗರ, ಕರ್ಣಾಟಕದ ಇತಿಹಾಸ ಪರಂಪರೆ ಮತ್ತು ಸಮಗ್ರತೆಯ ಸಂಕೇತವಾಗದು. ಮೈಸೂರಿನ ಬಗ್ಗೆ ನನಗೂ ಅಭಿಮಾನವಿದೆ. ಮೈಸೂರು ಕರ್ಣಾಟಕದ ಸೊಬಗಿನ ಭಾಗದ ಸುಂದರ ಪ್ರದೇಶದ ಹೆಸರು. "ಕರ್ಣಾಟಕವೆಂಬ ನಾರಿಯ ನೊಸಲ ಮೇಲೆ ಹೊಳೆವ ರನ್ನದ ಬೊಟ್ಟು. ಮೈಸೂರು ಕರ್ನಾಟಕದ ಕಲಶ. ಕಲಶ ಶ್ರೇಷ್ಠ ಸ್ಥಾನದಲ್ಲಿರುವುದಾದರೂ ಕಲಶವನ್ನು ಕಲಶವೆಂದೇ ಕರೆಯಬೇಕೇ ವಿನಾ ಮಂದಿರವೆಂದು ಕರೆಯಲಾಗದು."

ಒಂದು ದೇಶಕ್ಕೆ ಹೆಸರಿಡುವ ಹೆಸರು ಭಾಷಾವಾಚಕವಾಗಿರಬೇಕು. ಇಲ್ಲವೆ ದೇಶ ವಾಚಕವಾಗಿರಬೇಕು. ಇಂಗ್ಲೀಷ್ ಮಾತನಾಡುವ ದೇಶಕ್ಕೆ ಇಂಗ್ಲೆಂಡ್ ಎಂತಲೂ ಜರ್ಮನ್ ಭಾಷೆಯನ್ನು ಮಾತನಾಡುವ ದೇಶಕ್ಕೆ ಜರ್ಮನಿ ಎಂತಲೂ ರಷ್ಯನ್ ಭಾಷೆಯನ್ನು ಮಾತನಾಡುವ ದೇಶಕ್ಕೆ ರಷ್ಯಾ ಎಂತಲೂ, ಚೀಣೀ ಭಾಷೆಯನ್ನು ಮಾತನಾಡುವ ದೇಶಕ್ಕೆ ಚೀನಾ ಎಂತಲೂ,...

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಹಾಗಾದರೆ ಅಮೇರಿಕ ಮಾತನಾಡುವ ದೇಶಗಳ ಹೆಸರೇನು ?

Mr. SPEAKER.—Now do you understand Sri Channabasappa ?

Sri ANGADI CHANNABASAPPA.—Such kind of interruptions when we are discussing a serious resolution must be welcomed because they keep the House lively.

ಶ್ರೀ ಆರ್. ಎಸ್. ಪಾಟೀಲ್.—ಇನ್ನೂ ಬೇಕಾದಷ್ಟು ದೇಶಗಳ ಹೆಸರುಗಳನ್ನು ಸೂಚಿಸಬಹುದು. ನಮ್ಮ ದೇಶದಲ್ಲಿ ಆಂಧ್ರ ತಮಿಳುನಾಡು, ಗುಜರಾತ್, ಪಂಜಾಬಿ ಮೊದಲಾದುವುಗಳು ಭಾಷಾ ಸೂಚಕ ಹೆಸರುಗಳು. U.P., M.P., ಹಿಮಾಚಲ ಪ್ರದೇಶ ಮುಂತಾದುವುಗಳು ದೇಶ ವಾಚಕಗಳು. ಈ ಹೆಸರುಗಳು ಅ ರಾಜ್ಯದ ಭಾಷೆ, ಸಂಸ್ಕೃತಿ ಪರಂಪರೆಗನುಗುಣವಾಗಿ ಅನ್ವರ್ಥವಾದ ಹೆಸರನ್ನೇ ಹೊಂದಿದೆ.

ಹರಿದು ಹಂಚಿ ಹೋದ ನಾವು ಶತಮಾನಗಳ ತರುವಾಯ ಒಂದುಗೂಡಿದ್ದೇವೆಯೇ ವಿನಃ ಮೈಸೂರಿಗೆ ಉಳಿದ ಭಾಗಗಳು ಒಂದುಗೂಡಿದವು ಅನ್ನುವುದು ಸಾಧುವಲ್ಲ. ನಮ್ಮ ನಡೆ ಕನ್ನಡ, ನುಡಿ ಕನ್ನಡ. ಮನ ಕನ್ನಡ, ತನು ಕನ್ನಡ. ಸಮಗ್ರ ರಾಜ್ಯದ ಭದ್ರ ಬುನಾದಿಗೆ ಇತಿಹಾಸ ಪರಂಪರೆಗನುಗುಣವಾಗಿ "ಕರ್ನಾಟಕ" ಎಂತಲೇ ಹೆಸರಿಡುವುದು ಸೂಕ್ತ. ಹೆಸರಿನಲ್ಲಿ ಏನಿದೆ ? ಎಂದು ಒಂದುವಾದ. ಹೆಸರಿನಲ್ಲಿ ಏನೂ ಇಲ್ಲದಿದ್ದರೆ ಕರ್ನಾಟಕ ಅಂತ ನಾಮಕರಣ ಮಾಡಿ.

(*Interruptions*)

Mr. SPEAKER.—I was found fault with for anticipating for this kind of interjections.

ಶ್ರೀ ಆರ್. ಎಸ್. ಪಾಟೀಲ್.—ಮೈಸೂರೇ ಎಂದು ಇರಲಿ ಎಂದು ಏಕೆ ಆ ಗ್ರಹಂ ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ, ದಕ್ಷಿಣ ಕರ್ನಾಟಕ, ಮೈಸೂರು ಕರ್ನಾಟಕ ಕೂಡಿ ಏಕೀಕೃತ ಕರ್ನಾಟಕ. ವಿವಿಧ ಭಾಗಗಳಿಂದ ಬಂದಿರತಕ್ಕಂಥ ನಾವು ನಮ್ಮ ನಮ್ಮ ಭಾಗಗಳಲ್ಲಿ ಪ್ರಮುಖ ನಗರದ ಹೆಸರನ್ನೇ ಈ ದೇಶಕ್ಕೆ ಇಡಬೇಕೆಂದು ಹೇಳಿದರೆ ಹೇಗೆ ? ನಾನು ಒಂದು ಸಂಸ್ಥಾನದಿಂದ ಬಂದವನು. ರಾಮದುರ್ಗ ಸಂಸ್ಥಾನಕ್ಕೂ ಒಂದು ಇತಿ ಹಾಸವಿದೆ. ಅದರ ಹೆಸರನ್ನು ಏತಕ್ಕೆ ಇಡಬಾರದು ಎಂದು ನಾನು ಹೇಳಿದರೆ ಅದು ಸಾಧುವೇ ? ಮೈಸೂರಿಗೂ ಇತಿ ಹಾಸವಿದೆ. ಆದರೆ ಅದರ ಇ ಹಾಸ ಕರ್ನಾಟಕದ ಇತಿಹಾಸ. ಅದು ಪ್ರತ್ಯೇಕ. ಅದು ಪ್ರತ್ಯೇಕ ಇತಿ ಹಾಸವಲ್ಲ. ಈ ಸಂದರ್ಭದಲ್ಲಿ ಒಂದು ಕುಟುಂಬದಲ್ಲಿಯ ಒಂದು ಘಟನೆ ನನಗೆ ನೆನಪಾಗುತ್ತದೆ. ಒಬ್ಬನಿಗೆ ನಾಲ್ಕು ಜನ ಹೆಂಡತಿಯರಿದ್ದರು. ಒಬ್ಬಳು ಹಿಂದಿ ಮಾತನಾಡುವಳು, ಮತ್ತೊಬ್ಬಳು ಕನ್ನಡ ಮಾತನಾಡುವಳು, ಇನ್ನು ಇಬ್ಬರು ತೆಲಗು ಮತ್ತು ಮರಾಠಿಯನ್ನು ಮಾತನಾಡುವವರು. ಹೀಗಿರುವಾಗ ಕನ್ನಡತಾಯಿಯ ಹೊಟ್ಟೆಯಲ್ಲಿ ಒಂದು ಗಂಡು ಮಗುವಾಯಿತು. ಒಮ್ಮೆಲೇ ಎಲ್ಲರಿಗೂ ಆ ಮಗುವಿನ ಮೇಲೆ ಎಲ್ಲಿಲ್ಲದ ಮೋಹ ಉಂಟಾಯಿತು. ಆಗ ಹಿಂದಿ ಮಾತನಾಡುವಳು ಅಜಿತ ಪ್ರಸಾದ್ ಎಂದು ಹೆಸರಿಡಬೇಕೆಂತಲೂ, ಕನ್ನಡ ಮಾತಾಡುವಳು ಕೃಷ್ಣಪ್ಪ ಎಂದು ಇಡ ಬೇಕೆಂತಲೂ, ತೆಲಗು ಮಾತಾಡುವಳು ಸಂಜೀವಲು ಎಂದು ಇಡಬೇಕೆಂತಲೂ ಮತ್ತು ಮರಾಠಿಯನ್ನು ಮಾತಾಡುವಳು ಸ ಖಾ ರಾ ಮ ಎಂದು ಹೆಸರಿಡಬೇಕಂತಲೂ ಒಬ್ಬರಿಗೊಬ್ಬರಿಗೆ ವಾಗ್ವ್ಯಾನ ಶುರುವಾದಾಗ ಮನೆಯ ಶಾಂತಿಯೇ ಕದಡಿ ಹೋಯಿತು. ಆಗ ಬುದ್ಧಿವಂತನಾದ ಗಂಡ ತನ್ನ ಮನೆಯಲ್ಲಿ ಭಾವೈಕ್ಯತೆಯನ್ನು ತರಲು ಆ ಮಗುವಿಗೆ "ಅಬಾರಾಯ" ಎಂದು ನಾಮಕರಣ ಮಾಡಿದನು. "ಅ, ರಾ, ಯೆ." ಎಂದರೆ ಕನ್ನಡದಲ್ಲಿ "ಬಾ" ಎಂತಲೇ. ನಾವು ಕೂಡ ಚಾಣಾಕ್ಷತನದಿಂದ ಈ ದೇಶದ ಭಾಷೆ, ಸಂಸ್ಕೃತಿ, ಇತಿಹಾಸ ಸಮಗ್ರತೆಯ ಸಂಕೇತವಾದ "ಕರ್ನಾಟಕ" ಅಂತಾ

(ಶ್ರೀ ಆರ್. ಎಸ್. ಪಾಟೀಲ್)

ಹೆಸರಿಟ್ಟು ಭಾವೈಕ್ಯತೆಯನ್ನುಂಟು ಮಾಡೋಣ. ಇತಿಹಾಸ ಎಂದಾಗ ಮೈಸೂರಿಗೆ ಒಂದು ಇತಿಹಾಸ ಇದೆ. ಅದನ್ನು ಎಲ್ಲರೂ ಹೇಳುತ್ತಾರೆ. ಅದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಮೈಸೂರಿನ ಇತಿಹಾಸ ಕರ್ನಾಟಕದ ಇತಿಹಾಸವೇ ಹೊರತು ಅದಕ್ಕೆ ಪ್ರತ್ಯೇಕ ಇತಿಹಾಸವಿಲ್ಲ. ಆದ್ದರಿಂದ ಸಮಗ್ರ ರಾಜ್ಯದ ಭದ್ರ ಬುನಾದಿಗೆ, ಸಾಂಸ್ಕೃತಿಕ ಸಾಮರಸ್ಯ ನಿರ್ಮಾಣಕ್ಕೆ ಭಾವೀ ಪೀಳಿಗೆಯ ಭವ್ಯ ಭವಿಷ್ಯಕ್ಕಾಗಿ ಈ ರಾಜ್ಯಕ್ಕೆ ''ಕರ್ನಾಟಕ'' ವೆಂದು ಅನ್ವರ್ಥವಾದ ಹೆಸರಿಡುವುದು ಅಗತ್ಯ. ಅನಿವಾರ್ಯ. ಇಲ್ಲವಾದರೆ ''ಆಳ್ ಕನ್ನಡ ತಾಯ್, ಬಾಳ್ ಕನ್ನಡ ತಾಯ್, ಓ ಕನ್ನಡ ರಾಜೇಶ್ವರಿ'' ಎನ್ನುವ ಅನುವಾದಕ್ಕೇನು ಅರ್ಥ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಈ ದಿನದ ವಿಚಾರ ಚರ್ಚೆ ಮಾಡುತ್ತಿರುವುದನ್ನು ನೋಡಿದರೆ ನನಗನ್ನಿಸುತ್ತದೆ, ನಮ್ಮ ಕನ್ನಡಿಗರು ಮುಂದಿನ ಆಗುಹೋಗುಗಳ ಮೇಲೆ ಯಾವ ರೀತಿ ಪ್ರಭಾವ ಬೀರುತ್ತಾರೋ ಎಂಬುದಾಗಿ ನಾನು ಹಿಂದಿನಿಂದಲೂ ಕೇಳಿದ್ದೇನೆ. ಮೈಸೂರು ಎಂದೇ ಹೆಸರು ಇರಬೇಕೆಂದು ಬಹಳಹಿಂದೆಯೇ ಚರ್ಚೆಯಾಗಿದೆ. ಮೈಸೂರು ಎಂಬ ಹೆಸರಿನಲ್ಲಿ ವೈವಿಧ್ಯತೆ ಇದೆ. ಅದನ್ನು ಎಲ್ಲರೂ ನೋಡಬೇಕಾದುದೇನೋ ಸರಿ. ಆದರೆ ಅದರಲ್ಲಿ ಏನಪ್ಪಾ ವೈವಿಧ್ಯ ಅಂದರೆ ಮೊದಲನೆಯದಾಗಿ ಅಂದು ಕನ್ನಡಿಗರ ರಾಜ್ಯ ಹರಿದು ಹಂಚಿಹೋಗಿತ್ತು. ಎರಡನೆಯದಾಗಿ ಸ್ವಾತಂತ್ರ್ಯ ಆಗ ಇರಲಿಲ್ಲ. ಎಲ್ಲರೂ ಸಾಮಾನ್ಯವಾಗಿ ಬ್ರಿಟಿಷ್ ಗುಲಾಮಗಿರಿಯಲ್ಲಿದ್ದೆವು. ರಾಜಮಹಾರಾಜರ ಮುಖಾಂತರ ಗುಲಾಮಗಿರಿ ರಾಜ್ಯಾಡಳಿತ ನಡೆಯುತ್ತಿತ್ತು. ಮೂರನೆಯದಾಗಿ ಮೈಸೂರಿನಲ್ಲಿ ಒಂದು ರೀತಿಯ ಆರ್ಥಿಕ ವೈಶಿಷ್ಟ್ಯತೆ ಇತ್ತು. ಅದೇನೆಂದರೆ ಪಬ್ಲಿಕ್ ಸೆಕ್ಟರ್ ಸ್ವಲ್ಪ ಜಾಸ್ತಿ ಇತ್ತು. ಅದು ಚೆನ್ನಾಗಿ ನಡೆಯುತ್ತಿತ್ತು. ಕೈಗಾರಿಕೆಗಳಲ್ಲಿ ಮುಂದಕ್ಕೆ ಬಂದಿತ್ತು. ಈಗಿನ ವೈಶಿಷ್ಟ್ಯ ಅದಾದ ಮೇಲೆ ಸ್ವಾತಂತ್ರ್ಯ ಬಂತು. ಮುಂಚೆಯ ಗುಲಾಮಗಿರಿ ಹೋಗಿ ಆಮೇಲೆ ಸ್ವಾತಂತ್ರ್ಯ ಬಂತು. ನಂತರ ಹರಿದು ಹಂಚಿಹೋಗಿದ್ದ ಕನ್ನಡನಾಡು ಕನ್ನಡ ರಾಜ್ಯ ಒಂದಾಯಿತು. ಈಗಲೇ ಪಬ್ಲಿಕ್ ಸೆಕ್ಟರ್ ಬಹಳ ತಲೆಕೆಳಕಾಗುವ ಪರಿಸ್ಥಿತಿ ಬಂದಿದೆ. ಅಂದರೆ ಕಾಂಗ್ರೆಸ್‌ನವರು ಬಂದಮೇಲೆ ದುರಾಡಳಿತ ಜಾಸ್ತಿಯಾಗಿ ಬಹಳ ವ್ಯತ್ಯಾಸವಾಯಿತು. ಆದರೆ ಕನ್ನಡ ರಾಜ್ಯ ಒಂದಾದ್ದು ಯಾವ ಹಿನ್ನೆಲೆಯಲ್ಲಿ ಎಂಬುದನ್ನು ನೋಡಬೇಕು. ಇದು ಮುಖ್ಯ ಪ್ರಶ್ನೆ. ಮೈಸೂರು ಇರಬೇಕೆಂದು ಹೇಳುವವರಿಗೆ ಜಾತೀಯತೆಯ ಸೋಂಕು ಬಂದಿದೆಯೆಂದು ಹೇಳಿದರೆ ಏನೂ ತಪ್ಪಾಗಲಾರದು. ಆ ಮಾತನ್ನು ನಾನು ಬಹಳ ಧೈರ್ಯವಾಗಿ ಹೇಳುತ್ತೇನೆ. ಕನ್ನಡಿಗರೂ ಒಂದಾಗುವುದೇ ಬೇಡವೆಂದು ಸಹ ಹಿಂದೆ ಹೇಳಿದವರೂ ಇದ್ದಾರೆ. ಇದು ತಪ್ಪು ಭಾವನೆ. ಇದಕ್ಕೆ ಸರಿಯಾದ ಹಾದಿ ಕಂಡುಹಿಡಿಯದಿದ್ದರೆ ಏನೂ ಪ್ರಯೋಜನವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಮತ್ತೊಂದು ವಿಚಾರ. ಈ ಭಾಷಾವಾರು ಪ್ರಾಂತಕ್ಕಾಗಿ ಹೆಚ್ಚು ಹೋರಾಟ ಮಾಡಿದವರ ಪೈಕಿ ಈ ದಿನದ ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ನಿಜಲಿಂಗಪ್ಪನವರೂ ಒಬ್ಬರು. ಹಾಗೆ ಹೋರಾಡಿದವರಲ್ಲಿ ಶ್ರೀಮಾನ್ ಗೋಪಾಲಗೌಡರು ಸರಿಯಾದ ಏಟು ತಿಂದರು ಎಂದು ಕೇಳಿದ್ದೇನೆ. ಆಗಿನ ಅಸೆಂಬ್ಲಿ ಸದಸ್ಯರು ಮಾತನಾಡುತ್ತಿದ್ದಂಥ ಒರಟು ಭಾಷೆ ಒರಟು ಒರಟು ನಡೆವಳಿಕೆಗಳನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತಿತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಿಂದಿನ ಅಸೆಂಬ್ಲಿಯಲ್ಲಿ ಸದಸ್ಯರು ಆಗಿದ್ದವರ ಮೇಲೆ ಆರೀತಿ ಆರೋಪಣೆ ಮಾಡುವುದು ಸರಿಯಲ್ಲ. ಅವರು ಆ ರೀತಿ ಮಾತನಾಡುವುದು ಸರಿಯೇ ? ಈ ದೇಶದಲ್ಲಿ ಇದಕ್ಕಾಗಿ ಬಹಳವಾಗಿ ಹೋರಾಡಿದವರು ಹಿಂದಿನ ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ಅನೇಕರಿದ್ದಾರೆ. ಅವರಲ್ಲಿ ಕೆಲವರು ಈಗಲೂ ಇದ್ದಾರೆ. ಅವರಲ್ಲಿ ಅನೇಕರು ಬುದ್ಧಿವಂತರು, ನಾಗರೀಕಸ್ಥರು, ಇದ್ದಾರೆ. ದೇಶದಲ್ಲಿದ್ದಂತಹ ಈ ಎರಡು ಸಭೆಗಳಲ್ಲೂ ಇರುವ ಸಭಾಸದಸ್ಯರು ಒರಟಾಗಿ ಏನೇನೋ ವಿಷಯಗಳನ್ನು ಹೇಳುತ್ತಿದ್ದರು ಎಂಬುದಾಗಿ ಇಲ್ಲದಸಲ್ಲದ ಟೀಕೆಯನ್ನು ಮತ್ತು ಆರೋಪಣೆಯನ್ನು ಮಾಡಿದ್ದು ಸರಿಯಲ್ಲ. ಇದರ ಬಗ್ಗೆ ಅಧ್ಯಕ್ಷರು ರೂಲಿಂಗ್ ಕೊಡಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ವಿ. ಎಂ. ದೇವ್.—ನಾನು ಹೇಳಿದ್ದು ಪೂರ್ವದ ನಡೆವಳಿಕೆ. ನೀವು ಅದನ್ನು ಕೇಳಿದ್ದೀರಿ. ನಾನು ಈ ರೀತಿ ಹೇಳಿದ್ದು ಶ್ರೀಮಾನ್ ಮುಕ್ಕಣ್ಣಪ್ಪನವರ ಮನಸ್ಸಿಗೆ ವ್ಯಥೆಯಾಗಿರಬಹುದು. ಈ ರೀತಿ ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡಿದ್ದಾರೆ. ಇವರ ಮಾತಿನಲ್ಲಿ ಏನು ತಿರುಳಿದೆಯೋ ನನಗೆ ಗೊತ್ತಿಲ್ಲ. ನಾನು ಹಿಂದಿನ ಸದಸ್ಯರುಗಳನ್ನು ನಾನು ಯಾವ ರೀತಿಯಲ್ಲೂ ದೂಷಣೆ ಮಾಡಲಿಕ್ಕೆ ಹೋಗುವುದಿಲ್ಲ. ಹಿಂದಿನ ನಡೆವಳಿಕೆ ಹೇಳಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೋಸ್ಕರವಾಗಿ ಸದಸ್ಯರು ಆ ಭಾಷೆ ಉಪಯೋಗಿಸುವುದು ಸರಿಯಲ್ಲ. ಅವರನ್ನು ಅಭಿಮಾನದಿಂದ ಸ್ವಾಗತಿಸುವುದು ಸಾಧುವಾದುದಾಗಿದೆ. ಅಂಥಾದ್ದರಲ್ಲಿ ಅವರ ನಡೆವಳಿಕೆ ವಿಷಯದಲ್ಲಿ ಇವರು ತುಂಬಾ ತುಚ್ಛವಾಗಿ ಕಾಣುವುದು ಖಂಡಿತವಾಗಿ ಸರಿಯಾದುದಲ್ಲ.

ಶ್ರೀ ವಿ. ಎಂ. ದೇವ್.—ಈ ಬಗ್ಗೆ ತಾವು ಯಾವ ರೀತಿ ರೂಲಿಂಗ್ ಕೊಟ್ಟರೆ ಆರೀತಿ ನಡೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ.

Mr. SPEAKER.—A charge has been made against Sri V. M. Deo that he has defamed by criticising members who have participated in the past

ಶ್ರೀ ವಿ. ಎಂ. ದೇವ್.—ನನಗೆ ಕಿವಿಗೆ ಬಿದ್ದಿರುವುದು ಮತ್ತು ಪೇಪರ್‌ನಲ್ಲಿ ಓದಿರುವುದು ನಾನು ಹೇಳುತ್ತಿದ್ದೇನೆಯೇ ಹೊರ್ತು ಬೇರೆ ಏನೂ ಇಲ್ಲ. ಇದರ ವಿಚಾರದಲ್ಲಿ ಹಿಂದಿನವರು ವಿಚಾರಶಕ್ತಿ ತಂದಿರುವ ಮಟ್ಟ ನನಗೆ ಸರಿಯಾಗಿಲ್ಲ. ಅದಕ್ಕಾಗಿ ಅನೇಕರು ಏಟು ತಿಂದಿದ್ದರು, ನಡೆವಳಿಗೆ ಚೆನ್ನಾಗಿರಲಿಲ್ಲವೆಂದು ನಾನು ಹೇಳಿದ್ದು. ಅದರಿಂದೇನಾದರೂ ಮಾನ್ಯ ಸದಸ್ಯರಿಗೆ ನೋವಾಗುವ ರೀತಿ ಇದ್ದರೆ ಆ ಒರಟು ಮಾತು ಒರಟು ನಡವಳಿಕೆ ಮತ್ತು ವಿಚಾರಶಕ್ತಿ ಮಟ್ಟ ಸರಿಯಾದುದೆಂದು ಅವರಿಗೆ ಕಂಡುಬಂದರೆ ಆದ್ದರಿಂದ ನಾನು ಆ ಮಾತುಗಳನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ.

Mr. SPEAKER—He has withdrawn the remarks. I am not going to give a lesson. The debate will continue.

ಶ್ರೀ ವಿ. ಎಂ. ದೇವ್.—ಇಷ್ಟೆಲ್ಲಾ ಆದಮೇಲೆ ಕನ್ನಡಿಗರೆಲ್ಲರೂ ಒಂದಾದರು. ಪೂರ್ವದಲ್ಲಿ ವಿಜಯ ನಗರ ಮತ್ತು ಇತರ ಎಷ್ಟೋ ಸಾಮ್ರಾಜ್ಯಗಳಿದ್ದರೂ ಎಲ್ಲಾದಕ್ಕೂ ಹಿಂದೆ ಕರ್ಣಾಟಕ ರಾಜ್ಯದ ರಾಜ ಮನೆತನದವರದೇ ರಾಜ್ಯಾಡಳಿತವಾಗಿತ್ತು. ಆದ್ದರಿಂದ ಈ ಕಾಲದಲ್ಲಿ ಕರ್ಣಾಟಕ ಪ್ರಾಂತ್ಯವೆಂದು ಹೆಸರು ಬರುವುದೇನೋ ಸ್ವಾಭಾವಿಕ. ಆದರೆ ಮೈಸೂರು ಎಂಬ ಹೆಸರಿಗೇನಾದರೂ ವೈಶಿಷ್ಟ್ಯತೆ ಇದೆಯೋ ಎಂದು ಹೇಳಿದರೆ ಅವರ ಮನೆಯ ದೇವರಾದ ಮಹಿಷಾಸುರಿ ಎಂಬ ಹೆಸರನ್ನು ಇಡುವುದಕ್ಕೆ ಅದು ಜಾತ್ಯಾತೀತ ಭಾವನೆಗೆ ಪೂರ್ಣವಾಗಿ ವಿರುದ್ಧ ಆದೀತು. ಈ ಪ್ರಶ್ನೆಯನ್ನು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಒಂದೊಂದು ರೀತಿ ಹೆಸರು ಕರೆಯಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಒಂದೊಂದು ರೀತಿಯಲ್ಲಿ ಕರೆಯೋಣವೆಂದು ಉದ್ದೇಶ ಪಟ್ಟಿದ್ದಾರೆ. ಮರಾಟರು, ರಷ್ಯಾದವರು, ಈಸ್ಟರ್ನ್ ಕಂಟ್ರೀಸ್ ಮತ್ತು ಯೂರೋಪಿಯನ್ ಕಂಟ್ರೀಸ್ ಎಷ್ಟೋ ರೀತಿ ಇದೇ ರೀತಿಯ ಪ್ರಶ್ನೆಯನ್ನು ಅಲ್ಲಲ್ಲಿ ಬಗೆಹರಿಸುವುದಕ್ಕೋಸ್ಕರ ಮುಂದಕ್ಕೆ ಬಂದಿದ್ದಾಗ ಏನಾಯಿತು ಎಂಬುದನ್ನು ಯೋಚಿಸಬೇಕು. ಅವೆಲ್ಲವೂ ಬಹಳ ಒಳ್ಳೆಯ ದೇಶಗಳಾಗಿವೆ.

Sri S. M. KRISHNA (Maddur).—Was there any controversy about the name to any state in Europe ?

ಶ್ರೀ ವಿ. ಎಂ. ದೇವ್.—ನಾವು ಅಷ್ಟು ದೂರ ಹೋಗದಿದ್ದರೂ ನಾವು ಸ್ವಲ್ಪ ಹತ್ತಿರಕ್ಕೆ ಬರೋಣ. ಮಹಾರಾಷ್ಟ್ರದ ಕೆಲವು ಭಾಗ ಬೊಂಬಾಯಿಗೆ ಸೇರಿದ ತಕ್ಷಣ ಮಹಾರಾಷ್ಟ್ರವೇ ಆಯಿತ . ಅದಿರಲಿ, ಇಲ್ಲಿ ಏನಾಗಿದೆ, ಇದರ ಹಿನ್ನೆಲೆ ಸರಿಯಾಗಿಲ್ಲ. ಏಕೆಂದರೆ ಕನ್ನಡ ಪ್ರಾಂತ್ಯಕ್ಕೆ ಹೊಡೆದಾಡಬಾರದು ಎಂದು ಹೋದವರಿಗೆ ಜಾತೀಯತೆಯ ಸೋಂಕು ತಗಲಿತು. ಅದು ಇದುವರೆಗೂ ಹೀಗೂ ಹಾಗೂ ಎಳೆದಾಡಿ ಕೊಂಡೇ ಬರುತ್ತಿದೆ. ಇದು ಸಮಾಜವಾದದ ತತ್ವಕ್ಕೇ ವಿರುದ್ಧವಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವುದು ?

ಶ್ರೀ ವಿ. ಎಂ. ದೇವ್.—ಕರ್ಣಾಟಕ ಪ್ರಾಂತ ಬೇಡವೆಂದು ಹೇಳುವುದು, ಜಾತೀಯತೆಯ ದೃಷ್ಟಿಯಿಂದ ಬೇಡವೆಂದು ಷುರುಮಾಡುತ್ತಿದ್ದಾರೆ. ಯಾರೇಆಗಲೀ ಪ್ರಾಮಾಣಿಕವಾಗಿ ನಡೆಸಿದರೆ ಖಂಡಿತವಾಗಿ ಏನೂ ತೊಂದರೆಯಾಗಲಾರದು.

ಶ್ರೀ ಎಸ್. ಎಂ. ಕೃಷ್ಣ.—ಜಾತೀಯತೆಯ ದೃಷ್ಟಿಯಿಂದ ಒಂದು ಪ್ರಾಂತವಾಗಬೇಕೆಂಬುದು ಮತ್ತು ದುರಭಿಮಾನದ ವಾದವನ್ನು ದೇಶದ ಮುಂದಿಡುವುದು ಒಂದು ದೇಶದ್ರೋಹ ಆಗಬಹುದಲ್ಲವೇ ?

ಶ್ರೀ ವಿ. ಎಂ. ದೇವ್.—ಅದರಲ್ಲಿ ಬೇಡ ಎಂದರೆ ಹಾಗಾಗುವುದರಲ್ಲಿ ಏನೂ ಅನುಮಾನವಿಲ್ಲ; ನನ್ನ ಮನಸ್ಸಿನಲ್ಲಿ ಉದ್ಭವವಾದುದನ್ನೆಲ್ಲಾ ಹೇಳುತ್ತಿದ್ದೇನೆ. ಒಟ್ಟಿನಲ್ಲಿ ಜನ ಏನು ತಿಳಿದುಕೊಂಡಿದ್ದರು ಅಂದರೆ ಹಳೆ ಮೈಸೂರಿನಲ್ಲಿ ಜಾತೀಯತೆಯ ದೃಷ್ಟಿ ಜಾಸ್ತಿ ಇದ್ದು ಒಕ್ಕಲಿಗರ ರಾಜ್ಯ ಹಿಂದೆ ಆಗಿತ್ತು ಎಂದು ಇದು ಒಂದು ದೊಡ್ಡ ಹಿನ್ನೆಲೆ. ಅದ್ದರಿಂದ ನಮ್ಮೂರಿನ ಒಕ್ಕಲಿಗರು ಬದುಕಲಿಲ್ಲ. ಇಂತಹ ಮುಖ್ಯ ಪ್ರಶ್ನೆಯನ್ನು ಬಗೆಹರಿಸುವುದನ್ನು ಬಿಟ್ಟು ಸುಮ್ಮನೆ ಮಾತನಾಡಿದರೆ ಏನೂ ಪ್ರಯೋಜನವಾಗಲಾರದು. ಇನ್ನು ಸುಮಾರು 15 ವರ್ಷಗಳಿಂದ ಮಂತ್ರಿಮಂಡಲ ರಚನೆಯಾಗುತ್ತಿರುವುದನ್ನು ನೋಡಿದರೆ ಬರೀ ಜಾತೀಯತೆಯ ಆಧಾರದ ಮೇಲೆ ಇದುವರೆಗೂ ಅಗುತ್ತಲಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗಲೂ ಹಾಗೆಯೇ ಆಗುತ್ತಿದೆ.

2-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ನಗರ).—ಈಗಲೂ ಹಾಗೆಯೇ ಆಗುತ್ತಿದೆಯೇ ?

ಶ್ರೀ ವಿ. ಎಂ. ದೇವ್.—ಈ ವಿಷಯವೆಲ್ಲಾ ಹೋಗಬೇಕಾದರೆ, ಸರಿಯಾದ ವಾತಾವರಣವನ್ನು ಉಂಟುಮಾಡುವುದರಲ್ಲಿ, ನಾವೆಲ್ಲಾ ಸಹಕರಿಸಬೇಕೆಂದು ನನಗನ್ನಿಸುತ್ತದೆ. ನಾವು ಕರ್ನಾಟಕವನ್ನು ಮಾಡಿದರೆ ಸರಿಯಾದ ವಾತಾವರಣ ಬರಲಿಕ್ಕೆ ಸಹಕಾರಿಯಾಗುತ್ತದೆಂದು ನಾನು ಭಾವಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರ ಹಿನ್ನೆಲೆ ಸ್ವಲ್ಪ ಹೇಳಿ ನೋಡೋಣ.

ಶ್ರೀ ವಿ. ಎಂ. ದೇವ್.—ಇದರ ಪರಿಣಾಮವೇನಾಗಿದೆಯೆಂಬದನ್ನು ನೋಡಿ, ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರಿದ್ದಾರೆ. ಮಂತ್ರಿಮಂಡಳದವರೂ ಇದ್ದಾರೆ. ಎಲ್ಲರ ಮೇಲೆಯೂ ಜಾತಿ ಜಾತಿ ಎಂಬ ಒಂದು ತೆರದ ನೆರಳು ಬಿದ್ದು ಯಾರೊಬ್ಬರೂ ಇಂದು, ಎಷ್ಟೇ ಸೂಕ್ತ ಸಲಹೆಗಳು ತಮ್ಮಲ್ಲಿದ್ದರೂ ಕೂಡ ಅದನ್ನು ಕೊಡುವುದು ಕಷ್ಟವಾಗಿದೆ. ಮಂತ್ರಿಗಳೂ ಕೂಡ ಎಷ್ಟೋ ಸಂದರ್ಭಗಳಲ್ಲಿ ತಮ್ಮ ಕ್ಯಾಬಿನೆಟ್ಟಿನಲ್ಲಿ ಮಾನ್ಯ ಸದಸ್ಯರು ಹೇಳುವುದನ್ನು ಪೂರ್ಣವಾಗಿ ಗ್ರಹಿಸಿ ಕಾರ್ಯಗತ ಮಾಡುವುದಕ್ಕಾಗುತ್ತಿಲ್ಲವೆಂದು ನನಗೆ ತೋರುತ್ತದೆ.

ಆದ್ದರಿಂದ ನನಗೆ ತೋರುವುದಿಷ್ಟು. ಹಾಗೂ ಸರ್ವಸದಸ್ಯರಲ್ಲಿ ನನ್ನ ಮನವಿಯೂ ಇಷ್ಟು: 'ಕರ್ನಾಟಕ ರಾಜ್ಯ ಬೇಡ' ಎನ್ನುವುದಕ್ಕೆ ಕಾರಣ ಇಲ್ಲಿ ಜಾತಿಯ ಸೋಂಕು ಇರುವುದರಿಂದ. ಆದ್ದರಿಂದ ಜಾತಿಯ ಮನೋಭಾವನೆಯನ್ನು ಬದಿಗೊತ್ತಿ ದೇಶದ ಸರ್ವತೋಮುಖ ಬೆಳವಣಿಗೆಯ ಬಗ್ಗೆ ಎಲ್ಲರೂ ದೊಡ್ಡ ಮನಸ್ಸು ಮಾಡಿ ವಿಶಾಲ ದೃಷ್ಟಿಯಿಂದ ಈ ನಿರ್ಣಯಕ್ಕೆ 'ಹೂ' ಎನ್ನಬೇಕೆಂದು ನಾನು ಹೇಳುತ್ತೇನೆ. ಇದನ್ನೀಗ ಮಾಡದೆ, ಹೀಗೇ ನಡೆದುಕೊಂಡು ಹೋಗಲು ಬಿಟ್ಟರೆ ಇದರಿಂದಾಗಿ ನಮ್ಮ ದೇಶಕ್ಕೆ ಬಹಳ ಕೆಡುಕಾಗುತ್ತದೆ. ಮಂತ್ರಿಮಂಡಳವೂ ಕೇರಳದ ಮಂತ್ರಿಮಂಡಳ ಹೋದಂತೆ ಹೋಗುತ್ತದೆ. ಆದ್ದರಿಂದ ಸರ್ಕಾರದವರೂ ಮತ್ತು ಮಾನ್ಯಸದಸ್ಯರೂ ಎಲ್ಲರೂ ಸೇರಿ ದೊಡ್ಡ ಮನಸ್ಸು ಮಾಡಿ ಇದಕ್ಕೆ 'ಅಸ್ತು' ಎನ್ನಿ. ಈ ಸಂದರ್ಭದಲ್ಲಿ ಪಂಡಿತ್ ಜವಹರಲಾಲ್ ನೆಹರೂರವರು ಹೇಳಿದ ಒಂದು ಮಾತು ಹೇಳುವುದು ಸಮಂಜಸವಾಗಿರುತ್ತದೆ. "Success comes to those who dare act. It seldom goes to the timid" Do not be actuated by these narrow communal outlooks...

ಹಾಗಿಲ್ಲದೆ ಜಾತೀಯತೆಯ ಹೇಯ ವರ್ತನೆ, ಮತ್ತು ಅಸಹ್ಯ ಭಾವನೆಗಳು, ಜಾತ್ಯಾತೀತ ಮತ್ತು ಸಮಾಜವಾದ ತತ್ವಗಳಿಗೆ ತದ್ವಿರುದ್ಧ ಭಾವನೆಗಳ ಅತಿರೇಕಗಳಿಗೆ ಎಡೆ ಕೊಟ್ಟು ದೇಶದ ಭಾವೈಕ್ಯತೆಗೆ ಧಕ್ಕೆ ಬಂದು ಮಾನ್ಯ ಸದಸ್ಯರ ಯೋಚನಾಶಕ್ತಿ ಮತ್ತು ಕ್ರಿಯಾತ್ಮಕ ಶಕ್ತಿಗಳು ಅಲ ಮತ್ತು ತುಚ್ಛ

(ಶ್ರೀ ವಿ. ಎಂ. ದೇವ್)

ವಾದ ಜಾತೀಯತೆಯಲ್ಲಿ ಮುಳುಗಿಹೋಗಿ ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಧಕ್ಕೆ ಯಾಗಿದೆ.

Sri S. M. KRISHNA.—On a point of order, Sir. It is very simple and it confines to a ruling already given by the Chair. When a member begins his speech in Kannada and switches on to English...

(*Laughter*).

Sri V. M. DEO.—I would like to close my speech giving an extract from Dryden with a few alterations.

"Shall we who struck the British lion down for freedom shall we pay homage to wolfs of communalism and national disintegration bending our lowly knees before these two fell diseases. I say 'No' the first time and 'No' the last time. It shall be the knell of our parting from degradation and put our hands to work for our country's progress economically and culturally."

†ಶ್ರೀ ವಾಲಿ ಚನ್ನಪ್ಪ ಶಂಕರಪ್ಪ ಉರುಫ್ ಕಲ್ಲೂರ್ (ಸಂಪಗಾನ್ I).—ಅಧ್ಯಕ್ಷರೇ, ಭಾಷಾವಾರು ತಳ ಹದಿಯ ಮೇಲೆ ಪ್ರಾಂತ್ಯ ವಿಭಜನೆ ಮಾಡಬೇಕೆಂಬ ತತ್ವವನ್ನು ಅನೇಕ ದಿವಸಗಳಿಂದ ನಾವು ಒಪ್ಪಿ ಕೊಂಡಂತಾಗಿದೆ. ಏಕೆಂದರೆ, ಯಾವಾಗ ಕಾನೂನು ಭಂಗ ಚಳವಳಿ ನಡೆಯುತ್ತಿತ್ತೋ ಆ ಕಾಲದಲ್ಲೇ ಈ ಬಗ್ಗೆಯೂ ಒಂದು ದೊಡ್ಡ ಹೋರಾಟವೇ ನಡೆಯು ತ್ತಿತ್ತು. ಅನಂತರ ಲಾಹೋರ್ ಕಾಂಗ್ರೆಸ್ ಅಧಿ ವೇಶನದಲ್ಲಿ ಈ ವಿಷಯದ ಮೇಲೆ ಒಂದು ಠರಾವು ಕೂಡ ಬಂದು ಭಾಷಾವಾರು ತಳಹದಿಯ ಮೇಲೆ ರಾಜ್ಯಗಳ ಪುನರ್ವಿಂಗಡಣೆಯಾಗಬೇಕೆಂದು ತೀರ್ಮಾನ ವಾಯಿತು.

ಈ ಪ್ರಕಾರ ದೇಶದ ಎಲ್ಲಾ ಕಡೆಯಲ್ಲೂ ಕಾಂಗ್ರೆ ಸ್ಸಿನವರು ಈ ತತ್ವವನ್ನು ಒಪ್ಪಿಕೊಂಡರು. ಅಲ್ಲಿಂದಾಗಿ, ಈ ಠರಾವನ್ನೇ ಇಟ್ಟುಕೊಂಡು 1924 ನೆಯ ಇಸವಿಯಲ್ಲಿ ಬೆಳಗಾವಿನಲ್ಲಿ ಇನ್ನೊಂದು ಠರಾವಾಗಿ ಈ ಭಾಗವೆಲ್ಲಾ ಸೇರಿ ಕರ್ನಾಟಕ ಪ್ರಾಂತವಾಗಬೇಕೆಂದು ಚಳವಳಿ ಶುರುವಾಯಿತು. ಆ ವೇಳೆಯಲ್ಲಿ ಎಲ್ಲರೂ, ಎಲ್ಲ ಜನರೂ, ಎಲ್ಲ ಸಾಹಿತಿ ಗಳೂ ಈ ತತ್ವವನ್ನು ಒಪ್ಪಿಕೊಂಡಿದ್ದರು. ಆದರೆ, ಅದರಂತೆ ಚಳವಳಿ ಮಾಡುತ್ತಿದ್ದಾಗ ನಮಗೆ ಗೊತ್ತಾಯಿತು, 'ಈಗ, ಅಂದರೆ 1930 ರಿಂದ 1940 ರವರೆಗೆ—ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೇವೆ. ದೇಶದ ಸ್ವಾತಂತ್ರ್ಯ ಬಂದ ಮೇಲೆ ಪ್ರಾಂತ್ಯ ವಿಂಗಡಣೆ ಮಾಡುವುದು ಒಳ್ಳೆ ಯದು' ಎಂದು. ಆದರೂ ಕರ್ನಾಟಕ ಪ್ರಾಂತ್ಯ ಮೊದಲೇ ಆಗಬೇಕೆಂದು ಕೆಲವರ ಆಸೆಯಾಗಿತ್ತು. ಬ್ರಿಟಿಷರೂ ಕೂಡ ಇದನ್ನು ಮೊದಲೇಮಾಡುತ್ತಿದ್ದರು. ಆದರೆ ನಮ್ಮಲ್ಲಿ ಕೆಲವು ಅಡಚಣೆಗಳಿದ್ದವು. ನಮ್ಮಿಂದ ಒಡೆದುಹೋದ ಅನೇಕ ಜಿಲ್ಲೆಗಳು ಬೇರೆ ಬೇರೆ ಸರ್ಕಾ ರಗಳ ಆಡಳಿತದಲ್ಲಿದ್ದುವು. ಮೂರು ಜಿಲ್ಲೆಗಳು ಹೈದರಾಬಾದಿನಲ್ಲೂ, ಎರಡು ಜಿಲ್ಲೆಗಳು ಮದ್ರಾಸಿ ನಲ್ಲೂ, ಬೊಂಬಾಯಿನಲ್ಲಿ ಕೆಲವೆಂತಲೂ—ಈ ಪ್ರಕಾರ 19 ಜಿಲ್ಲೆಗಳೂ ಬೇರೆ ಬೇರೆ ಸರ್ಕಾರಗಳ ಅಧೀನದ ಲ್ಲಿರುವುದರಿಂದ, ಆಗ ಕರ್ನಾಟಕ ಮಾಡುವುದು ಒಳ್ಳೆ ಯದಲ್ಲ, ದೇಶಕ್ಕೆ ಮೊದಲು ಸ್ವಾತಂತ್ರ್ಯ ಬರಲಿ ಆಮೇಲೆ ಕರ್ಣಾಟಕವನ್ನು ಮಾಡುವುದು ಒಳ್ಳೆಯದು ಎಂದು ಅಭಿಪ್ರಾಯಕ್ಕೆ ಬಂದು, ಆ ಪ್ರಶ್ನೆಯನ್ನು ಅಲ್ಲಿಗೇ ಬಿಟ್ಟೆವು.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ.—ಹತ್ತೊಂಭತ್ತು ಜಿಲ್ಲೆ ಗಳು ಎಲ್ಲಿ ಸೇರಿ ಒಂದಾಗಿತ್ತು? ಹತ್ತೊಂಭತ್ತು ಜಿಲ್ಲೆಗಳು ಯಾವುವು!

ಶ್ರೀ ವಾಲಿ ಚನ್ನಪ್ಪ.—ಇನ್ನೂ ಬರಬೇಕಾಗಿರು ವುದು ಎಷ್ಟೋ ಇವೆ. ಅವೆಲ್ಲಾ ಸೇರಿದರೇ ಕರ್ನಾ ಟಕ. ಈಗಲೂ ಕೂಡ ಅದಕ್ಕಿಂತ ಕಮ್ಮಿಯಿರುವು ದನ್ನು ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಎಂದೆಲ್ಲಾ ಜನ ಹೇಳುತ್ತಾರೆ. ಆದರೆ ಕರ್ನಾಟಕ ವೆಂಬುದು ಮಾತ್ರ ಎಲ್ಲಿ ಇದೆಯೋ ಗೊತ್ತಿಲ್ಲವೆನ್ನುತ್ತಿ ದ್ದಾರೆ! ಮೈಸೂರು ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮುಂಬಯಿ ಕರ್ನಾಟಕ ಎನ್ನುವಾಗ ಕರ್ನಾಟಕವೇ ಇಲ್ಲವೇ? ಅದ್ದರಿಂದಲೇ ನಾನೀಗ ಹೇಳುತ್ತಿರುವುದು. ಈ ಕಾರಣದಿಂದಲೇ ಅಂದು ನಾವು ಸ್ವರಾಜ್ಯ ಬಂದ ಮೇಲೆ ಪ್ರಾಂತೀಕರಣ ವಿಷ ಯವನ್ನು ತೆಗೆದುಕೊಳ್ಳಬೇಕೆಂದು ಹೇಳಿದಂತೆ, ಪ್ರಾಂತ್ಯಕ್ಕಾಗಿ ಹೋರಾಟ ನಡೆಸಬೇಕೆಂದು ಹೇಳಿ ದಾವಣಗೆರೆಯಲ್ಲಿ ಮೊದಲನೆಯ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ ಆಯಿತು. ಅದಾಗಿ, ಬೆಂಗಳೂರಿನಲ್ಲಿ ಕ್ರೆಸೆಂಟ್ ಭವನದಲ್ಲಿ ಪರಿಷತ್ತು ಕೂಡಿತು. ಈ ಪ್ರಕಾರ ಯಾವ ವೇಳೆಯಲ್ಲೂ ಅಖಂಡ ಕರ್ನಾಟಕವಾಗಬೇಕೆಂಬ ಚಳವಳಿ ನಡೆಯುತ್ತಲೇ ಇತ್ತು. ಇದಕ್ಕಾಗಿ ನಮ್ಮೆಲ್ಲರನ್ನೂ ಕರೆದುಕೊಂಡು ಹೋಗಿ ಜೈಲಿಗೆ ಹಾಕಿದರು. ಆ ಸಂದರ್ಭದಲ್ಲಿ ಯಾರ್ಯಾರು ಬಡಿದಾಡಿದರೋ ಗೊತ್ತಿಲ್ಲ. ನಾವೆ ಲ್ಲರೂ ಸುಪ್ರೀಂ ಕೋರ್ಟಿಗೆ ಹೋಗಿ ಬಿಡುಗಡೆಯಾಗಿ ಬಂದೆವು. ಒಟ್ಟಿನಲ್ಲಿ ಪ್ರಾಂತ್ಯಾಭಿಮಾನದಿಂದ ಎಲ್ಲರೂ ಯಾವತ್ತೂ ಹೊಡೆದಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷವೇ ಅಲ್ಲ, ಎಲ್ಲ ಪಕ್ಷಗಳೂ ಅಖಂಡ ಕರ್ನಾಟಕ ಕ್ಕಾಗಿ ಶ್ರಮಿಸಿದರು. ಇಷ್ಟೆಲ್ಲಾ ಆದಮೇಲೆ ಬಳ್ಳಾರಿ ಜಿಲ್ಲೆ ಮತ್ತು ಮಂಗಳೂರು ಜಿಲ್ಲೆ ಈ ಪ್ರಾಂತ್ಯಕ್ಕೆ ಸೇರಿತು. ಬಳ್ಳಾರಿ, ಸಿರಗುಪ್ಪ, ಹೊಸಪೇಟೆ ತಾಲ್ಲೂಕ ಗಳು ಆಂಧ್ರ ಪ್ರಾಂತ್ಯಕ್ಕೆ ಕೊಡಬೇಕೆಂದಿ ದ್ದಾಗ ಕರ್ನಾಟಕಕ್ಕೆ ಅಂದರೆ ಮೈಸೂರಿಗೇ ಕೊಡ ಬೇಕೆಂದು ನಾವೆಲ್ಲಾ ಮೈಸೂರಿನ ಸಲುವಾಗಿ ಹೋರಾಟ ಮಾಡಿದೆವು. ಏಕೆಂದರೆ, ಮುಂದೆ ಕರ್ನಾ ಟಕ ಪ್ರಾಂತ್ಯ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ಆಧಾರದಮೇಲೆ ಅಖಂಡ ಕರ್ನಾಟಕ ಪ್ರಾಂತ್ಯ ವಾಗಬೇಕೆಂದು ಹಂಪೆಯಲ್ಲಿ ಪರಿಷತ್ತು ಮಾಡಿ ಚಳ ವಳಿ ನಡೆಯಿತು. ಅದರಿಂದಾಗಿ ಅನೇಕ ಮಿತ್ರರು ಜೈಲಿಗೆ ಹೋದರು. ಗಾಂಧಿ ತತ್ವದ ಪ್ರಕಾರ ಸತ್ಯಾಗ್ರಹ ಮಾಡಿ ಹೀಗೆ ಜೈಲಿಗೆ ಹೋದ 14-15 ದಿವಸಗಳಾದ ಮೇಲೆ ನಾವೆಲ್ಲರೂ ಮೈಸೂರನ್ನು ಸೇರುವುದಕ್ಕೆ ಅವಕಾಶವಾಯಿತು. ಹೀಗೆ ಮೈಸೂ ರಿಗೆ ಸೇರಿದ ಮೇಲೆ, ಆ ನಾಲ್ಕು ಜಿಲ್ಲೆಗಳನ್ನೇ ಕರ್ನಾ

ಟಕವೆನ್ನುವುದಾಗಲಿ, ಈ ಎಂಟು ಜಿಲ್ಲೆಗಳನ್ನೇ ಬೇರೆ ಹೆಸರಿಂದ ಕರೆಯುವುದಾಗಲೀ ಸರಿಯಲ್ಲ. ಈ 19 ಜಿಲ್ಲೆಗಳನ್ನು ಕರ್ಣಾಟಕವೆಂದೇ ಕರೆಯಬೇಕೆಂದು ಬಹುಮಂದಿ ಆಸೆಪಡುತ್ತಾರೆ. ತಾವು ಹೇಳಬಹುದು, ಮೈಸೂರಿನಲ್ಲಿ ಬಹಳ ಜನಕ್ಕೆ ಇದು ನೋವನ್ನುಂಟು ಮಾಡುತ್ತದೆ ಎಂದು...

೧೯ ಜಿಲ್ಲೆಗಳು ಎಲ್ಲಕ್ಕೂ ಕೂಡ ಒಂದು ಕರ್ನಾಟಕ ಪ್ರಾಂತ್ಯ ಎಂದರೆ ಸಮಂಜಸವಾಗುತ್ತದೆ ಎನ್ನುವ ಅಭಿಪ್ರಾಯದವರು ಬಹಳ ಮಂದಿ ಇದ್ದಾರೆ, ತಾವೂ ಅನ್ನಬಹುದು, ಮೈಸೂರೇ ಇರಲಿ ಎಂದು ಅನ್ನುವವರು ಬಹಳ ಮಂದಿ ಇದ್ದಾರೆ. ಎಂದು ನಾವು ಅನ್ನುವುದಾದರೂ ಸ್ವಲ್ಪ ದಯದಿಂದ ತಾವು ನೋಡಿರಿ. ತಮ್ಮ ಕಡೆಗೆ ನಾವು ಏಕೆ ಸೇರಿದೆವು? ನೀವು ಒಳ್ಳೊಳ್ಳೆಯ ಜನರು ಎಂದು ತಿಳಿದು ನಾವೆಲ್ಲರೂ ನಿಮ್ಮೊಡನೆ ಕೂಡಿದೆವು. ಕೂಡಿದ ಮೇಲೆ ನಿಮ್ಮನ್ನು ಕೇಳುತ್ತಾ ಇದ್ದೇವೆ. ಈಗ ರಾಗ ಎಳೀಬ್ಯಾಡರಿ. ಮೊದಲು ನಿಮ್ಮನ್ನು ಕೂಡಿದೆವು. ಮೈಸೂರೇ ಆಗಲಿ ಅಂತ ಒಪ್ಪಿದೆವು ಈಗ ತಂಟೆಮಾಡಿ, ಒಡದಾಡಿ ಒಂದು ಮಗುವನ್ನು ಇಬ್ಬರು ಅದು ನನ್ನ ಮಗು, ನನ್ನ ಮಗು ನನಗೆ ಕೊಡಿ ನನಗೆ ಕೊಡಿ ಎಂದು ಕಾದಾಡುವಂತೆ ನಮ್ಮೊಡನೆ ಕಾದಾಡಬೇಡಿ. ನಿಮ್ಮ ಕಡೆ ಒಪ್ಪಿದೆವು ಸೇರಿದೆವು. ನೀವು ಒಪ್ಪದೇ ಸೇರಿದೆವು ಎಂಬ ಮಾತು ಅನ್ನಬೇಡಿರಿ. ನಿಮ್ಮ ಹೃದಯ ತೆಗೆದು ನೋಡಿರಿ. ನಿಮ್ಮಲ್ಲಿ ಮತ್ತೇನೂ ಇಚ್ಛೆ ಇಲ್ಲ. ಒಂದು ಭಾಷೆಯ ತಳಹದಿಯ ಮೇಲೆ ಒಂದು ರಾಜ್ಯ ಕಟ್ಟಬೇಕೆಂದಾಗ, ಸೌಹಾರ್ದದಿಂದ ಬಾಗಿಲನ್ನು ತೆರೆದು ಭಾಷೆಯ ತಳಹದಿಯ ಮೇಲೆ ಪ್ರಾಂತ್ಯವಾದರೆ ಬಹಳ ದಿವಸ ಬದುಕುತ್ತೇವೆ, ಬಾಳುತ್ತೇವೆ ಎಂಬ ಮಾತನ್ನು ಒಪ್ಪಿಕೊಳ್ಳಿ. ಭಾಷೆಯ ಆಧಾರದ ಮೇಲೆ ಪ್ರಾಂತ ರಚನೆಯಾಗಬೇಕೆಂದು ಇಬ್ಬರೂ ಒಪ್ಪಿ. ಕೂಡಿಯೇ ಕೂಡುತ್ತೇವೆ ಎಂದು ಒಪ್ಪಿದಮೇಲೆ ನೀವೂ ನಾವೂ ಅಣ್ಣತಮ್ಮಂದಿರು ಕರ್ನಾಟಕ ಪ್ರಾಂತ ಮಾಡುವವರು ನಾವು. ಕರ್ನಾಟಕ ಮಾಡುವ ಸಲುವಾಗಿ ತಾವು ಸ್ವಲ್ಪ ದಯಾದೃಷ್ಟಿಯಿಂದ ನೋಡಿರಿ. ಮೈಸೂರನ್ನು ಮಾಡುತ್ತೇವೆ ಎಂದರೆ ಮೈಸೂರಿನ ಹೆಸರೂ ಒಳ್ಳೆಯದೇ, ಕೆಟ್ಟದ್ದೇನೂ ಇಲ್ಲ. ಒಳ್ಳೆಯ ಒಬ್ಬ ಬುದ್ಧಿವಂತನಿದ್ದರೆ ಅವನಿಗೆ ಬುದ್ಧಿವಂತನಿದಾನೆ ಅನ್ನುತ್ತಾರೆ. ಕರ್ನಾಟಕ ಪ್ರಾಂತದಲ್ಲಿ ಎರಡು ಕೋಟಿ ಮಂದಿ ಇದ್ದಾರೆ. ಇದರೊಳಗೆ ಒಂದು ಕೋಟಿ ಮಂದಿ ಮೈಸೂರಿನವರು ಇದ್ದಾರೆ. ಈ ಒಂದು ಕೋಟಿ ಜನರಲ್ಲಿ ಕರ್ನಾಟಕ ಪ್ರಾಂತ ಆಗಲಿ ಎನ್ನುವವರು ೫೦ ಸಾವಿರ ಜನರು ಇದ್ದಾರೆ. ಅದರಲ್ಲಿ ನಮ್ಮ ಪ್ರಾಂತದಲ್ಲಿ ಎಲ್ಲೆಲ್ಲೂ ಚಳುವಳಿ ಮಾಡದವರು. ಈಗ ಮಾತನಾಡಿದವರೂ ಕೂಡ ಮೈಸೂರಿನವರೇ. ಕರ್ನಾಟಕ ಆಗಲೀ ಅನ್ನುವಂಥ ಬಹಳ ಒಳ್ಳೆಯ ಜನರು, ಕರ್ನಾಟಕ ಪ್ರಾಂತ ಆಗಲಿ ಎಂದು ಬಹಳ ಮಂದಿ ಮಾತನಾಡುವವರಿದ್ದಾರೆ. ಇದನ್ನು ಕರ್ನಾಟಕ ಪ್ರಾಂತ ಅಂತ ಮಾಡಿರಿ. ಮತ್ತು ಸುಭದ್ರವಾದ ಸರ್ಕಾರ ಮಾಡಿರಿ. ಮೈಸೂರು ಅಂತೆ ಇದ್ದಾಗ ಅವನು ಆ ಕಡೆಯವನು, ಇವನು ಈ ಕಡೆಯವನು ಎನ್ನುವಂಥಾ ಭಾವನೆ ಎಂದಿಗೂ ಹೋಗುವುದಿಲ್ಲ. ಈಗ ಅನೇಕ ಪಕ್ಷಗಳು ಅಥವಾ ಜಾತಿಗಳನ್ನು ಕಲೆತು ಕೂಡಿಸುವಂಥಾದ್ದನ್ನು ನೋಡುತ್ತಾ ಇದ್ದೇವೆ. ಅದಕ್ಕೆ ಚಳುವಳಿ ಮಾಡುತ್ತಾ ಇದ್ದಾರೆ. ಹೀಗಿರುವಾಗ ಮೈಸೂರು ಬೇಡ, ಕರ್ನಾಟಕವು ಬೇಡ ಅಂತ ಹೇಳಿ ಇಲ್ಲಿಯೂ ಇಲ್ಲ, ಅಲ್ಲಿಯೂ ಇಲ್ಲದಂತೆ ಮಾಡಿ ಮತ್ತೆ ಈ ಭಾಷಾವಾರು ಪ್ರಾಂತವಾಗಿರುವುದಕ್ಕೆ ಭಂಗ ತರುವಂಥ ಕೆಲಸ ಮಾಡಬೇಡಿ. ಕರ್ನಾಟಕ ಪ್ರಾಂತ ಆಗಬೇಕೆನ್ನುವವರೂ ನಿಮ್ಮ ಕಡೆಯೂ ಇದ್ದಾರೆ ಸ್ವಾಮಿ. ನೀವು ಹೇಗೆ ಮೈಸೂರು ಆಗಬೇಕೆಂದು ಕೂಗು ಹಾಕುತ್ತೀರೊ ಅದೇ ರೀತಿ ಕರ್ನಾಟಕ ಮಾಡಿರಿ ಎಂದು ಕೂಗು ಹಾಕುವವರು ನಮ್ಮವರೂ ಇದ್ದಾರೆ. ನಾಳೆ ಈ ವಿಷಯ ಪರೀಕ್ಷೆ ಮಾಡುವುದಕ್ಕೆ ಹೋಗಬೇಡಿ. ಸತ್ಯಾಗ್ರಹ ಮಾಡತಕ್ಕ ಪ್ರಸಂಗ ಬಂದರೆ ಅದನ್ನು ನಿಂದರಿಸಲಿಕ್ಕೆ ನಿಮಗೂ ಸಾಧ್ಯವಿಲ್ಲ ನಮಗೂ ಸಾಧ್ಯವಿಲ್ಲ. ಹೊಡಿತ ಹೊಡಿಯರಿ ಕಾಂಗ್ರೆಸ್‌ನವರನ್ನು ಮುಗಿಸಿರಿ ಎನ್ನುವ ಜನ ಬಹಳ ಜನರು ಇದ್ದಾರೆ. ಆದ್ದರಿಂದ ದಯಮಾಡಿ ಈ ವಿಷಯ ಪರೀಕ್ಷೆ ಮಾಡಬೇಡಿ, ದೊಡ್ಡ ಮನಸ್ಸು ಮಾಡಿ. ಭಾಷೆಯ ಆಧಾರದಮೇಲೆ ಪ್ರಾಂತ ರಚನೆಯಾಗಿದೆ. ಅಂಥಾದ್ದರಲ್ಲಿ ದೊಡ್ಡ ಮನಸ್ಸು ಮಾಡಿ, ಅಣ್ಣತಮ್ಮಂದಿರು ಒಬ್ಬರನ್ನೊಬ್ಬರು ಕೂಡಿಕೊಂಡು ಒಂದು ಪ್ರಾಂತವಾದರೆ ಸುಂದರವಾಗಿರುತ್ತದೆ. ವಿಶಾಲವಾದ ಮೈಸೂರನ್ನು ಅಖಂಡ ಕರ್ಣಾಟಕ ಎಂಬ ಒಂದು ದೊಡ್ಡ ಪ್ರಾಂತವನ್ನಾಗಿ ಮಾಡಿ. ಒಂದು ಸಾರಿ ಭಾಷಾವಾರು ಪ್ರಾಂತವಾಗಬೇಕೆನ್ನುತ್ತೀರಿ. ಇನ್ನೊಂದು ಸಾರಿ ಬೇಡವೆನ್ನುತ್ತೀರಿ ಎಂದು ನಮ್ಮ ಮಿತ್ರರು ಕೇಳಿದರು. ಆ ರೀತಿ ನಾವು ಎಂದೂ ಹೇಳಿಲ್ಲ.

ಶ್ರೀ ಅಂಗಡಿ ಚನ್ನಬಸಪ್ಪ.—ನೀವು ಈ ಚಳುವಳಿಯಲ್ಲಿ ಜೈಲಿಗೆ ಹೋದಾಗ ಯಾವ ಸರ್ಕಾರ ಇತ್ತು? ಕಾಂಗ್ರೆಸ್ ಸರ್ಕಾರವೇ? ಯಾವುದಿತ್ತು?

ಶ್ರೀ ವಾಲಿ ಚನ್ನಪ್ಪ.—ಕಾಂಗ್ರೆಸ್ ಸರ್ಕಾರ ಇರಲಿ, ಮತ್ತಾವ ಸರ್ಕಾರವೇ ಇರಲಿ. ನಾನು ಸದಾ ಕಾಂಗ್ರೆಸ್‌ನವನೇ. ಕಾಂಗ್ರೆಸ್‌ನವರಾದಮೇಲೆ ಅಖಂಡಕರ್ನಾಟಕ ಪ್ರಾಂತವಾಗಬೇಕೆಂಬ ಅಭಿಮಾನದಿಂದ ನಾವೂ ನೀವೂ ಕೂಡಿಯೇ ಇದ್ದೇವೆ. ನಾವೆಲ್ಲರೂ ಕೂಡಿ ಚಳುವಳಿಯಲ್ಲಿ ಭಾಗವಹಿಸಿದಮೇಲೆ ಕರ್ನಾಟಕ ಸಿಕ್ಕಿತು. ಎಲ್ಲರೂ ಕೂಡ ಈಗ ಶಾಂತರೀತಿಯಿಂದ ಒಬ್ಬರನ್ನು ನೋಡುತ್ತಾ ಇದ್ದೇವೆ, ಒಬ್ಬರು ಹೇಳಿದ್ದನ್ನು ಒಬ್ಬರು ಕೇಳುತ್ತಾ ಇದ್ದೇವೆ. ಶಾಂತಿಯಿಂದ ಇದ್ದೇವೆ. ಹೀಗಿರುವಾಗ ಮಾರಿ ಕಪ್ಪುಮಾಡಿಕೊಳ್ಳುವಂಥಾ ಪರಿಸ್ಥಿತಿ ತರಬ್ಯಾಡ್ರಿ. ನಾವು ಕರ್ನಾಟಕ ಅಂದರೆ ಮತ್ತೊಬ್ಬರು ಮತ್ತಿನ್ನೇನಾದರೂ ಹಾಕ್ರಿ ಅಂತ ಕೆಲವು ಸದಸ್ಯರು ಕೇಳಿದರು. ಅದಕ್ಕೆ ಯಾರೂ ಒಪ್ಪಲಿಲ್ಲ. ಮೈಸೂರೇ ಇರಲಿ, ಅಥವಾ ಕರ್ನಾಟಕ ಅಂತಲೇ ಇರಲಿ ಎಂದು ಅನ್ನುತ್ತಾ ಇದ್ದಾರೆ. ಇಂಥಾ ಅನಿವಾರ್ಯ ಪ್ರಸಂಗ ಇದೆ. ಅಖಂಡ ಕರ್ನಾಟಕ ಅನ್ನುವುದಕ್ಕಿಂತ ಕರ್ನಾಟಕ ಪ್ರಾಂತ ಅನ್ನುವುದನ್ನು ಒಪ್ಪಿರಿ. ಅಣ್ಣತಮ್ಮಂದಿರು ಎಲ್ಲಾ ಪ್ರಾಂತದಿಂದ ಬಂದಿದ್ದೇವೆ. ಇದನ್ನು ಯಾವ ದೃಷ್ಟಿಯಿಂದ ನೋಡುತ್ತೇವೆ, ಏಕೆ ದೈನ್ಯದಿಂದ ಕೇಳುತ್ತೇವೆ ಎಂಬುದನ್ನು ನಿಮ್ಮ ಮನಸ್ಸಿನಲ್ಲಿ ಪರೀಕ್ಷೆಮಾಡಿ ನಿಮ್ಮ ಪೂರ್ಣ ಒಪ್ಪಿಗೆಯಿಂದ ಈ ಕರ್ನಾಟಕ ಪ್ರಾಂತ ರಚನೆ ಮಾಡಿರಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-II).—ಅಧ್ಯಕ್ಷರೇ, ನಿಮ್ಮ ಸೂಚನೆಯನ್ನು ಸಂಪೂರ್ಣ ಪರಿಶೀಲಿಸಿ ನಾನು ಇಲ್ಲಿ ಮಾತನಾಡಲು ಬಯಸುತ್ತೇನೆ. ನಿಜವಾಗಿಯೂ ಈ ಪ್ರಶ್ನೆಮಟ್ಟಿಗೆ ನಾವು ಹೆಚ್ಚು ವಿಚಾರವಂತರಾಗಬೇಕಲ್ಲದೇ ವಿಕಾರವಂತರಾಗಬಾರದು. ಇಂಥಾ ಒಂದು ಮಹತ್ವದ ಪ್ರಶ್ನೆ ಮಟ್ಟಿಗೆ ತಾತ್ವಿಕವಾದ ಬೇಗೆ ಆರಿಸಿ, ತಾತ್ವಿಕ ಚಂಚಲಾಟದ ಬೆಂಕಿ ಆರಿಸಿ, ಸ್ವಚ್ಛಂದವಾಗಿ ಪ್ರತಿಯೊಬ್ಬನೂ ಚರ್ಚೆ ಮಾಡುವಂಥ ನಿರ್ಣಯ ಇದು ಆಗಿದೆ. ಇಂಥಾ ಒಂದು

(ಶ್ರೀ ಎ. ಕೃಷ್ಣಶೆಟ್ಟಿ)

ತಾತ್ವಿಕ ಪ್ರಶ್ನೆಯಮೇಲೆ ನಮ್ಮ ನಿಮ್ಮ ಪರೀಕ್ಷೆ ಈ ದಿನ ಬಂದಿದೆ. ಆದ್ದರಿಂದ ನಾವೆಲ್ಲರೂ ವಿಚಾರವಂತರು. ತಾತ್ವಿಕ ದೃಷ್ಟಿಯಿಂದ ಈ ಪ್ರಶ್ನೆಯನ್ನು ನೋಡಿ ಬಗೆಹರಿಸಿ ಇದಕ್ಕೆ ಕರ್ನಾಟಕ ಪ್ರಾಂತ ಎಂದು ಹೆಸರಿಡಬೇಕೆಂದು ಕೇಳಿಕೊಳ್ಳಲು ನಾನು ನಿಮ್ಮ ಮುಂದೆ ಬಯಸುತ್ತೇನೆ.

ಶ್ರೀಮಾನ್ ಮುಕ್ಕಣ್ಣಪ್ಪನವರು ಕೆಂಡವನ್ನು ನುಂಗಿ ಮಸಿ ಕಾರುವುದು ಬೇಡ. ಇಲ್ಲಿ ನಮ್ಮ ಮುಂದಿರುವ ಪ್ರಶ್ನೆ ಯಾವುದೆಂದರೆ, ಕನ್ನಡ ಮಾತನಾಡುವ ಈ ರಾಜ್ಯಕ್ಕೆ ಯಾವುದು ಸರಿಯಾದ ಹೆಸರು ಎನ್ನುವುದು. ಇದನ್ನು ವಿಚಾರಮಾಡುವಾಗ, ಇಲ್ಲಿ ಸೇರಿರುವವರೆಲ್ಲರಲ್ಲಿಯೂ ನನ್ನದೊಂದು ಮುಖ್ಯ ವಿನಂತಿಯೇನೆಂದರೆ, ನಮಗೆ, ಮತ್ತು ನಮ್ಮ ಕನ್ನಡನಾಡಿಗೆ ಉಜ್ವಲವಾದ ರಾಷ್ಟ್ರೀಯ ಪರಂಪರೆ ಇದೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ನಾವೆಲ್ಲರೂ ಹೋರಾಡಿದ್ದೇವೆ. ಮಿಲ್ಟನ್ ಕವಿಯ ಕಣ್ಣು ಕುರುಡಾದಾಗ ಒಂದು ಸಾನೆಟ್ ಬರೆದಿದ್ದಾನೆ, ಅದರಲ್ಲಿ "They also serve who stand and wait" ಎಂದು ಬರೆದಿದ್ದಾನೆ. ಅದು ಜ್ಞಾಪಕಕ್ಕೆ ಬರುತ್ತದೆ. ನಾವೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಹರಿದು ಹಂಚಿಹೋಗಿದ್ದ ಕರ್ನಾಟಕ ಮತ್ತೆ ಒಂದಾಗುವುದಕ್ಕಾಗಿ ಪ್ರಯತ್ನ ಮಾಡಿದ್ದೇವೆ. ಕಾಸರಗೋಡಿನ ಪ್ರಶ್ನೆಯ ಬಗ್ಗೆಯೂ ನಾವು ಮಾತನಾಡದೆ ಕುಳಿತವರಲ್ಲ. ಅದು ಬೇರೆ ವಿಷಯ. ಈಗಿರುವ ಪ್ರಶ್ನೆಯೇನೆಂದರೆ, ಭಾಷಾ ತಳಹದಿಯಮೇಲೆ ಪ್ರಾಂತ ರಚನೆಯಾಗಿದೆ. ಇದಕ್ಕೂ ರಾಷ್ಟ್ರೀಯ ಆಂದೋಳನಕ್ಕೂ ಸಂಬಂಧವಿದೆ. ಕನ್ನಡ ಪ್ರಾಂತವಾಗಬೇಕು ಕನ್ನಡ ಜನರೆಲ್ಲರು ಒಂದಾಗಬೇಕು, ಒಂದಾಗುವ ರೀತಿಯಲ್ಲಿ ನಾವೆಲ್ಲರೂ ಪ್ರಯತ್ನಪಡಬೇಕು ಎಂದು ನಾವೆಲ್ಲರೂ ಕೆಲಸ ಮಾಡಿದೆವು. ಹೀಗಿರುವಾಗ, ಈಗ ಸಂಕುಚಿತ ದೃಷ್ಟಿಯಿಂದ ನೋಡಿ, ವಿಶಾಲ ದೃಷ್ಟಿಯಿಂದ, ಉದಾರತೆಯಿಂದ ಈ ವಿಷಯವನ್ನು ಪರಿಶೀಲನೆ ಮಾಡದೇಯಿದ್ದರೆ ಹೊರಗಿನವರು ನಮ್ಮನ್ನು ಏನೆಂದಾರು ? ಈ ಪ್ರಶ್ನೆಯನ್ನು ನಾವು ಎಷ್ಟೋ ಸಮಯದಿಂದ ತಂದಿದ್ದೇವೆ. 1956ನೆಯ ನವೆಂಬರ್ ಒಂದನೆಯ ತಾರೀಖು ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳೆಲ್ಲ ಕೂಡಿ ಒಂದಾದುವು. ಕೆಲವು ಬಿಟ್ಟು ಹೋಗಿವೆ ; ಹೊರಗಿನ ಪ್ರದೇಶವನ್ನು ಒಳಗೆ ತರುವುದೂ ಉಂಟು, ಒಳಗಿರುವುದನ್ನು ಹೊರಗೆ ಕಳುಹಿಸುವುದೂ ಉಂಟು ; ಇದು ಬೇರೆ ವಿಷಯ. ಅಂತೂ ಕನ್ನಡ ರಾಜ್ಯವಾಗಬೇಕೆಂದು ಒಂದು ದೃಷ್ಟಿಯಿಂದ ಕೆಲಸ ಮಾಡಿದೆವು, ಯಾವ ಉದ್ದೇಶವನ್ನಿಟ್ಟುಕೊಂಡು ಮಾಡಿದೆವು ? ವಾಸ್ತವ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡು ನೋಡಿದರೆ, ನಮ್ಮ ಪ್ರಾಂತದ ಜನಸಂಖ್ಯೆ 2 ಕೋಟಿ 23 ಲಕ್ಷವಿದೆ. ಇದರಲ್ಲಿ ಹೊರಗಿರುವ ಪ್ರದೇಶದ ಜನಸಂಖ್ಯೆ ಒಂದು ಕೋಟಿ 47 ಲಕ್ಷ......

Sri C. J. MUCKANNAPPA.—He is quoting incorrect figures.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅವರ ಲೆಕ್ಕ ಸರಿಯಾಗಿಲ್ಲವೆಂದರೆ, ಇವರಲ್ಲಿರುವ ಲೆಕ್ಕವನ್ನು ಹೇಳಲಿ.

Sri A. KRISHNA SHETTY.—I speak subject to correction.

ನಾವು ದಕ್ಷಿಣ ಕನ್ನಡ ಜಿಲ್ಲೆಯವರು ಅದುವರೆಗೂ ಹೊರಗಿದ್ದು ಗ್ರೇಟರ್ ಯೂನಿಯನ್ ಇಸವಿಯಲ್ಲಿ ಇಲ್ಲಿಗೆ ಸೇರಲು ಕಂಡ ಉದ್ದೇಶವೇನು ? ಬೃಹತ್ ಕರ್ಣಾಟಕವಾಗುತ್ತದೆಂದು ಹೇಳಿದಮೇಲೆ, ನಿಜವಾಗಿಯೂ ಕರ್ಣಾಟಕ ಪ್ರಾಂತವಾಗಿ, ಸರ್ವತೋಮುಖ ಅಭಿವೃದ್ಧಿಯಾಗಿ ನಮ್ಮ ಈ ಪ್ರದೇಶ ಬಾಕಿ ಪ್ರದೇಶಗಳಿಗೆ ಮಾದರಿಯಾಗಿ ಎಲ್ಲ ಜನತೆಯೂ ಒಂದೇ ರೀತಿ ಮುಂದೆ ಹೋಗುವ ಪರಿಸ್ಥಿತಿಯನ್ನುಂಟುಮಾಡಬೇಕೆಂದು ಬಯಸಿದೆವು. ಹೀಗಿರುವಾಗ ಈ ಒಂದು ಪ್ರಶ್ನೆಯನ್ನು ಇದುವರೆಗೂ ಪೂರೈಸುವುದಕ್ಕೆ, ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೆಂದರೇನು ? ಹೆಸರಿನಲ್ಲೇನಿದೆ ಎಂದು ಕೇಳಬಹುದು. ಇದಕ್ಕೆ ಮದಾಲಸೆಯು ತನ್ನ ಮಗನಿಗೆ ಹೆಸರಿಟ್ಟ ಕತೆಯನ್ನು ಹೇಳಬಹುದು. ಇಲ್ಲಿ ನಮ್ಮ ಮುಂದಿರುವ ಪ್ರಶ್ನೆಯೇನೆಂದರೆ, ನಮ್ಮ ದೇಶ ಹರಿದು ಹಂಚಿಹೋಗಿದ್ದ ಕನ್ನಡನಾಡು ಒಂದಾಗಿರುವಾಗ ಇದಕ್ಕೆ ಯಾವ ಹೆಸರಿನ್ನಡಬೇಕೆಂದು ನೋಡಬೇಕು. ಹೀಗಿರುವಾಗ ನಾವು ನಿಜವಾಗಿಯೂ ಈ ಒಂದು ಪ್ರಾಂತಕ್ಕೆ ಕರ್ಣಾಟಕ ಎಂಬ ಹೆಸರಲ್ಲದೆ ಬೇರೆ ಯಾವ ಹೆಸರನ್ನಿಡುವುದಕ್ಕೂ ಸಾಧ್ಯವಿಲ್ಲ. ಇದನ್ನು ಎಲ್ಲರೂ ಒಪ್ಪಬೇಕು. ಚರಿತ್ರೆಯ ಆಧಾರದಿಂದ ಹೇಳುತ್ತಿದ್ದೇವೆ. ಹನುಮನ ನಾಡೆಂದು ಹೇಳುವುದಿಲ್ಲವೆ ? ವಿಜಯನಗರ ರಾಜ್ಯದ ವೈಭವವನ್ನು ಕೊಂಡಾಡುತ್ತೇವೆ ; ಯಾವ ಪ್ರದೇಶದಿಂದ ಯಾವ ಪ್ರದೇಶದವರೆಗೆ ನಮ್ಮ ನಾಡು ಹರಡಿತ್ತೆಂದು ಹೇಳುತ್ತೇವೆ. ಇಂಥ ರಾಜ್ಯವನ್ನು ಕೊಂಡಾಡುವಾಗ, ವಿದ್ಯಾರ್ಥಿಗಳಾಗಿದ್ದಾಗ ನಮ್ಮ ಮನಸ್ಸು ಉಬ್ಬಿ, ನಿಜವಾಗಿ ಇಂಥ ಒಂದು ಕನ್ನಡ ನಾಡನ್ನು ಕಾಣಬೇಕೆಂಬ ಉತ್ಕಟವಾದ ಬಯಕೆ ಇತ್ತು.........

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೇ ಇವರು ಕಮ್ಯುನಿಸ್ಟ್ ಆದರು !

Mr. SPEAKER.—Let there be no personal or party references.

Sri A. KRISHNA SHETTY.—He has no party and no political opinion and that is why he is wielding his sword in any way he likes.

ಈ ಪರಿಸ್ಥಿತಿಯಲ್ಲಿ ಈ ಪ್ರಶ್ನೆಗೆ ನಾವು ಪರಿಹಾರ ಮಾರ್ಗವನ್ನು ತರಬೇಕು. ನಮ್ಮ ರಾಜ್ಯವನ್ನಾಳುವ ಕಾಂಗ್ರೆಸ್ ಪಕ್ಷ ಈ ವಿಷಯದ ಬಗ್ಗೆ 1959ರಲ್ಲಿ ಅನೇಕ ತಿದ್ದುಪಡಿಗಳನ್ನು ಕಳುಹಿಸಿತ್ತು. ಅವುಗಳಲ್ಲಿ ಹೆಚ್ಚು ಸಂಖ್ಯೆ ತಿದ್ದುಪಡಿಗಳು ಒಂದೇ ರೀತಿ ಇದ್ದವು. ಆಗ ಸರಿಯಾದ ನೇತೃತ್ವವಿದ್ದು, ಈ ಸಭೆಯ ಮುಂದೆ ನ್ಯಾಯವಾದ ಅಭಿಪ್ರಾಯವನ್ನು ತಿಳಿಸುವ ದೃಷ್ಟಿಯಿಂದ, ತತ್ವವನ್ನು ಬದಿಗೊತ್ತದೇಯಿದ್ದಿದ್ದರೆ ಅಗಲೇ ಪರಿಹಾರವನ್ನು ನಿಜವಾಗಿಯೂ ಕಂಡು ಹಿಡಿಯಬಹುದಾಗಿತ್ತು. ಈಗಲೂ ಮುಖ್ಯಮಂತ್ರಿಗಳು ಸಭೆಯಲ್ಲಿ ಹಾಜರಿಲ್ಲ. ಬಾಕಿ ಮಂತ್ರಿಗಳಲ್ಲಿಯೂ ಕೆಲವರಿದ್ದಾರೆ. ಸಂಸ್ಥಾನಕ್ಕೆ ಸಂಬಂಧಪಟ್ಟ ರಾಜ್ಯಕ್ಕೆ ಸಂಬಂಧಪಟ್ಟ ಒಂದು ದೊಡ್ಡ ಪ್ರಶ್ನೆಯನ್ನು ಚರ್ಚೆ ಮಾಡುವಾಗ.........

Mr. SPEAKER.—Will the Hon'ble Member tell me whether he expecls all the Ministers to participate in the debate.

Sri A. KRISHNA SHETTY.—This is an important one.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇಶದ ಹೆಸರನ್ನು ಬದಲಾಯಿಸುವ ಮುಖ್ಯ ವಿಷಯ ಚರ್ಚೆಯಾಗುತ್ತಿರುವಾಗ ಮುಖ್ಯಮಂತ್ರಿಗಳಿರುವುದು ಅಗತ್ಯವಲ್ಲವೆ ?

ಶ್ರೀ ಎ. ಕೃಷ್ಣಶೆಟ್ಟಿ.—ಕರ್ಣಾಟಕವೆಂದಾಗ ಬೇಕೆಂದು ಹೇಳುತ್ತಿರುವಾಗ, ಇಂಥವರು ಈ ಸಭೆಯಲ್ಲಿಲ್ಲದೆ ಸರಿಯಾದ ನೇತೃತ್ವವನ್ನು ಕೊಡಸೇಯಿರುವಾಗ ಈ ಪ್ರಶ್ನೆಯನ್ನು ಎಷ್ಟುಮಟ್ಟಿಗೆ ಬಗೆಹರಿಸಬಹುದೆಂದು ಕೇಳುತ್ತೇನೆ. ತತ್ವವಿಲ್ಲದ ಕಾರ್ಯಾಚರಣೆಯೆಂದರೆ, ಅದು ಗೊಡ್ಡು ಕಾರ್ಯಾಚರಣೆ, ನಮ್ಮ ಪ್ರಾಂತಕ್ಕೆ ಸರಿಯಾದ ಹೆಸರು ಬೇಕು. ನಾವು ಯಾವ ಉದ್ದೇಶವನ್ನಿಟ್ಟುಕೊಂಡು ಪ್ರಾಂತವನ್ನು ರಚಿಸುತ್ತೇವೋ ಅದಕ್ಕನುಸಾರವಾಗಿ ಹೆಸರಿರಬೇಕು. ಹಾಗಿದ್ದರೆ ಕರ್ಣಾಟಕ ಪ್ರಾಂತ ಎಂದು ಹೆಸರಿಡಬೇಕು. ಒಂದು ವಿನಂತಿ ಮಾಡಿಕೊಳ್ಳುತ್ತೇನೆ; ನಮ್ಮಲ್ಲಿ ಕೆಲಮಟ್ಟಿಗೆ ವ್ಯತ್ಯಾಸವಿದ್ದರೂ ಅದನ್ನು ಬದಿಗಿರಿಸಿ, ಈ ಪ್ರಾಂತಕ್ಕೆ ಕರ್ಣಾಟಕ ಎಂಬ ಹೆಸರನ್ನಿಟ್ಟು ಇದೇ ರೀತಿ ಮುಂದಿನ ಕಾರ್ಯಗಳಲ್ಲಿಯೂ, ರಾಜ್ಯದ ಅಭಿವೃದ್ಧಿಯಲ್ಲಿಯೂ ಒಂದೇ ನಿರ್ಣಯ ತರಲೆಂದು ಕೇಳಿಕೊಂಡು, 'ಕರ್ಣಾಟಕ ಪ್ರಾಂತ' ಎಂಬ ಹೆಸರನ್ನಿಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER.—The House will now adjourn and meet after half an hour.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER (SRI A. R. PANCHAGAVI) in the Chair].

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ಅತಿ ಪ್ರಾಮುಖ್ಯವಾದ ವಿಚಾರವನ್ನು ಈ ದಿವಸ ಈ ಸಭೆಯ ಮುಂದೆ ತಂದಿದ್ದೀರಿ, ಇಲ್ಲಿಯವರೆಗೆ ನೆಮ್ಮದಿಯಿಂದಿದ್ದ ನಮಗೆ ಗೊಂದಲದ ಪರಿಸ್ಥಿತಿಯನ್ನು ತಂದಿಟ್ಟಿದ್ದೀರಿ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಮ್ಮ ರಾಜ್ಯದ ಚರಿತ್ರೆಯನ್ನು ಬಹಳ ಕಾಲದಿಂದ ನೋಡಿಕೊಂಡು ಬಂದರೂ ಕೂಡ ಇಂದಿನವರೆಗೆ ಯಾವುದೇ ಕಾಲದಲ್ಲೂ ನಮ್ಮ ದೇಶಕ್ಕೆ ಕರ್ಣಾಟಕವೆಂಬ ಹೆಸರಿದ್ದುದು ನಮಗಂತೂ ತಿಳಿದು ಬಂದಿಲ್ಲ. ನಮ್ಮ ವಿಜಯನಗರ ಸಾಮ್ರಾಜ್ಯವಿದ್ದಾಗ ಕೂಡ ಇದಕ್ಕೆ ಕರ್ಣಾಟಕವೆಂಬ ಹೆಸರಿರಲಿಲ್ಲ. ಕರ್ಣಾಟಕ ಎಂಬ ಶಬ್ದದ ವಿಚಾರದಲ್ಲಿ ನಾನಾ ತರಹವಾದ ಅಭಿಪ್ರಾಯ ಸೂಚಿಸಿದ್ದಾರೆ. ಹಿಂದೆ ಮಾತನಾಡಿದ ಕೆಲವು ಮಿತ್ರರು, ಬಹಳವಾಗಿ ಕವಿ ಹೀಗೆ ಹೇಳಿದ್ದಾರೆ, ಹಾಗೆ ಹೇಳಿದ್ದಾರೆ, ಆದುದರಿಂದ ಕರ್ಣಾಟಕವೆಂಬ ಹೆಸರು ಚೆನ್ನಾಗಿದೆ, ಇಡಬೇಕು, ಇದಕ್ಕೆ ದೊಡ್ಡ ಮನಸ್ಸು ಮಾಡಿ ಎಂದು ಪ್ರಚಾರ ಕೂಡ ಮಾಡಿದರು. ಕವಿಗಳು ಯಾವಾಗಲೂ ಸೂರ್ಯ ಕಾಣದಿರುವುದನ್ನು ಕಾಣುತ್ತಾರೆ. ಇಂಥ ಕನಸಿನ ರಾಜ್ಯದಲ್ಲಿರುವುದಕ್ಕೆ ಸಾಧ್ಯವೇ ಇಲ್ಲ. ಶ್ರೀಮಾನ್ ದೊಡ್ಡ ಮೇಟಿಯವರಿಗೆ ಈ ವಿಚಾರದಲ್ಲಿ ಬಹಳ ಶ್ರದ್ಧೆ. ನಿನ್ನೆ ಮೊನ್ನೆಯಿಂದ ವಿಪರೀತ ಓಡಾಟ ಮೈಸೂರು ಎಂಬ ಹೆಸರನ್ನು ಬದಲಾಯಿಸಲು ಬಹಳ ತೀವ್ರತೆಯಿದೆ, ವ್ಯಾಮೋಹ ಎಂದರೆ ಸೆಂಟಿಮೆಂಟ್ ಎಂದು ಭಾವಿಸಿಕೊಳ್ಳಬಾರದು. ಈಗ ಮೈಸೂರು ಎಂಬ ಹೆಸರು ಯುಕ್ತವಾಗಿಯೇ ಇದೆ. ಇವತ್ತು ಪ್ರಪಂಚದ ಯಾವ ಭಾಗಕ್ಕೇ ಹೋಗಿ, ಮೈಸೂರು ಎಂದು ಹೇಳಿದರೆ ಅಲ್ಲಿನವರಿಗೆ ಅರ್ಥವಾಗುತ್ತದೆ. ಮೈಸೂರಿನ ಹೆಸರಿನ ಖ್ಯಾತಿ ಪ್ರಪಂಚದ ಮೂಲೆ ಮೂಲೆಗಳಲ್ಲೂ ಹರಡಿದೆ. ಕನ್ನಡನಾಡು ಹರಿದು ಹಂಚಿ ಹೋಗಿದ್ದ ಕಾಲದಲ್ಲಿ ಮೈಸೂರು ಉಳಿದುಕೊಳ್ಳದೇ ಇದ್ದರೆ ಮಾನ್ಯ ಬಂಧುಗಳು ಇವತ್ತು ಯಾರನ್ನು ಆಶ್ರಯ ಮಾಡಬೇಕಾಗಿತ್ತು ಎಂದು ಯೋಚಿಸಬೇಕು. ಅವತ್ತು ಮೈಸೂರಿಗೆ ಸೇರುವಾಗ ನಾವು ನಿಮ್ಮ ಜೊತೆಗೆ ಬರುತ್ತೇವೆಂದು ಹೇಳಿ ಬಂದವರು ಇವತ್ತು ಬಂದ ಆರುವರ್ಷಗಳ ಮೇಲೆ ಪರವಾಗಿಲ್ಲ, ಗಲಾಟೆ ಮಾಡಿದರೆ ಸುಮ್ಮನಾಗುತ್ತಾರೆ ಎಂದು ತಿಳಿದು ಈ ಹೆಸರನ್ನು ನಮ್ಮ ಮೇಲೆ ಹೇರುವುದಕ್ಕೆ ಪ್ರಯತ್ನಪಡುವುದನ್ನು ನೋಡಿದರೆ ನಮಗೆ ಏನು ಹೇಳಬೇಕೋ ತಿಳಿಯದು, ಇದು ಧರ್ಮವಲ್ಲ ಎಂದು ಹೇಳಬಯಸುತ್ತೇನೆ. ಈಗ ಆರು ವರ್ಷಗಳ ಅವರ ನಮ್ಮ ಸಹಜೀವನದಲ್ಲಿ ಅವರಿಗೆ ತೊಂದರೆಯಾಗಿರುವುದೇನು ಎಂಬುದನ್ನು ಅವರು ಯಾರಾದರೂ ಯೋಚನೆ ಮಾಡಿದ್ದಾರೆಯೆ ? ಸೆಂಟಿಮೆಂಟಲ್ಲಾಗಿ ಅವರು ನಮಗೆ ಹೇಳುತ್ತಿದ್ದಾರೆಂಬುದನ್ನು ಕರ್ಣಾಟಕದ ಪರವಾಗಿರುವ ಈ ಸಭೆಯ ಮಾನ್ಯಮಿತ್ರರು ಗಮನಿಸಬೇಕೆಂದು ಈ ಸಮಯದಲ್ಲಿ ಅವರಿಗೆಲ್ಲ ಸವಿನಯವಾಗಿ ಪ್ರಾರ್ಥಿಸುತ್ತೇನೆ. ಈ ಮೈಸೂರಿನಲ್ಲಿ ಒಂದು ರಾಜಮನೆತನವಿತ್ತು. ಈ ದಿವಸ ನಿಮ್ಮ ದೇಶದ ರಾಜರು ಇದ್ದಾರೆಯೆ ? ಹಾಗಿರುವಾಗ ದೇಶದ ಹೆಸರೇಕಿರಬೇಕು ಎಂದು ಅವರು ಹೇಳಬಹುದು. ಆದರೆ ನಾನು ಹೇಳಬಯಸುತ್ತೇನೆ, 550 ಚಿಲ್ಲರೆ ಸಂಸ್ಥಾನಗಳು ಈ ದೇಶದಲ್ಲೇನಿದ್ದುವು ಅವುಗಳ ರಾಜರಿಗೂ ಮೈಸೂರು ರಾಜರಿಗೂ ವತ್ಯಾಸವಿದೆ. ಅವರ ಆಡಳಿತ, ಪ್ರಜೆಗಳಲ್ಲಿ ಅವರಿಟ್ಟಿದ್ದ ವಿಶ್ವಾಸ ಆದರ್ಶಪ್ರಾಯವಾಗಿತ್ತು. ಅವರು ಮೇಧಾವಿಗಳಾಗಿ ಚೆನ್ನಾಗಿ ರಾಜ್ಯಭಾರ ಮಾಡಿದರು. ಮಾದರಿ ಮೈಸೂರು ಎಂಬ ಖ್ಯಾತಿಯೇನಿತ್ತು ಅದನ್ನು ಮರೆಯದೆ ಅದಕ್ಕೆ ತಕ್ಕಂತೆ ನಡೆದುಕೊಂಡರು. ಇದು ಸರ್ವರಿಗೂ ತಿಳಿದ ವಿಷಯ. ಇದರ ಮೇಲೆ ಈ ದೇಶವನ್ನು ಮುಂದಕ್ಕೆ ತಂದು ಮಾದರಿ ದೇಶವೆಂದು ಸರ್ವರೂ ಹೇಳುವಂತೆ ಮಾಡಿದರು. ಇಷ್ಟಿದ್ದರೂ ಇದರ ಮೇಲೆ ವ್ಯಾಮೋಹ ಬಿಟ್ಟು ಈ ದೇಶ ವಿಭಜನೆಯಾದಾಗ ನಮ್ಮ ಜೊತೆಗೆ ಬಂದವರಿಗೆ ಸ್ವಲ್ಪ ಜಾಗ ಕೊಡಿ ಎಂದು ಹೇಳಿದರೆ, ದೊಡ್ಡ ಮನಸ್ಸು ಮಾಡಿ ಕುಳಿತುಕೊಳ್ಳಲು ಜಾಗ ಕೊಟ್ಟರೆ ಇದ್ದ ಮನೆ ಕಿತ್ತುಕೊಂಡ ಎನ್ನುವಂತೆ ಮಾಡುವುದು ಯೋಗ್ಯವಾದುದಲ್ಲ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಆ ಮೇಲೆ ಜಾತ್ಯಾತೀತವಾದ ಒಂದು ರಾಷ್ಟ್ರವನ್ನು ಕಟ್ಟಬೇಕೆಂದು ಬಾಯಲ್ಲಿ ಹೇಳುತ್ತಿದ್ದವರೇ ಈಗ ಇಷ್ಟು ಒತ್ತಾಯ ಮಾಡುವುದನ್ನು ನೋಡಿದ ಮೇಲೆ ನಮಗೆ ಭಯವಾಗುತ್ತಿದೆ. ಅವರು ನಾಲ್ಕೈದು ವರ್ಷಗಳಿಂದ ನಡೆದುಕೊಳ್ಳುತ್ತಿದ್ದ ರೀತಿ ನೋಡಿದರೆ ನಾವು ನಾವೇ ಇರಬೇಕೆಂದು ಈಗ ಅವರದೇ ಒಂದು ಸಾಮ್ರಾಜ್ಯ ಕಟ್ಟುವುದಕ್ಕೆ ಹೋಗುತ್ತಿದ್ದಾರೋ ಏನೋ ಎನಿಸುತ್ತಿದೆ ಎಂದು ಮನಃ ಪೂರ್ವಕವಾಗಿ

(ಶ್ರೀ ಟಿ. ಎಣ್. ಮಾದಪ್ಪಗೌಡ)

ಹೇಳುತ್ತಿದ್ದೇನೆ. ಮೈಸೂರು ಪಟ್ಟಣಕ್ಕೆ ಹೋದರೆ ಒಂದು ನಿದರ್ಶನ ಎಲ್ಲರೂ ನೋಡಬಹುದು. ಈ ದೇಶದಲ್ಲಿ ಎಷ್ಟೋ ಜಾತಿಗಳೂ, ಪಕ್ಷಗಳೂ ಇವೆ. ಆದರೆ ಒಂದೇ ಒಂದು ಜಾತಿಯ ಅನುಕೂಲಕ್ಕೆ ಇಲ್ಲಿ ಮಾಡಿರುವ ಏರ್ಪಾಡು ನೋಡಿದರೆ ಈ ಹಿಂದೆ ನಮ್ಮ ದೇಶಕ್ಕೆ ಮಿಷನರಿಗಳು ಬಂದುದು ಜ್ಞಾಪಕಕ್ಕೆ ಬರುತ್ತದೆ. ಪಾಠ ಹೇಳಿಕೊಡುತ್ತೇವೆಂದು ಬಂದಂಥ ಜನ, ಅವರ ಮತ ಪ್ರಚಾರ ಮಾಡಿ ದೇಶದಲ್ಲಿದ್ದಂಥ ಒಗ್ಗಟ್ಟನ್ನು ಹಾಳು ಮಾಡಿ, ಅವರ ಸಾಮ್ರಾಜ್ಯವನ್ನೇ ಸ್ಥಾಪನೆ ಮಾಡಿಕೊಂಡು ಬಂದಂಥ ಕಥೆ ನಮಗಿನ್ನೂ ಮರೆತು ಹೋಗಿಲ್ಲ. ಈಗ ನಾವು ಇದನ್ನೆಲ್ಲಾ ನೋಡಿದರೆ ಮತ್ತೆ ಆ ಪರಿಸ್ಥಿತಿಗೇ ಈ ರಾಜ್ಯ ಹೋಗುತ್ತದೆಯೋ ಎನಿಸುತ್ತದೆ. ತಮಗೆ ಅನೇಕರಿಗೆ ಗೊತ್ತಿರಬಹುದು. ಕರ್ಣಾಟಕವಾಗಬೇಕೆಂದು ಹೇಳಿದಾಗ ನಮ್ಮ ಮೈಸೂರಿನ ಜನ ಅದು ಬೇಡಿ, ನೀವು ಯಾವ ತರದ ಜನವೋ, ನಮಗೂ ನಿಮಗೂ ಹೊಂದಿಕೊಳ್ಳುವುದಕ್ಕೆ ಸಾಧ್ಯವಿಲ್ಲ, ನಿಮ್ಮ ಪಾಡಿಗೆ ನೀವೇ ಇರಿ, ಏಕೆಂದರೆ ಆ ದೇಶ 73,000 ಚದರ ಮೈಲಿಗಳ ವಿಸ್ತಾರವುಳ್ಳದಾಗಿದ್ದು, ನಮ್ಮದಂತೇ ಭಾಷೆಯುಳ್ಳವರಾಗಿದ್ದರೂ, ಈ ಸಂಧರ್ಭದಲ್ಲಿ ಒಂದು ಕಥೆ ನನಗೆ ಜ್ಞಾಪಕಕ್ಕೆ ಬರುತ್ತದೆ. ಮೈಸೂರು ಪಟ್ಟಣದಲ್ಲಿ ಅರಸು ಬೋರ್ಡಿಂಗ್ ಗರ್ಲ್ಸ್ ಸ್ಕೂಲ್ ಎಂದು ಹೇಳಿ ಅರಸು ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆಂದು ಪ್ರಾರಂಭಿಸಿದ್ದರು. ಸ್ಥಾಪನೆ ಮಾಡಿ ಸ್ವಲ್ಪ ದಿವಸಗಳಾದ ಮೇಲೆ ದಿವಂಗತ ಯುವರಾಜರು ಅಲ್ಲಿಗೆ ಒಂದು ದಿವಸ ನೋಡಲು ಹೋದರಂತೆ ಆಗ ಅಲ್ಲಿನ ಹುಡುಗರು ಕನ್ನಡ ಭಾಷೆಯನ್ನು ವ್ಯಂಗ್ಯವಾಗಿ ಮಾತನಾಡುತ್ತಿದ್ದುದನ್ನು ನೋಡಿ, ತಮ್ಮ ವ್ಯಸನವನ್ನು ತಡೆಯಲಾರದೆ, ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳೆಂಬ ಪಂಡಿತರನ್ನು ನೇಮಿಸಿ ಅವರ ಭಾಷೆ ತಿದ್ದಬೇಕೆಂದು ತಿಳಿಸಿದರು. ಆ ಮೇಲೆ ಒಂದು ವರ್ಷವಾದ ಮೇಲೆ ಮತ್ತೆ ನೋಡಲು ಅಲ್ಲಿಗೆ ಹೋದರು. ಅಲ್ಲಿ ಅದೇ ಭಾಷೆ ಇದ್ದಿತಂತೆ. ಇದನ್ನು ನೋಡಿ ಕೋಪಗೊಂಡು 'ಎಲ್ಲಿ ಸುಬ್ರಹ್ಮಣ್ಯ ಶಾಸ್ತ್ರಿಗಳು ?' ಎಂದು ಕೂಗಲಾಗಿ 'ಇಲ್ಲವನಿ ಬುದ್ಧಿ ಕುಕ್ಕೆ ಸುಬ್ಬ' ಎಂದು ಉತ್ತರ ಕೇಳಿಸಿತಂತೆ. ಹೀಗೆ ಇವರು ನಮ್ಮಲ್ಲಿಗೆ ಸೇರಿಕೊಂಡು ನಮ್ಮ ಭಾಷೆ ಎಲ್ಲಿ ಕೆಟ್ಟು ಹೋಗುತ್ತದೆಯೋ ಎಂಬ ಭೀತಿ ನಮಗೆ. ಈ ಪ್ರಕಾರ ಒಂದೇ ಎರಡೇ—ನಾನಾ ರೀತಿಯಲ್ಲಿ ನಮಗೆ ತೊಂದರೆಯಾಗುವ ಪರಿಸ್ಥಿತಿಗಳಿವೆ. ಮೊನ್ನೆತಾನೆ ವಿದ್ಯಾ ಮಂತ್ರಿಗಳು ಸ್ಕೂಲು ಫೀಜನ್ನು ಕಡಮೆ ಮಾಡಿ ಎಂದು ಕೇಳಿದ ಸಂದರ್ಭದಲ್ಲಿ, ಅವರು ಕೊಟ್ಟ ಸಮಜಾಯಿಷಿಯೆಂದರೆ, ಆ ಭಾಗದಲ್ಲಿ ಜಾಸ್ತಿಯಿದೆ, ಆದ್ದರಿಂದ ಅದೇ ಪ್ರಕಾರ ಇಲ್ಲಿಯೂ ಮಾಡಬೇಕು ಎಂದರು. ಹೀಗೆಯೇ ಅಲ್ಲಿ ಕಂದಾಯ ಜಾಸ್ತಿಯಿದೆಯೆಂದು ನಾವೂ ಇಲ್ಲಿ ಜಾಸ್ತಿ ಕೊಡಬೇಕಾಗುತ್ತದೆ. ಅಲ್ಲಿ ರಸ್ತೆ ವಗೈರೆ ಸರಿಯಾಗಿಲ್ಲ. ಅವರಿಗೋಸ್ಕರ ನಾವು ಇಲ್ಲಿ ಜಾಸ್ತಿ ಕೊಡಬೇಕು. ಎಂದು ಹೇಳುತ್ತಿದ್ದಾರೆ. ಇದೆಲ್ಲಾ ಕಷ್ಟವೇಕೆ ಎಂದು ಮೊನ್ನೆ 3-4 ದಿವಸದ ಕೆಳಗೆ ನಮ್ಮ ಮಾನ್ಯ ಮಿತ್ರರಾದ ಸಿ. ಜೆ. ಮುಕ್ಕಣ್ಣಪ್ಪನವರು ಒಂದು ಸಲಹೆ ಮಾಡಿದರು. ಆ ಸಲಹೆ ಅತ್ಯುತ್ತಮವಾದದ್ದೆಂದು ನನಗಾದರೂ ಅನ್ನಿಸುತ್ತದೆ. ಅದೇನೆಂದರೆ, 'ನೀವೇನಾದರೂ ಹೆಸರು ಕರೆದುಕೊಂಡು ನಿಮ್ಮ ಪಾಡಿಗೆ ನೀವಿರಿ, ನಮ್ಮ ಪಾಡಿಗೆ ನಾವಿರುತ್ತೇವೆ. ಮೈಸೂರಿನ ಜನ ಹಿಂದಿನಿಂದಲೂ ಸುಲಭವಾಗಿ ಬಾಳಿದ ನಜ. ನಮಗೆ ಈ ರೀತಿಯಾಗಿ ಹಿಂಸೆ ಕೊಡುವ ಮನೋಭಾವ ಬೇಡ' ಎಂದು. ಅಲ್ಲದೆ ಇದೇ ದಿವಸ ಬೆಳಿಗ್ಗೆ ನಮ್ಮ ರಾಷ್ಟ್ರಾಧ್ಯಕ್ಷರು ಕೂಡ ಲಾಲ್‌ಬಾಗಿನಲ್ಲಿ ಮಾತನಾಡುತ್ತಾ ಮೈಸೂರಿನ ಹೆಸರಿನ ವಿಚಾರವಾಗಿ ಒಂದು ವಿವರಣೆ ಕೊಟ್ಟರು. ಅದು ಬಹಳ ಸೂಕ್ತವಾಗಿದೆ. ಮನುಷ್ಯನಲ್ಲಿರತಕ್ಕ ನಾನಾ ವಿಧವಾದ ಯೋಚನೆಗಳ ಗುರುತಾಗಿ ಮೈಸೂರಿದೆ. ಮೈಸೂರಿನ ಮೇಲೆ ಚಾಮುಂಡಾಂಬಿಕೆಯಿರುವುದು ಒಂದು ಒಳ್ಳೆಯ ಗುರುತು. ಈಗ ಅವರ ಮನಸ್ಸಿನಲ್ಲಿರತಕ್ಕ ಹಲಾಹಲವೇನಿದೆಯೋ ಅದನ್ನು ಕನ್ನಡಮ್ಮನಾದ ಶ್ರೀ ಚಾಮುಂಡೇಶ್ವರಿ ಒಟಿಗೆ ತರದ ರೀತಿಯಲ್ಲಿ ಮಾಡಲಿ. ಏಕೆಂದರೆ ಇಲ್ಲಿ ಹಲವರಲ್ಲಿ ಭಿನ್ನಾಭಿಪ್ರಾಯವಿದೆ. ಕಾಂಗ್ರೆಸ್ ಪಾರ್ಟಿಯಲ್ಲಿರುವವರಿಗೆಲ್ಲಾ ತಮ್ಮ ಸ್ವಂತ ಮತವನ್ನು ಕೊಡುವುದಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದರಂತೆ. ನಿಸ್ಸಂದೇಹವಾಗಿ ಒಂದು ಚಳವಳಿ ಪ್ರಾರಂಭವಾಗುವುದನ್ನು ನೀವೇನೂ ಶಂಕೆಯಿಟ್ಟುಕೊಳ್ಳಬೇಡಿ. ನನಗಾದರೂ ಎನಿಸುತ್ತದೆ. ನಮಗೆ ಓಟು ಕೊಟ್ಟು ಕಳುಹಿಸಿದ ಜನ ಮೈಸೂರಿನ ಮೇಲೆ ಬಹಳ ವಾತ್ಸಲ್ಯ ಪ್ರೇಮವುಳ್ಳವರು. ಅಂಥ ಲಕ್ಷಾಂತರ ಜನರಿಂದ ಮತ ತೆಗೆದುಕೊಂಡು ಬಂದಿರುವ ಜನರಾದ ನಾವಾದರೂ ಅವರ ಅಭಿಮತಕ್ಕೆ ವಿರೋಧವಾಗಿ ಹೋಗುವುದು ಸಾಧುವಲ್ಲ. ಇದಕ್ಕಾಗಿ ಕೊನೆಯವರೆಗೂ ಹೊಡೆದಾಡುವ ಸನ್ನಿವೇಶ ಬರುತ್ತದೆ. ಕನ್ನಡನಾಡು ಒಂದಾದ ಮೇಲೆ ಮೈಸೂರೆಂದೇ ಹೇಳಿದರೇನು ? ನೀವು ಹೇಳಿದ ಹೆಸರೇನು ಚೆನ್ನು, ನೀವೇಕೆ ಅದಕ್ಕೆ ಕಟ್ಟುಬಿದ್ದಿದ್ದೀರಿ? ನೀವೆ ಇಂಥ ಒಂದು sentimentಗೆ ಒಳಗಾಗಿದ್ದೀರಿ. ಮದ್ರಾಸ್ ಈಗ ಏನಾಗಿದೆ, ರಾಜಕೀಯ ವ್ಯವಹಾರದಲ್ಲಿ ಮದ್ರಾಸ್ ಎಂದೇ ಕರೆಯುತ್ತಿಲ್ಲವೇ ? ಸಭೆಯಲ್ಲಿ ಮಾತನಾಡುವಾಗ ತಮಿಳುನಾಡು ಎಂದು ಹೇಳುತ್ತಾರೆ. ಹಾಗೆಯೇ ಈ ಸಭೆಯಲ್ಲಿಯೂ ನೀವೂ ಕರ್ನಾಟಕ ಎಂದೇ ಕರೆಯಿರಿ. ಆದರೆ ಒಂದು ಮಾತ್ರ ನಾನು ಬಿನ್ನವಿಸಿಕೊಳ್ಳುತ್ತೇನೆ. ನೀವೀಗ ಇದನ್ನು ಒತ್ತಾಯ ಮಾಡುವುದರಿಂದ ನಮ್ಮ ಮನಸ್ಸಿನಲ್ಲಿ ಈಗ ಮೂಡಿರುವ ಶಂಕೆ, ಅಪನಂಬಿಕೆಗಳು ಬೆಳೆಯುವುದಕ್ಕೆ ಅವಕಾಶ ಕೊಟ್ಟಂತಾಗುತ್ತದೆ. ನಿಮ್ಮಲ್ಲಿ ಜಾತೀಯತೆಯಿಲ್ಲವೆಂದು ಹೇಳಿಕೊಂಡು ನಮ್ಮನ್ನು ತುಳಿಯತಕ್ಕ ಪ್ರಯತ್ನ ಮಾಡಿದರೆ ದೇಶದಲ್ಲಿ ಅನಾಹುತವಾಗುತ್ತದೆಂದು ನಾನು ಮತ್ತೊಮ್ಮೆ ಹೇಳಿ ಎಂದಿಗೂ ಮೈಸೂರಿನ ಹೆಸರು ಮೈಸೂರಾಗಿಯೇ ಇರಬೇಕೆಂದು ಹೇಳುತ್ತೇನೆ, ಏಕೆಂದರೆ ಬಿ.ಎಂ. ಶ್ರೀಕಂಠಯ್ಯನವರೇ ಮೊದಲಾದ ಹಿರಿಯ ಕನ್ನಡ ಆಚಾರ್ಯ ಪುರುಷರು ಮೈಸೂರಿನ ವಿಷಯದಲ್ಲಿ ಬಹಳ ಹೆಮ್ಮೆ ಪಡುವಂಥ ಮಾತುಗಳನ್ನು ಹೇಳಿದ್ದಾರೆ. ಅವರ ಕೈ ಕೆಳಗೆ ಓದಿದಂಥ ನಾವುಗಳು, ಅವರ ಭಾಷಣಗಳನ್ನು ಕೇಳಿ ನಲಿದ ನಾವುಗಳು ಈ ಹೆಸರನ್ನು ಬಿಟ್ಟುಕೊಡಲಾರೆವು. ಒಂದು ವೇಳೆ ಕರ್ನಾಟಕವೇ ಆಗಬೇಕೆಂದು ನೀವು ಬಯಸುವದಾದರೆ ಈವರೆಗೆ ನಾವು ನೀವು ಅಣ್ಣ ತಮ್ಮಂದಿರಂತೆ ಇದ್ದೆವು. ಒಂದಾಗಿ ಇರುವುದಕ್ಕಾಗುವುದಿಲ್ಲವಾದರೆ ಬೇರೆಯಾಗಿ ಬಿಡೋಣ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

†ಶ್ರೀ ಜಿ. ಮಾದೇಗೌಡ (ಮಳವಳ್ಳಿ).—ಮಾನ್ಯ ಸಭಾಪತಿಗಳೇ, ಈ ದಿವಸ ಸಭೆಯ ಮುಂದಿರತಕ್ಕ ಈ ಖಾಸಗಿ ನಿರ್ಣಯದ ಮೇಲೆ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇಡೀ ಇಂಡಿಯಾ ದೇಶದಲ್ಲಿ ಭಾಷಾವಾರು ತಳಹದಿಯ ಮೇಲೆ ರಾಜ್ಯ

ಗಳನ್ನು ಪುನರ್ವಿಂಗಡಣೆ ಮಾಡಬೇಕೆಂದು ಹೇಳಿ S.R.C. ರಿಪೋರ್ಟನ್ನು ದೇಶದ ಮುಂದಿಟ್ಟರು. ಆ ಮರುಕ್ಷಣದಲ್ಲಿಯೇ ದೇಶದಲ್ಲಿ ನಡೆದಂಥ ಆಂದೋಳನ, ಕ್ರಾಂತಿ ಈವತ್ತಿಗೂ ನಮ್ಮ ಕಣ್ಣಿನ ಮುಂದೆ ಕಟ್ಟಿದಂತಿದೆ. ಆದರೂ ಕೂಡ ಆಡಳಿತ ಪಕ್ಷದಲ್ಲಿರುವ ಕಾಂಗ್ರೆಸ್ಸಿನವರು ಕಾಂಗ್ರೆಸ್ ಸಂಸ್ಥೆಯ ಹಿತದೃಷ್ಟಿಯಿಂದ ಮತ್ತು ದೇಶದ ಐಕ್ಯತೆಯ ದೃಷ್ಟಿಯಿಂದ, ಕಾಂಗ್ರೆಸ್ಸಿನವರ ಮೇಲೆ ಒಂದು ಸಂಸ್ಥೆಯನ್ನು ಹೊರುವ ಭಾರ ವಿದ್ದುದರಿಂದ ನಮಗೆ ಸ್ವತಂತ್ರವಾಗಿ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸಾಧ್ಯವಿಲ್ಲದ ರೀತಿಯಲ್ಲಿ ನಮ್ಮನ್ನು ಕಟ್ಟಿ ಭಾಷಾವಾರು ಪ್ರಾಂತ್ಯಗಳನ್ನು ರಚಿಸಿದರು. ಅದೇ ರೀತಿಯಲ್ಲಿ ವಿಶಾಲ ಮೈಸೂರು ಸ್ಥಾಪನೆಯಾಯಿತು. ಈ ಬಗ್ಗೆ ಇದೇ ಶಾಸನ ಸಭೆಯಲ್ಲಿ ದೀರ್ಘವಾದ ಚರ್ಚೆ ನಡೆದು ಅವತ್ತಿನ ದಿವಸ ಮೈಸೂರು ಶಾಸನ ಸಭೆಯಲ್ಲಿ ಕರ್ನಾಟಕಕ್ಕೆ ಬಹುಮತವಾದ ವಿರೋಧವಿತ್ತೆಂಬುದು ತಮಗೆಲ್ಲರಿಗೂ ಗೊತ್ತಿರುವ ವಿಷಯ. ನಾನು ಮೊದಲೇ ಹೇಳಿದಂತೆ ಕಾಂಗ್ರೆಸ್ ಸಂಸ್ಥೆಯವರು, ಆ ಸಂಸ್ಥೆಯ ಹೊರಗಿದ್ದ ಪಕ್ಷದಲ್ಲಿ ವಿಶಾಲ ಮೈಸೂರಾಗುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಆದರೂ ಕೂಡ ಬಹಳ ಹೆಮ್ಮೆಯಿಂದ ನಾವೆಲ್ಲರೂ ಹೊರಗಿನಿಂದ ಬಂದಂಥ ಕನ್ನಡ ಭಾಷೆಯಾಡುವ ಜನರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದೆವು. ಆದರೂ ಕೂಡ ವಿಶಾಲ ಮೈಸೂರಾದ ತಕ್ಷಣ ಕನ್ನಡ ಭಾಷೆಯಾಡುವ ಜನರೆಲ್ಲ ಈ ದೇಶಕ್ಕೆ ಬಂದ ತಕ್ಷಣ ನಾವು ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳುವುದಕ್ಕೆ ಬಹಳ ವರ್ಷಗಳಾದವು.

ಆದರೂ ಕೂಡ ಇವತ್ತು ಧೈರ್ಯವಾಗಿ ಹೇಳುತ್ತೇನೆ. ಇನ್ನೂ ಕೂಡ ವಿಶಾಲ ಮೈಸೂರಿನಲ್ಲಿರತಕ್ಕ ಜನರೆಲ್ಲರೂ ಕೂಡ ಮೈಸೂರಿನಲ್ಲಿರತಕ್ಕ ಜನಗಳ ಹಾಗೆ ಒಬ್ಬರನ್ನೊಬ್ಬರು ಸೇರಲಿಕ್ಕೆ ಸಾಧ್ಯವಾಗಿಲ್ಲ ಸಾಧ್ಯವಾಗುತ್ತಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಂತಹ ಪರಿಸ್ಥಿತಿ ಇದ್ದರೂ ಕೂಡ ಭಾಷಾವಾರು ಪ್ರಾಂತಗಳ ಆಧಾರದ ಮೇಲೆ ಪ್ರಾಂತಗಳ ರಚನೆಯಾದರೂ ಕೂಡ ದೇಶದಲ್ಲಿ ಒಂದು ವಿಧವಾದಂಥ ಒಳ್ಳೆಯ ವಾತಾವರಣ, ಒಳ್ಳೆಯ, ಸಹೋದರ ಮನೋಭಾವನೆ ಪ್ರೀತಿ, ವಿಶ್ವಾಸ ಬೆಳೆದು ಈ ದೇಶದಲ್ಲಿ ಸುಭದ್ರವಾದ ಸರ್ಕಾರ ಸ್ಥಾಪನೆ ಮಾಡಬೇಕೆಂಬ ಒಂದು ದಿಟ್ಟತನದಲ್ಲಿರುವಾಗ ಇದು ಈ ದೇಶದಲ್ಲಿ ಜನರ ಹೃದಯ ಕಲಕಿರುವುದಲ್ಲದೆ ಬಹಳವಾಗಿ ಅನೇಕರ ಮನಸ್ಸನ್ನು ನೋಯಿಸಿದೆ ಎಂದು ಹೇಳಿದರೆ ಹೆಚ್ಚು ಅತಿಶಯೋಕ್ತಿಯಾಗಲಾರದು. ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಮೈಸೂರಿಗೆ ಕನ್ನಡ ಭಾಷೆ ಮಾತನಾಡತಕ್ಕ ಜನರೆಲ್ಲರೂ ಬಂದು ಸೇರಬೇಕು ಎಂಬುದಾಗಿ ಈ ಸಭೆಯಿಂದ ಶಿಫಾರ್ಸು ಮಾಡತಕ್ಕ ಕಾಲದಲ್ಲಿ ಆಗ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಮಾನ್ ಕೆ. ಹನುಮಂತಯ್ಯನವರು ಈ ರೀತಿ ಹೇಳಿದ್ದಾರೆ.

"The Legislature further resolved that in ord r to preserve the composite ch racter of the State, the new State should continue to be called Mysore State. In this connection, I would like to report that the new State envisaged in the resolution will not be a uni-ingual State, as a very substantial portion of the population speak languages other than Kannada. Mysore has all along been a composite State and it is the desire of the people of Mysore that its composite character should continue even after the reorganization. The name Karnataka State conjures before the mind, the picture of a uni-lingual State in which the linguistic minority may see that they have no place in Karnataka. The States Reorganisation Commission themselves have recommended that in the reorganised State, the linguistic minorities should not be made to feel that their interests are not properly safeguarded. The best achievement of this would be to emphasise the composite character of the State by avoiding any name associated with the particular language. That is the step that this House and the Government have taken."

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರ ಬಗ್ಗೆ ಹಿಂದೆ ಚರ್ಚೆಯಾಗಿತ್ತು.

Sri G. MADE GOWDA.—This resolution was accepted by the State Legislature then.

ಈ ಸಮಸ್ಯೆಯನ್ನು ಈ ಸಭೆಯಲ್ಲಿ ತಂದ ಕಾಲದಲ್ಲಿ ಏನು ಮೈನಾರಿಟಿ ಜನ ದೇಶದಲ್ಲಿ ಇದ್ದಾರೆ ಇದು ಕನ್ನಡನಾಡು, ಕನ್ನಡದ ಹಿತವನ್ನು ಕಾಪಾಡತಕ್ಕ ದೇಶವೆಂದು ಸಾಮಾನ್ಯ ಜನ ತಿಳಿದುಕೊಳ್ಳದೇ ಇರಲಿ ಎನ್ನುವ ದೃಷ್ಟಿಯಿಂದ ಈ ಮೈಸೂರು ವಿಶಾಲವಾಗಿ ಹೊರಗಡೆಯಿಂದ ಬಂದಂಥ ಪ್ರದೇಶಗಳು ಒಟ್ಟುಗೂಡಿದ್ದರೂ ಮೈಸೂರು ದೇಶಕ್ಕೆ ಮೈಸೂರು ಎಂದು ಹೆಸರಿಡಬೇಕೆಂದು ಶಿಫಾರ್ಸು ಮಾಡಿದ್ದರು. ಮತ್ತೊಂದು ಒಪ್ಪಂದವನ್ನು ಈಗ ಮುಖ್ಯ ಮಂತ್ರಿಗಳಾಗಿರುವ ಶ್ರೀಮಾನ್ ನಿಜಲಿಂಗಪ್ಪನವರು ಆಗ ಯಾರು ಕರ್ಣಾಟಕಕ್ಕೆ ಬಹಳವಾಗಿ ಒಡಾಡುತ್ತಿದ್ದರೋ ಅವರು "ಈ ಎರಡು ಒಪ್ಪಂದಗಳ ಮೇಲೆ ವಿಶಾಲ ಪ್ರಾಂತಮಾಡುವುದಕ್ಕೆ ನಾವೆಲ್ಲರೂ ಒಪ್ಪಿಕೊಂಡೆವು; ಮೊದಲನೆಯದು ಬೆಂಗಳೂರು ಮೈಸೂರಿಗೆ ರಾಜಧಾನಿಯಾಗಿರಬೇಕು, ಎರಡನೆಯದು ಮೈಸೂರು ಎಂಬುದಾಗಿ ಈ ವಿಶಾಲ ದೇಶಕ್ಕೆ ಹೆಸರಿಡಬೇಕೆಂಬುದಾಗಿ". ಆಗಿನ ಶಾಸನ ಸಭೆಯವರು ಶಿಫಾರ್ಸು ಮಾಡಿದ್ದರು, ಅಂದ ಮೇಲೆ ಅವನ್ನು ನಾವೆಲ್ಲರೂ ಒಪ್ಪಿಕೊಂಡ ನಂತರ ಕೇಂದ್ರ ಸರ್ಕಾರದವರೂ ಸಹ ಒಪ್ಪಿ ಕೊಂಡು ಪಾರ್ಲಿಮೆಂಟಿನಲ್ಲಿ ಇದನ್ನು ಆಕ್ಟ್ ಮಾಡಿದ ಮೇಲೆ ದೇಶದಲ್ಲಿ ಶಾಂತಿಯುತ ವಾತಾವರಣ ಕಲ್ಪನೆಯಾಗುವ ಕಾಲದಲ್ಲಿ ಈ ಸಮಸ್ಯೆಯನ್ನು ಪುನರ್ವಿಮರ್ಶೆ ಮಾಡುವುದು ಯೋಗ್ಯವೇ ಎಂದು ನಾನು ಪ್ರಶ್ನೆಮಾಡಬೇಕಾಗಿದೆ. ಅದರಲ್ಲೂ ಈ ಸಂದರ್ಭದಲ್ಲಿ

(ಶ್ರೀ ಜಿ. ಮಾದೇಗೌಡ)

ದೇಶದ ಮುಂದೆ ಅನೇಕ ಸಮಸ್ಯೆಗಳು ಇರುತ್ತವೆ. ಅಂತಹ ಸಂದರ್ಭದಲ್ಲಿ ಇಂತಹ ಒಂದು ಸಮಸ್ಯೆಯನ್ನು ಉದ್ಭವಮಾಡಿ ದೇಶದಲ್ಲಿ ಒಂದು ಕ್ರಾಂತಿ ಮತ್ತು ಒಂದು ಅಸಮಾಧಾನ ಪರಿಸ್ಥಿತಿಗೆ ತರುವಂತಹ ಕಾರ್ಯಕ್ಕೆ ಈ ದೇಶವನ್ನು ಕೊಂಡೊಯ್ಯುವುದು ಒಳ್ಳೆಯದೇ ಎಂದು ನಾನು ಕೇಳುತ್ತೇನೆ. ಈಗ ದೇಶದಲ್ಲಿರುವ ಸಮಸ್ಯೆಗಳ ಪೈಕಿ ಇದು ಒಂದು ನಿಜವಾಗಿ ದೊಡ್ಡ ಸಮಸ್ಯೆಯೇ ? ದೇಶದಲ್ಲಿ ಕನ್ನಡ, ಕರ್ಣಾಟಕ, ಮೈಸೂರು, ಕನ್ನಡನಾಡು ಎಂಬ ಹೆಸರು ಇರಬೇಕೆಂಬ ವಿಷಯದಲ್ಲಿ ನಾನು ಒಂದು ಅಭಿಪ್ರಾಯವನ್ನು ಕೊಡುವುದಿಲ್ಲ. ದೇಶದಲ್ಲಿ ಈಗ ನಾನಾ ಸಮಸ್ಯೆಗಳನ್ನು ನೀಗಬೇಕಾಗಿದೆ. ಹೆಸರನ್ನು ಬದಲಾಯಿಸುವುದರಿಂದ ಉಂಟಾಗತಕ್ಕ ಲಾಭವೇನಿದೆ ? ಈಗ ಅನ್ನದ ಸಮಸ್ಯೆ, ಹೊಟ್ಟೆ ಬಟ್ಟೆಗಳ ಸಮಸ್ಯೆ, ನಿರುದ್ಯೋಗ ಸಮಸ್ಯೆ-ಇವು ಮುಖ್ಯ-ಈಗಿರತಕ್ಕ ಮೈಸೂರು ಎಂಬ ಹೆಸರನ್ನು ಬದಲಾಯಿಸಿ ಕರ್ಣಾಟಕವೆಂದು ಹೇಳಿದರೆ ದೇಶದ ಉತ್ಪತ್ತಿ ಇದ್ದಕ್ಕಿದ್ದ ಹಾಗೆ ಹೆಚ್ಚಿಗೆ ಹೋಗುವುದಿಲ್ಲ. ಕನ್ನಡ ನಾಡು ಎಂದು ಹೇಳಿದರೂ ಹೊಟ್ಟೆ-ಬಟ್ಟೆ ಸಮಸ್ಯೆಯನ್ನು ನೀಗಬೇಕೆಂದು ಹೊರಟಿರುವ ಸರ್ಕಾರದ ಉದ್ದೇಶವನ್ನು ನೋಡಿ ನಾನು ಬಹಳ ವಿಷಾದಪಡಬೇಕಾಗಿದೆ. ಸರ್ಕಾರದವರು ಈಗಲೂ ಕೂಡ ಈ ಹೆಸರನ್ನು ಬದಲಾಯಿಸುವುದರಿಂದ ದೇಶದ ಆರ್ಥಿಕತೆಯ ಮೇಲೆ ಎಷ್ಟು ದುಷ್ಪರಿಣಾಮವಾಗುತ್ತದೆ ಎನ್ನುವುದನ್ನು ಈ ಸರ್ಕಾರದವರು ಯೋಚನೆಮಾಡಲಿಲ್ಲ. ಬಹಳ ಆತುರಾತುರವಾಗಿ ಈ ನಿರ್ಣಯವನ್ನು ಈ ಸಭೆಯ ಮುಂದಿಟ್ಟಿದ್ದಾರೆಂಬುದಾಗಿ ನಾನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಮೊನ್ನೆತಾನೆ ಈ ಸಂಸ್ಥಾನದ ವಿದ್ಯಾಸಚಿವರು ವಿದ್ಯಾರ್ಥಿಗಳ ಮೇಲೆ ಶಾಲಾ ಶುಲ್ಕವನ್ನು ಏರಿಸಿ ಕೇವಲ 3½ ಅಥವಾ 4 ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಉತ್ಪತ್ತಿ ಬರುತದೆಂದು ತೋರಿಸಿದ್ದಾರೆ. ಅದರಿಂದ ಈ ದೇಶದಲ್ಲಿ ಏನೊಂದು ಕ್ರಾಂತಿಯಾಯಿತು. ಕೇವಲ 4 ಲಕ್ಷ ರೂಪಾಯಿಗಳ ಉತ್ಪತ್ತಿಯಿಂದ ಈ ದೇಶದಲ್ಲಿ ಒಂದು ಬೊಬ್ಬೆ ಉಂಟಾಯಿತು. ಇದನ್ನು ಗಮನಿಸಬೇಕು. ಅಂದಮೇಲೆ ಇವತ್ತು ಮೈಸೂರು ಎಂಬ ಹೆಸರನ್ನು ಬದಲಾಯಿಸಬೇಕಾದರೆ ಎಷ್ಟು ಕೋಟಿ ರೂಪಾಯಿಗಳು ದೇಶದ ಆರ್ಥಿಕತೆಯ ಮೇಲೆ ದುಷ್ಪರಿಣಾಮಉಂಟುಮಾಡುತ್ತದೆಂಬುದನ್ನು ಸರ್ಕಾರದವರು ದೀರ್ಘವಾಗಿ ಯೋಚಿಸಬೇಕೆಂದು ಸರ್ಕಾರದವರನ್ನು ನಾನು ಎಚ್ಚರಿಸುತ್ತೇನೆ. ಮತ್ತು ಈಗಿನ ಹೆಸರನ್ನು ಬದಲಾಯಿಸುವ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ಕೊಡುವುದಕ್ಕೆ ತಯಾರಿಲ್ಲದಿದ್ದರೂ ಇವತ್ತಿನ ಪರಿಸ್ಥಿತಿಯಲ್ಲಿ, ದೇಶದ ಆರ್ಥಿಕ ಹಾಗೂ ಐಕ್ಯತೆಯ ದೃಷ್ಟಿಯಿಂದ ಈ ಮೈಸೂರು ಎಂಬ ಹೆಸರನ್ನು ಬದಲಾಯಿಸಬಾರದು, ಅದರ ಒಗ್ಗಟ್ಟಿನ ಹಾಗೂ ಅದರ ಆರ್ಥಿಕತೆಯ ದೃಷ್ಟಿಯಿಂದ, ಆರ್ಥಿಕ ಮಟ್ಟದಲ್ಲಿ ಭದ್ರವಾದ ಪೆಟ್ಟು ಬೀಳುವಂಥ ಮತ್ತು ದೇಶದ ಐಕ್ಯತೆಗೆ ಭಂಗ ಮಾಡುವಂತಹ ಈ ಸಮಸ್ಯೆಯನ್ನು ಅಂದರೆ ಮುಖ್ಯವಾಗಿ ಮೈಸೂರು ಎಂಬ ಹೆಸರನ್ನು ಬದಲಾಯಿಸುವ ತಂಟೆಗೆ ಸರ್ಕಾರದವರು ಕೈಹಾಕಬಾರದು. ಇದನ್ನು ಈ ಸಭೆ ದೀರ್ಘವಾಗಿ ದೂರದೃಷ್ಟಿಯಿಂದ ಯೋಚನೆ ಮಾಡಬೇಕು ಎಂಬುದಾಗಿ ನಾನು ಈ ಮಾನ್ಯ ಸಭೆಯಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಭಾಷಾವಾರು ಪ್ರಾಂತದ ಮೇಲೆ ಇಡೀ ಇಂಡಿಯಾ ದೇಶದ ಅನೇಕ ಸಂಸ್ಥಾನಗಳು ರಚನೆಯಾಗಿವೆ. ಕೇರಳದಲ್ಲಿ ಮಲೆಯಾಳಿ ಬಾಷೆ ಆಡುತ್ತಾರೆ. ಅಲ್ಲಿ ಕೇರಳ ಎಂದೇ ಕರೆಯುತ್ತಾರೆಯೇ ಹೊರತು ಮಲೆಯಾಳಿ ಎಂದು ಕರೆಯಲಿಲ್ಲ. ಮದ್ರಾಸ್‌ನಲ್ಲಿ ತಮಿಳು ಭಾಷೆ ಆಡುತ್ತಾರೆ. ಮದ್ರಾಸ್ ಎಂದೇ ಕರೆಯುತ್ತಿದ್ದಾರೆ ತಮಿಳು ಎಂದು ಕರೆಯಲಿಲ್ಲ. ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿ ಅದೇ ಒಂದು ಹೆಸರಿನಿಂದ ಕರೆಯುತ್ತಿದ್ದಾರೆಯೇ ಹೊರತು ಮತ್ತೆ ಬೇರೊಂದು ಹೆಸರಿನಿಂದ ಕರೆಯುತ್ತಾ ಇಲ್ಲ, ಈಗ ಹೆಸರನ್ನು ಬದಲಾಯಿಸಿದರೆ ದೇಶದ ನಾಗರೀಕತೆ ಮತ್ತು ದೇಶದ ಉತ್ಪತ್ತಿಯೇನೂ ಜಾಸ್ತಿಯಾಗುವುದಿಲ್ಲ, ಈಗಿನದಕ್ಕಿಂತಲೂ ಮುಂದೆ ಹೆಚ್ಚು ಏನೂ ಅಭಿವೃದ್ಧಿಯಾಗುವುದಿಲ್ಲ. ದೇಶದಲ್ಲಿ ಇದರಿಂದ ಒಂದು ದೊಡ್ಡ ಕ್ರಾಂತಿಯನ್ನು ಉಂಟುಮಾಡುವುದಕ್ಕೆ ಅನೇಕರು ತಯಾರಿದ್ದಾರೆ ಎಂದು ಹೇಳಬಹುದು. ಪ್ರತಿಯೊಂದು ಸಂಸ್ಥಾನವನ್ನು ಭಾಷಾವಾರು ಪ್ರಾಂತ್ಯಗಳ ತತ್ವದ ಮೇಲೆ ಪುನರ್ವಿಮರ್ಶೆ ಮಾಡಿದ್ದಾರೆ. ಈ ದೇಶದವರು ಇನ್ನೂ ಈ ಕೆಲಸಕ್ಕೆ ಹೋಗಿಲ್ಲ. ಅಲ್ಲದೆ ಇದು ಒಂದು ತೀವ್ರಕಾರ್ಯವೆಂದು ಯಾರೂ ಕೈಹಾಕಲಿಲ್ಲ. ಶ್ರೀ ಗೋಪಾಲಗೌಡರು ಮಾತನಾಡುತ್ತಾ ಇವತ್ತಿನ ದಿವಸ ಯಾವುದು ತಕ್ಷಣ ನಡೆಯಬೇಕೋ ಆ ಕೆಲಸಕ್ಕೆ ನಾವು ಪ್ರಯತ್ನ ಮಾಡುತ್ತಿಲ್ಲ. ಯಾವುದೋ ಅನಾವಶ್ಯಕವಾದ ಕೆಲಸಗಳಿಗೆ ಮಾತ್ರ ಪ್ರಯತ್ನ ಮಾಡುತ್ತಿದ್ದಾರೆಂದು ಹೇಳಿದರು. ಅದು ಸತ್ಯ ಮತ್ತು ನಿಜಾಂಶವಾದುದು. ಇವತ್ತಿನ ದಿವಸ ಮೈಸೂರು ಎಂಬ ಹೆಸರನ್ನು ಬದಲಾಯಿಸಬೇಕು ಎಂಬ ಹುಚ್ಚನ್ನು ಬಿಡಬೇಕು. ಇದು ಬಹಳ ಕಠಿಣ ಸಮಸ್ಯೆಗಳಲ್ಲೊಂದು. ನಿಜವಾಗಿ ಈ ಹೆಸರನ್ನು ಬದಲಾಯಿಸುವುದರಿಂದ ದೇಶದ ಆರ್ಥಿಕತೆಯ ಮೇಲೆ ಇನ್ನೂ ಹೆಚ್ಚು ಪರಿಣಾಮ ಉಂಟುಮಾಡುವುದು. ಇದು ಖಂಡಿತವಾಗಿ ಯೋಗ್ಯ ಸಮಸ್ಯೆಯಲ್ಲವೆಂದು ನಾನು ಹೇಳುತ್ತೇನೆ.

4-00 P.M.

ಈ ದೇಶಕ್ಕೆ ಮೈಸೂರು ಎಂದೇ ಹೆಸರು ಇರಬೇಕು, ಬೆಂಗಳೂರೇ ರಾಜಧಾನಿಯಾಗಿರಬೇಕು ಎನ್ನುವಂಥಾ ಒಂದು ಕರಾರನ್ನು ಹಿಂದೆ ಇಟ್ಟಿದ್ದರು. ಅದೇ ರೀತಿ ಹಿಂದೆ ಎಲ್ಲರೂ ಒಪ್ಪಿಕೊಂಡಿದ್ದಾರೆ. ಇವೊತ್ತಿನ ದಿವಸ ಇವರು ಮೈಸೂರು ಎನ್ನುವ ಹೆಸರು ಬೇಡ ಕರ್ಣಾಟಕ ಎಂದು ಇಡಬೇಕೆಂದು ಹೇಳುತ್ತಿದ್ದಾರೆ. ನಾಳೆ ದಿವಸ ಬೆಂಗಳೂರು ರಾಜಧಾನಿ ಬೇಡ ಗುಲ್ಬರ್ಗಾವನ್ನೋ ಅಥವಾ ಬಿಜಾಪುರವನ್ನೋ ರಾಜಧಾನಿ ಮಾಡೋಣ ಎಂದು ಅವರು ಹೇಳಬಹುದು. ಈ ಸಂದರ್ಭದಲ್ಲಿ ನನಗೆ ಹಿಂದೆ ಚರಿತ್ರೆಯಲ್ಲಿ ಓದಿದಂಥ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ ಹಿಂದೆ ಮಹಮದ್‌ಬಿನ್ ತೊಗಲಕ್ ಎನ್ನುವ ದೊರೆ ಒಂದು ಕಡೆಯಿಂದ ಇನ್ನೊಂದ ಕಡೆಗೆ ರಾಜಧಾನಿಯನ್ನು ಬದಲು ಮಾಡುವುದಕ್ಕೆ ಹೋಗಿ ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡುವುದರ ಜೊತೆಗೆ ದೇಶದಲ್ಲೆಲ್ಲಾ ಅನಾಯಕತ್ವವನ್ನು ಉಂಟುಮಾಡಿದನು. ಅಂಥಾ ಒಂದು ಸಂದರ್ಭ ನಮಗೆ ಈಗ ಒದಗಬಾರದು. ಇದು ಬಹಳ ಮುಖ್ಯವಾದ ಪ್ರಶ್ನೆ. ನಾವೆಲ್ಲರೂ ಐಕ್ಯತೆಯಿಂದ ಕೆಲಸ ಮಾಡೋಣ ಈ ಒಂದು ಹೆಸರು ಬದಲಾವಣೆ ಮಾಡವುದರಿಂದ ದೇಶದ ಐಕ್ಯತೆಗೆ ಭಂಗ ಬರುತ್ತದೆ. ಆರ್ಥಿಕ ಭದ್ರತೆಗೆ ಪೆಟ್ಟು ಬೀಳುತ್ತದೆ. ಆದ್ದರಿಂದ ನಾವು ಈ ನಿರ್ಣಯವನ್ನು ತೀವ್ರವಾಗಿ

ವಿರೋಧಿಸುತ್ತೇವೆ. ಈ ನಿರ್ಣಯವನ್ನು ಈ ಸಭೆಯ ಮುಂದೆ ಇಟ್ಟಿರತಕ್ಕ ಮಾನ್ಯ ಸದಸ್ಯರು ದೇಶದ ಹಿತ ದೃಷ್ಟಿಯಿಂದ, ಆರ್ಥಿಕ ದೃಷ್ಟಿಯಿಂದ ಮತ್ತು ನಮ್ಮೆಲ್ಲರ ಹಿತದೃಷ್ಟಿಯಿಂದಲೂ ಈ ನಿರ್ಣಯವನ್ನು ಸದ್ಯಕ್ಕೆ ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಮುಂದೆ ಕಾಲ ಬಂದಾಗ, ಆಲ್ ಇಂಡಿಯಾ ಪಾಲಿಸಿ ಬಂದಾಗ ಇಂಡಿಯಾ ಸರ್ಕಾರದವರೇ ಇದನ್ನು ಬಗೆಹರಿಸಬಹುದು. ನಮ್ಮ ದೇಶದಲ್ಲಿ ಮುಂದೆ ಒಂದು ನೆಮ್ಮದಿ ಉಂಟಾದಂಥ ಕಾಲದಲ್ಲಿ ಈ ವಿಷಯವನ್ನು ದೀರ್ಘವಾಗಿ ಸಮಾಧಾನದಿಂದ ಯೋಚನೆ ಮಾಡೋಣ. ಇವೊತ್ತಿನ ಪರಿಸ್ಥಿತಿಯಲ್ಲಿ ಇದು ಮೈಸೂರು ಎಂದೇ ಉಳಿಯಬೇಕು. ಈ ನಿರ್ಣಯವನ್ನು ಮಾನ್ಯ ಸದಸ್ಯರು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ನಾವು ಕೊಟ್ಟಿರತಕ್ಕ ಅಭಿಪ್ರಾಯಗಳನ್ನೂ ಮತ್ತು ಈ ಒಂದು ಸಮಸ್ಯೆಯಲ್ಲಿ ದೇಶದಲ್ಲಿರತಕ್ಕ ಭಿನ್ನಾಭಿಪ್ರಾಯವನ್ನೂ ಯಾವ ಪಕ್ಷಪಾತ ಭಾವನೆಯೂ ಇಲ್ಲದೇ ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಈ ಬಗ್ಗೆ ಕೇಂದ್ರ ಸರ್ಕಾರದವರು ಯಾವ ಒಂದು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೋ ಅದಕ್ಕೆ ನಾವೆಲ್ಲರೂ ಭಾಗಿ ಆಗೋಣ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†Sri V. S. PATIL (Belgaum I).—Sir, this is a very simple matter made complicated or complex by the ruling party. Whether the State is called Mysore or Belgaum or Hubli or Karnatak or Mangalore, it makes practically no difference, but our friends of the ruling party are experts in making everything complex and creating difficulties in the working and never solving any problem smoothly. This is a matter which could be said to have two sides of the coin. One is old Mysore and the other is new Karnatak. The resolution that was read by the last speaker clearly mentions that it is a composite State and not a unilingual State. If we look to that resolution, then the basis can be said to be that some part of the predominantly Kannada area is to be joined to old Mysore State, but the persons who have come from the integrated areas feel that they have conquered this Mysore and amalgamated it in their Kannada area. These are the different views unnecessarily created and the matter has been pending before this august Assembly. During the last 5 years at every session most of the non-official time is taken away by this resolution and my friend Sri Doddameti must have spoken not less than 100 times on this resolution and still he has not been able to convince a single member from the old Mysore area about the rightness and the necessity etc. of this particular change of name.

ಶ್ರೀ ಎ. ಜೆ. ದೊಡ್ಡಮೇಟಿ,—ಹಳೆಯ ಮೈಸೂರಿನ 10 ಜನ ಮಾನ್ಯ ಸದಸ್ಯರು ಇದೇ ರೆಸಲ್ಯೂಷನ್ ಕಳುಹಿಸಿ ಕೊಟ್ಟಿದ್ದಾರೆ.

Sri V. S. PATIL.—As far as signing the resolution is concerened, I might have signed because some of my friends came and obtained my signature. I do admit that the resolution is there in my name because it is printed and I cannot deny it. What is really required is emotional feeling of the subjects of this State will have to be changed. Before we try and see that the emotional feelings of the subjects are one on this particular subject, it is no use pressing for this issue simply because a particular section has got the majority. It is no use using this weapon of majority for deciding each and every question against the wishes of the people. May I submit that we know that there are very sharp differences among the members of this Assembly so far as this question is concerned? Has anybody consulted the people of the State? Take for instance, the newly established Village Panchayats and Taluka Development Boards. Has this matter been ever referred to them as to what is their opinion? Do they concede to retain this particular name which is an old one or do they want to change it? We must remember that our voters are our masters and we cannot ignore their opinion and their opinion should be binding on us. So let us take the opinion of the Village Panchayats and the Taluka Development Boards and then let us find what is the majority view instead of canvassing one or two members here and bringing pressure on them saying that if you vote for this resolution I will support you in another matter. That is not the way to deal with this matter. That is why I submit that the matter may be referred, if not to the people in general, at least to the elected bodies of the people the Village Panchayats and the Taluka Development Boards for their opinion as to whether they are ready for the

(SRI V. S. PATIL)

change or whether they want to have the name changed to Vishala Mysore or Vishala Karnataka instead of creating all these difficulties and bickerings and misunderstandigs. Because just now one of my friends said that when the persons from outside came they asked for accommodation and they allowed them to stay in a small space, but now those very people coming from outside want to occupy the whole house and drive out the old people. That should not be the feelings of our people because that would come in the way of the major issue of national integration. So I submit that this matter should not be pressed for vote. It may be referred to our masters through the Village Panchayats and the Taluka Development Boards. But there also there is one difficulty. If this matter is referred there, then the Executive Officers and the Tahsildars and the Deputy Commissioners would say that this matter would not come within the jurisdiction of those bodies and they cannot decide or vote upon the matter. That is the difficulty which we have experienced because on our part our Village Panchayats and Taluka Development boards have passed resolutions that we want to go to Maharashtra, but the rod has come from the Deputy Commissioner and he has suspended all those resolutions saying that we have no jursdiction. So this is a matter which must be looked into by Government on whom the responsibility of national integration heavily lies. This should be given serious consideration and it should be thrashed out. As for me and my colleagues from the border area, we feel that the present name may be retained til this State becomes purely a Kannada State or a unilingual State.

So long as the Kannada areas that are lying outside the State are not integrated and so long as the Marathi-speaking people or the people speaking any other language are not excluded from this State, we cannot call it Karnataka. So, I submit that our veiw is that the present name should continue till it is a purely Kannada State. Then, we may call it Karnataka.

†ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇರತಕ್ಕ ಪ್ರಶ್ನೆ ಸೂಕ್ಷ್ಮ ವಾದದ್ದು. ಹಾಗೂ ಭಾವೋದ್ರೇಕಕ್ಕೆ ಸ್ವಲ್ಪ ಮಟ್ಟಿಗೆ ಎಡೆಕೊಡತಕ್ಕ ವಿಷಯವಾಗಿದೆ. ಈ ಪ್ರಶ್ನೆ ಕಳೆದ ನಾಲ್ಕೈದು ವರ್ಷಗಳಿಂದ ಈ ಸಭೆಯ ಮುಂದೆ ಆಗಾಗ್ಯೆ ಬರುತ್ತಾ ಇದೆ. ಕಳೆದ ಕೆಲವು ವರ್ಷ ಗಳಿಂದ ಈ ಸಭೆಯಲ್ಲಿ ನಡೆದ ಚರ್ಚೆಯನ್ನು ಜ್ಞಾಪ ಕಕ್ಕೆ ತಂದು ಕೊಳ್ಳುವುದಾದರೆ ಒಂದು ವಾದದವರು ಈಗಿರತಕ್ಕ ರಾಜ್ಯದ ಹೆಸರು ಈಗಿರುವಂತೆಯೇ ಉಳಿಯಬೇಕು ಎಂದು ಹೇಳುತ್ತಾ ಇದ್ದಾರೆ. ಇನ್ನೊಂದು ವಾದವುಳ್ಳವರು ಹೆಸರನ್ನು ಬದಲಾವಣೆ ಮಾಡಿ ಈ ರಾಜ್ಯಕ್ಕೆ ಕರ್ನಾಟಕ ಎಂಬುದಾಗಿ ಹೆಸರು ಇಡಬೇಕೆಂದು ಹೇಳುತ್ತಾ ಇದ್ದಾರೆ. ಇದು ಭಾವನೆಗೆ ಸಂಬಂಧಪಟ್ಟ ವಿಚಾರವಾಗಿದೆ. ಮೈಸೂರು ಎಂಬ ವಾದವುಳ್ಳವರು ಸಂಕುಚಿತ ಮನೋಭಾವ ಉಳ್ಳವರು, ಪ್ರಗತಿ ವಿರೋಧವಾದ ವರು, ದೇಶಾಭಿಮಾನ ಕಡಿಮೆಯಾದವರು ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಕರ್ನಾಟಕ ಎಂಬುದಾಗಿ ಹೆಸರು ಇರಬೇಕೆನ್ನುವವರು ಪ್ರಗತಿಗಾಮಿಗಳು, ದೇಶಾಭಿಮಾನಿಗಳು ವಗೈರೆ ಎಂಬುದಾಗಿ ಹೇಳುವು ದಕ್ಕೂ ಆಗುವುದಿಲ್ಲ. ಆದ್ದರಿಂದ ದೇಶಾಭಿಮಾನ, ಪ್ರಗತಿ ಇವುಗಳ ಪ್ರಸ್ತಾಪ ಅನಾವಶ್ಯಕ ಎಂದು ಅನಿಸುತ್ತದೆ. ಕನ್ನಡ ಮಾತನಾಡುವವರ ಒಕ್ಕೂಟ ಆಗಿದೆ. ಕನ್ನಡ ಪ್ರದೇಶಗಳ ವಿಲೀನೀಕರಣವಾಗಿ ನವ ಮೈಸೂರು ರಾಜ್ಯ ಸ್ಥಾಪನೆಯಾಗಿದೆ. ಈಗ ಹೆಸರು ಏನಿರಬೇಕು ಅಂತ ಹೇಳಿ, ಅದನ್ನು ವಿಚಾರ ಮಾಡುವುದಕ್ಕಿಂತ ಮುಂಚಿತವಾಗಿ ರಾಜ್ಯಗಳ ಪುನರ್ವಿಂಗಡಣೆ ಕಾಲದಲ್ಲಿ ಏನು ನಡೆಯಿತು ಎಂಬು ದನ್ನು ಸ್ವಲ್ಪ ಜ್ಞಾಪಕಕ್ಕೆ ತಂದುಕೊಳ್ಳುವುದು ಅವಶ್ಯಕ. 1956ನೇ ಇಸವಿಯಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಸಲುವಾಗಿ ನೇಮಕವಾದ ಸಮಿತಿಯವರು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟನಂತರ ಈ ದೇಶದ ಕೆಲವು ರಾಜ್ಯಗಳಲ್ಲಿ ಸ್ವಲ್ಪ ಮಟ್ಟಿಗೆ ಚಳುವಳಿ ನಡೆಯಿತು. ಮೈಸೂರು ರಾಜ್ಯ ದಲ್ಲೂ ಕೂಡ ಭಾಷೆಯ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆ ಬೇಡ ಎಂಬ ಒಂದು ಸಣ್ಣ ಚಳುವಳಿ ನಡೆಯಿತು. ಆ ಸಂದರ್ಭದಲ್ಲಿ ಹಿರಿಯರಾದವರು, ರಾಜ್ಯದ ಹಿರಿಯರು ಮತ್ತು ಕಾಂಗ್ರೆಸ್ ಸಂಸ್ಥೆಯಲ್ಲಿರ ತಕ್ಕ ಹಿರಿಯರು ಈ ವಿಚಾರದಲ್ಲಿ ಮಾತನಾಡಿ ಒಂದು ತಿಳಿ ವಾತಾವರಣವನ್ನುಂಟು ಮಾಡಿದರು. ಆ ಸಂದರ್ಭದಲ್ಲಿ ಆದ ಮಾತುಕತೆಗಳಲ್ಲಿ ನಾನು ಸ್ವಲ್ಪ ಭಾಗವಹಿಸಿದ್ದೆ. ಉತ್ತರ ಕರ್ನಾಟಕದ ಪರ ವಾಗಿ ಮಾತನಾಡಿದವರು ಮತ್ತು ಆಗ ಕಾಂಗ್ರೆಸ್ ಅಧ್ಯಕ್ಷರು ಆಗಿದ್ದ ಯು. ಎನ್. ಢೇಬರ್ ಅವರು ಹಿಂದಿನ ಮೈಸೂರು ರಾಜ್ಯದ ಜನರ ಪ್ರತಿನಿಧಿಗಳಿಗೆ ಕೆಲವು ಭರವಸೆಗಳನ್ನು ನೀಡಿದ್ದರು. ಒಂದನೆಯದು ಪುನರ್ವಿಂಗಡಣೆ ಆದ ನಂತರ ಸ್ಥಾಪನೆಯಾಗತಕ್ಕ ರಾಜ್ಯಕ್ಕೆ ಮೈಸೂರು ಎಂಬ ಹೆಸರನ್ನು ಇಟ್ಟುಕೊಳ್ಳು ವುದಕ್ಕೆ ನಾವು ಒಪ್ಪುತ್ತೇವೆ, ಬೆಂಗಳೂರು ರಾಜಧಾನಿ ಯಾಗಿರುವುದಕ್ಕೆ ಒಪ್ಪುತ್ತೇವೆ ಎಂಬುದಾಗಿ ಭರವಸೆ ಯನ್ನು ನೀಡಿದರು. ಅದು ಒಂದು ಒಪ್ಪಂದ ಆದ ಹಾಗೇ ಎಂದು ನಾನು ಭಾವಿಸಿದ್ದೇನೆ. ಇದು ಯಾವಾಗ ಆದದ್ದು? 1956ನೇ ಇಸವಿಯಲ್ಲಿ. ಕೆಲವರು ಹೇಳಬಹುದು, ನಾವೇನೂ ಅದಕ್ಕೆ ಪಾರ್ಟಿ ಆಗಿಲ್ಲ ಎಂದು. ಈಗಿನ ಬೊಂಬಾಯಿ ರಾಜ್ಯಕ್ಕೂ, ಮೈಸೂರು

ರಾಜ್ಯಕ್ಕೂ ಒಪ್ಪಂದವಾದರೆ 10 ವರ್ಷದ ನಂತರ ಬರುವವರು ನಮಗೆ ಸಂಬಂಧವಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಏನಾದರೂ ಇರಲಿ. ತಮಗೆ ಈಗ ಕರ್ನಾಟಕ ಎಂಬುದಾಗಿ ಈ ರಾಜ್ಯದ ಹೆಸರು ಇರಬೇಕೆಂಬುದರ ಬಗ್ಗೆ ಬಹುಮತ ಇದೆ ಎಂದು ತಿಳಿದುಕೊಂಡಿದ್ದೇನೆ. ಅದನ್ನು ತಿಳಿದುಕೊಂಡೇ ಮಾತನಾಡುತ್ತಾ ಇದ್ದೇನೆ. ಪ್ರಜಾ ಪ್ರಭುತ್ವದ ರೀತಿ ನೀತಿಗಳಿಗೆ ತಲೆ ಬಾಗುವವನಾಗಿದ್ದೇನೆ. ಇದು ಒಂದು ಭಾವನೆಗೆ ಸಂಬಂಧಪಟ್ಟ ವಿಚಾರ ಎಂದು ಹೇಳಿದೆ. ಕರ್ನಾಟಕ ಎಂಬ ಹೆಸರು ಇರಬೇಕೆಂದು ಹೇಳತಕ್ಕವರು ಎಷ್ಟು ಸದಭಿಪ್ರಾಯ ಉಳ್ಳವರಾಗಿದ್ದಾರೋ ಮೈಸೂರು ಎಂಬ ಹೆಸರು ಇರಬೇಕೆಂದು ಹೇಳತಕ್ಕವರಾದರೂ ಅಷ್ಟೇ ಸದಭಿಪ್ರಾಯ ಉಳ್ಳವರಾಗಿದ್ದಾರೆ. ಆದ್ದರಿಂದ ಒಬ್ಬರ ಅಭಿಪ್ರಾಯಕ್ಕೆ ಇನ್ನೊಬ್ಬರು ಮನ್ನಣೆ ಅಥವಾ ಗೌರವ ಕೊಡುವುದು ಅವಶ್ಯಕ ಎಂದು ಹೇಳಿ ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ನಾನು ಈ ಮೈಸೂರು ಎಂಬ ಹೆಸರು ಇರಬೇಕೆಂದು ಹೇಳತಕ್ಕವರು ಬಹಳ ನ್ಯಾಯಸ್ಥರು ಎಂಬುದಾಗಿ ವಾದವನ್ನು ಹೇಳುತ್ತಾ ಇಲ್ಲ. ಹೆಸರಿನ ಮೇಲೆ, ಅನೇಕ ಕಾರಣಗಳಿಂದ, ಚಾರಿತ್ರಿಕ ಕಾರಣಗಳಿಂದ, ಪರಂಪರೆಯ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಮಮತೆ, ವಿಶ್ವಾಸ, ವ್ಯಾಮೋಹ ಬೆಳೆದು ಬಂದಿದೆ. ಅದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಒಬ್ಬೊಬ್ಬರು ಮಾತನಾಡುವಾಗ ಜಾತಿ ಮುಂತಾದ ವಿಚಾರಗಳನ್ನು ಪ್ರಸ್ತಾಪಮಾಡಿದ್ದು ಅನಾವಶ್ಯಕ. ಮೈಸೂರು ಎಂಬುದಾಗಿ ರಾಜ್ಯದ ಹೆಸರು ಇದ್ದರೆ ಯಾವ ಒಂದು ಜಾತಿಗೂ ಪ್ರಯೋಜನವಾಗುವುದಿಲ್ಲ ಅಥವಾ ಕರ್ನಾಟಕ ಅಂತ ಹೇಳಿ ರಾಜ್ಯದ ಹೆಸರು ಆದರೆ ಯಾವುದೇ ಒಂದು ಜಾತಿಗೇ ಆದರೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಜಾತೀಯತೆಯ ಪ್ರಸ್ತಾಪ ಅನಾವಶ್ಯಕ ಎಂದು ಅನಿಸುತ್ತದೆ. ಇದನ್ನು ಅಷ್ಟು ಮಟ್ಟಿಗೆ ನಿಷ್ಪಕ್ಷಪಾತವಾದ ದೃಷ್ಟಿಯಿಂದ ಪರಿಶೀಲನೆ ಮಾಡತಕ್ಕದ್ದು ಬಹಳ ಅಗತ್ಯ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಭಾವೈಕ್ಯತೆಯ ದೃಷ್ಟಿಯಿಂದ ರಾಜ್ಯದ ಹೆಸರು ಬದಲಾವಣೆ ಮಾಡಬೇಕೆನ್ನುವ ವಾದವನ್ನು ಇಟ್ಟುಕೊಂಡರೆ, ಮೈಸೂರು ರಾಜ್ಯವೈಸೂರಾಗಿಯೇ ಉಳಿದರೂ ಕೂಡ ಭಾವೈಕ್ಯತೆ ಶಾಶ್ವತವಾದ ತಳಹದಿ ಮೇಲೆ ಆಗುವುದಿಲ್ಲ. ಕರ್ನಾಟಕ ಎಂಬುದಾಗಿ ಕರೆದರೂ ಕೂಡ ಶಾಶ್ವತ ತಳಹದಿ ಮೇಲೆ ಭಾವೈಕ್ಯತೆ ಆಗುವುದಲ್ಲ. ದೇಶದಲ್ಲಿ ಶಾಶ್ವತವಾದ ತಳಹದಿಯ ಮೇಲೆ ಭಾವೈಕ್ಯತೆ ಆಗಬೇಕಾದರೆ ಸಾಮಾನ್ಯ ಜನಗಳಿಗೆ ನಾವು ಈ ದೇಶದ ಆಗು ಹೋಗುಗಳಲ್ಲಿ, ಈ ದೇಶದ ಸಾಧನ ಸಂಪತ್ತುಗಳಲ್ಲಿ ಪರಿಣಾಮಕಾರಿಯಾದ ಪಾತ್ರವನ್ನು ವಹಿಸತಕ್ಕ ಚೈತನ್ಯವನ್ನು ಪಡೆದಿದ್ದೇವೆ ಎಂಬ ಧೈರ್ಯ ಅವರಲ್ಲಿ ಬಂದರೆ ಮಾತ್ರ ಆಗ ನಿಜವಾಗಿಯೂ ಭಾವೈಕ್ಯತೆ ಉಂಟಾಗುತ್ತದೆ. ಯಾವಾಗ ಇದ್ದವರಿಗೂ, ಇಲ್ಲದವರಿಗೂ ಇರತಕ್ಕ ಅಜಗಜಾಂತರ ವ್ಯತ್ಯಾಸ ಕಡಿಮೆಯಾಗಿ, ರಾಜ್ಯಾಂಗದಲ್ಲಿ ಏಧಾಯಕವಾಗಿರತಕ್ಕ ಸಮಾನ ಅವಕಾಶ, ಸಾಮಾಜಿಕ ನ್ಯಾಯ, ಮೂಲಭೂತ ಹಕ್ಕು, ಇವುಗಳು ಸರಾಗವಾಗಿ ಸಾಮಾನ್ಯ ಪ್ರಜೆಗಳಿಗೆ ದೊರೆಯುತ್ತವೆಯೋ ಆಗ ಭಾವೈಕ್ಯತೆಗೆ ಶಾಶ್ವತ ತಳಹದಿಯೇ ಉಂಟಾಗುತ್ತದೆ. ಯಾವಾಗ ಈ ದೇಶದ ರಾಜಕಾರಣ, ಸಿದ್ಧಾಂತಗಳ ಆಧಾರದ ಮೇಲೆ, ತತ್ವಗಳ ಆಧಾರದ ಮೇಲೆ, ಮಾನವೀಯತೆಯ ಆಧಾರದ ಮೇಲೆ ನಡೆಯುತ್ತದೆಯೋ ಆಗ ಭಾವೈಕ್ಯತೆ ಶಾಶ್ವತ ತಳಹದಿಯ ಮೇಲೆ ಉಂಟಾಗುತ್ತದೆ.

ಆದುದರಿಂದ ಇದನ್ನು ಅನಾವಶ್ಯಕವಾಗಿ ಬೆಳೆಸುವುದು ಬೇಡ. ಕರ್ಣಾಟಕ ಎಂದು ಹೆಸರು ಬಂದರೆ ಜನಕ್ಕೆ ತೃಪ್ತಿಯಾಗುವುದಿಲ್ಲವೆಂದು ನಾನು ಹೇಳುವುದಿಲ್ಲ; ನಿಜವಾಗಿಯೂ ಅವರಿಗೆ ತೃಪ್ತಿಯಾಗುತ್ತದೆ. ಆದರೆ ನಾನಾಗಲೇ ಹೇಳಿದ ಹಾಗೆ, ಒಬ್ಬರ ಭಾವನೆಯನ್ನು ಇನ್ನೊಬ್ಬರು ಅರ್ಥಮಾಡಿಕೊಂಡು, ಗೌರವ ಕೊಡುವುದು ಅವಶ್ಯಕ. ನಾನು ಹೇಳಿದ ಹಾಗೆ ಈ ರಾಜ್ಯದ ಹೆಸರು ಕರ್ಣಾಟಕ ಎಂದಿರಬೇಕು ಎಂದು ಹೇಳುವವರ ವಿಚಾರದಲ್ಲಿ ನಾನು ಗೌರವವನ್ನು ಹೊಂದಿದ್ದೇನೆ. ಶ್ರೀಮಾನ್ ದೊಡ್ಡಮೇಟಿಯವರು ಈ ವಿಷಯದಲ್ಲಿ ಸತತ ಪ್ರಯತ್ನ ಮಾಡುತ್ತಿದ್ದಾರೆ; ಅವರಲ್ಲಿಯೂ ಅವರ ಭಾವನೆಯಲ್ಲಿಯೂ ನನಗೆ ಗೌರವವಿದೆ. ಮೈಸೂರು ಎಂಬ ಹೆಸರೇ ಇರಬೇಕೆಂದು ಯಾರು ಹೇಳುತ್ತಾರೋ ಅವರ ವಿಷಯದಲ್ಲಿಯೂ ಮಾನ್ಯ ಸದಸ್ಯರು ಗೌರವವನ್ನಿಡಬೇಕು, ಈ ಭಾವನೆಗೂ ಗೌರವ ದೊರಕಬೇಕೆಂದು ಹೇಳುತ್ತೇನೆ. ಭಾವೈಕ್ಯತೆ ಉಂಟಾಗಬೇಕಾದರೆ, ಈ ಎರಡು ವಾದಗಳನ್ನು ಹೊಂದಿದ ಜನರಿಗೆ ಸಾಧಾರಣವಾಗಿ ತೃಪ್ತಿಕರವಾಗಿರಬೇಕು. ಹಾಗಿಲ್ಲದೆ ಬಹುಮತದ ಆಧಾರದ ಮೇಲೆ ನಿರ್ಣಯವನ್ನು ಅಂಗೀಕಾರ ಮಾಡಿದರೆ, ನಿಜವಾಗಿಯೂ ಭಾವೈಕ್ಯತೆಯುಂಟಾಗುವುದಿಲ್ಲವೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಬಹುಮತದಿಂದ ಗೆಲ್ಲಬಹುದು, ಆದರೆ ಯಾವ ಉದ್ದೇಶದಿಂದ ಈ ರಾಜ್ಯದ ಹೆಸರು ಬದಲಾವಣೆಯಾಗಬೇಕೆಂದು ವಾದ ಮಾಡುತ್ತಿದ್ದಾರೋ ಆ ಉದ್ದೇಶ ಸಾಕಷ್ಟು ಮಟ್ಟಿಗೆ ಸಫಲವಾಗಲಾರದೆಂದು ನನಗನ್ನಿಸುತ್ತದೆ. ಈ ವಿಷಯದಲ್ಲಿ ನಾನು ಎರಡು ಮೂರು ದಿನಗಳಿಂದ ಕೆಲವರ ಹತ್ತಿರ ಮಾತನಾಡುತ್ತಿದ್ದೇನೆ. ಎರಡು ಅಭಿಪ್ರಾಯಗಳನ್ನೂ ಪಡೆದಿರುವ ಜನರಿಗೆ ತೃಪ್ತಿಕರವಾದ ರೀತಿಯಲ್ಲಿ ಯಾವುದಾದರೂ ಒಂದು ಸೂತ್ರವನ್ನು ಕಂಡು ಹಿಡಿಯುವುದು ಅಗತ್ಯವೆಂದು ನನಗನ್ನಿಸಿದೆ. ಈ ಪ್ರಶ್ನೆಯನ್ನು ಅದಷ್ಟು ಜಾಗ್ರತೆ ಬಗೆಹರಿಸಬೇಕಾದುದು ಅಗತ್ಯವೆನ್ನುವುದನ್ನೂ ನಾನು ಮನಗಂಡಿದ್ದೇನೆ. ಪಕ್ಕದ ಮದರಾಸು ರಾಜ್ಯದಲ್ಲಿ ಅವರೊಂದು ಸೂತ್ರವನ್ನು ಅನುಷ್ಠಾನಕ್ಕೆ ತಂದಿದ್ದಾರೆ. ಅಲ್ಲಿ ಬಹು ಮಂದಿ ತಮಿಳರಿದ್ದಾರೆ. ಅವರಿಗೂ ಅವರ ಭಾಷೆಯ ಮೇಲೆ ಮಮತೆ, ವಿಶ್ವಾಸ ಇದ್ದೇ ಇದೆ. ಆದರೆ ಅವರು ಆಂತರಿಕ ವ್ಯವಹಾರಗಳಿಗೆ ಸಂಬಂಧಪಟ್ಟ ಹಾಗೆ ರಾಜ್ಯದ ಹೆಸರನ್ನು 'ತಮಿಳುನಾಡು' ಎಂದು ಕರೆಯುತ್ತಿದ್ದಾರೆ, ಹೊರಗಡೆ ವ್ಯವಹಾರಗಳಿಗೆ 'ಮದರಾಸು' ಎಂದು ಹೇಳುತ್ತಿದ್ದಾರೆ. 'ನೀನು ಹೆಸರಿಗೇಕೆ ಇಷ್ಟು ಅಂಟಿಕೊಂಡಿದ್ದೀಯ' ಎಂದು ನನ್ನನ್ನು ಯಾರಾದರೂ ಕೇಳಬಹುದು. ಮೈಸೂರಿನ ಹಿನ್ನೆಲೆಯಲ್ಲಿ ಇತಿಹಾಸವಿದೆ. ಎಂದ ಮಾತ್ರಕ್ಕೇ ಕರ್ಣಾಟಕ ಎಂಬ ಹೆಸರಿಗೆ ಹಿನ್ನಲೆಯಿಲ್ಲವೆಂದು ನಾನು ಹೇಳುವುದಿಲ್ಲ. ಮೈಸೂರಿಗೆ goodwill ಇದೆ. ಅಮೇರಿಕಕ್ಕೆ ಹೋದರೆ, ಅಲ್ಲಿ ಮೈಸೂರು ಎಂದು ಹೇಳಿದರೆ ಅಲ್ಲಿನ ಜನರಿಗೆ ಒಂದು ಕಲ್ಪನೆ ಬರುತ್ತದೆ, ಅವರಲ್ಲಿ ಅನೇಕರು ಇಲ್ಲಿಗೆ ಬಂದು ಹೋಗಿದ್ದಾರೆ. ಕರ್ಣಾಟಕ ಎಂದರೆ, ಹೊಸ ಹೆಸರು, ಅವರಿಗೆ ಹೊಸದಾಗಿ ಹೇಳಬೇಕಾಗುತ್ತದೆ, ಆದುದರಿಂದ ಮದರಾಸಿನವರ ಮಾದರಿಯನ್ನನುಸರಿಸಿದರೆ, ಇಬ್ಬರ ಭಾವನೆಗಳಿಗೂ ಕೂಡ ಒಂದು ವಿಧವಾದ ಸಮನ್ವಯವನ್ನು ದೊರಕಿಸಿದ ಹಾಗಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಶುದ್ಧ

(ಶ್ರೀ ಕಡಿದಾಳ್ ಮಂಜಪ್ಪ)

ಕನ್ನಡಿಗ, ನನ್ನ ತಾಯ್ನುಡಿ ಕನ್ನಡ; ಆದುದರಿಂದ ಕನ್ನಡದ ಮೇಲೆ ನನ್ನ ಸ್ನೇಹಿತರಿಗೆ ಕೆಲವರಿಗೆ ಎಷ್ಟು ಮಮತೆ ವಿಶ್ವಾಸ ಇದೆಯೋ ಅಷ್ಟೇ ಮಮತೆ ವಿಶ್ವಾಸ ನನಗೂ ಇದೆ. ಕನ್ನಡ ಭಾಷೆಯ ಬೆಳವಣಿಗೆ ಆಗುವುದಕ್ಕೆ ಸ್ವಲ್ಪ ಮಟ್ಟಿಗೆ ಶ್ರಮಿಸಿದ್ದೇನೆ, ಹೆಚ್ಚು ಶ್ರಮಿಸಿಲ್ಲ. 'ಹಾವೇರಿ ನ್ಯಾಯ' ಎಂದು ಹೇಳುವ ಹಾಗೆ, ಕನ್ನಡದಲ್ಲಿ ನನಗೆ ಪ್ರೇಮ ಕಡಮೆ ಎಂದು ಹೇಳುವ ಹಾಗಿಲ್ಲ. ಉಭಯತಾಪಿ ಸರಿಹೋಗುವ ಸೂತ್ರವನ್ನು ಒಪ್ಪಿ ಅನುಸರಿಸಿದರೆ ಈ ರಾಜ್ಯದ ಜನರಿಗೆ ಕ್ಷೇಮ, ಬರಿಯ ಹಟವನ್ನು ಮಾಡಬೇಕಾಗಿಲ್ಲ ಎಂದು ಎರಡು ವಾದದವರಿಗೂ ಮನವಿ ಮಾಡಿಕೊಳ್ಳುತ್ತೇನೆ. ಇದರಿಂದ ತೊಂದರೆಯಾಗುವುದಿಲ್ಲ. ಈ ರಾಜ್ಯದ ಹೆಸರು ಮೈಸೂರು ಎಂದಾದರೆ ಅಥವಾ ಕರ್ಣಾಟಕ ಎಂದಾದರೂ ಅನೇಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗುವುದಿಲ್ಲ, ನಮ್ಮಲ್ಲಿರುವ ಭಾವನೆಗಳಿಗೆ ತೃಪ್ತಿ ಪಡೆಯುವುದಕ್ಕಾಗುವುದಿಲ್ಲ. ಸೌಹಾರ್ದ ರೀತಿಯಲ್ಲಿ ಉಭಯತಾಪಿ ತೃಪ್ತಿಕರವಾಗುವ ಸೂತ್ರವನ್ನು ನಾವು ಒಪ್ಪಿಕೊಳ್ಳುವುದು ಒಳ್ಳೆಯದೆಂದೂ ಮದರಾಸಿನಲ್ಲಿ ಏನು ಸೂತ್ರವನ್ನು ಅನುಸರಿಸಿದ್ದಾರೋ ಅದೇ ಸೂತ್ರವನ್ನನುಸರಿಸಬೇಕೆಂದೂ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಮೈಸೂರು-ಕರ್ಣಾಟಕ ಎಂತಲೋ ಅಥವಾ ಮೈಸೂರು (ಕರ್ಣಾಟಕ) ಎಂತಲೋ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ತಿಳಿದ ಮಟ್ಟಿಗೆ ಮದರಾಸಿನ ಆಂತರಿಕ ವ್ಯವಹಾರಗಳಿಗೆ 'ತಮಿಳುನಾಡು' ಎಂದೂ ಹೊರಗಡೆ ವ್ಯವಹಾರ ಮಾಡುವಾಗ 'ಮದರಾಸು' ಎಂದೂ ಇಟ್ಟುಕೊಂಡಿದ್ದಾರೆ.

ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ (ಷಹಾಪುರ).—ಮಾನ್ಯ ಅಧ್ಯಕ್ಷರೆ, ನಮ್ಮ ಸಭೆಯ ಸದಸ್ಯರೂ ನನ್ನ ಮಿತ್ರವರ್ಯರೂ ಆಗಿರುವ ಶ್ರೀಮಾನ್ ಆರ್. ಎಸ್. ಪಾಟೀಲ್ ಅವರು ಮಂಡಿಸಿರತಕ್ಕ ಈ ಗೊತ್ತುವಳಿಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಸ್ವಾಮಿ, ನಮ್ಮ ಸಭೆಯಲ್ಲಿರತಕ್ಕ ಕೆಲವರು ಮಿತ್ರರು ನಮ್ಮ ರಾಜ್ಯಕ್ಕೆ ಈಗಿರತಕ್ಕ ಹೆಸರೇ ಯೋಗ್ಯ ಹೊಸದಾಗಿ ಕರ್ಣಾಟಕ ಎಂಬ ಹೆಸರಿಡುವುದು ಬೇಡ ಎಂದು ಹೇಳಿದರು. ಕರ್ಣಾಟಕ ಎಂದರೆ, ಕರ್‌ನಾಟಕ ಎಂದಾಗುತ್ತದೆ ಎಂದು ಶ್ರೀಮಾನ್ ಮುಕ್ಕಣ್ಣಪ್ಪನವರು ಒಂದು ದೃಷ್ಟಿಯಿಂದ ಹೇಳುತ್ತಿದ್ದಾರೆ. ಆದರೆ ಕರ್ಣಾಟಕದ ಹಿನ್ನೆಲೆ, ಪ್ರಾಚೀನತೆ ಎಲ್ಲಿಂದ ಬಂದಿದೆ ಎನ್ನುವುದನ್ನು ಸಭೆಯ ಮುಂದಿಡುತ್ತಿದ್ದೇನೆ. ಸ್ವಾಮಿ, ಸುಮಾರು ಆರನೆಯ ಶತಮಾನದಲ್ಲಿ ಅಜೇಯನೆಂದೂ ದೊಡ್ಡ ಸಾಮ್ರಾಟನೆಂದೂ ಬಿರುದು ಪಡೆದಿದ್ದ ನೃಪತುಂಗನು ಕವಿರಾಜ ಮಾರ್ಗವೆಂಬ ಛಂದೋಂಬುಧಿ ಎಂಬ ಗ್ರಂಥದಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ನಾಡು-ಕರ್ಣಾಟಕ ಎಂದು ವಿವರಿಸಿದ್ದಾನೆ. ಆ ಗ್ರಂಥವನ್ನು ನೋಡಿದರೆ ಸಾಕು. ಇಂಥ ಮಹಾ ಚಕ್ರವರ್ತಿಗಳಿಂದಲೂ ಕವಿಗಳಿಂದಲೂ ವರ್ಣಿಸಲ್ಪಟ್ಟ ಈ ಕರ್ಣಾಟಕ ಶಬ್ದ ಎಷ್ಟು ಹೃದಯಂಗಮವಾಗಿದೆ ಎನ್ನುವುದನ್ನು ಗುರುತಿಸಲು ತಮಗೆಲ್ಲರಿಗೂ ಸಾಧ್ಯ.

4-30 P.M.

ಸ್ವಾಮಿ, ನಮ್ಮ ಕರ್ಣಾಟಕದಲ್ಲಿ ಹುಟ್ಟಿ ಬೆಳೆದು ಎಷ್ಟೋ ದಿವಸಗಳವರೆಗೆ ತನ್ನ ದೇಶವನ್ನು ಸ್ವತಂತ್ರವಾಗಿ ಆಳಿರುವ ಪರಮೇಶ್ವರ ಪುಲಿಕೇಶಿಯಿಂದ ನಿರ್ಮಿಸಲ್ಪಟ್ಟ ಎಲ್ಲೋರಾ ಮತ್ತು ಅಜಂತ ಗುಹೆಗಳು ಹೈದರಾಬಾದಿನಲ್ಲಿವೆ. ಔರಂಗಾಬಾದ್ ಮೇಲೆ ಅಜಂತಾಕ್ಕೆ ಹೋಗುವ ದಾರಿಯಲ್ಲಿ ಒಂದು ಸಣ್ಣ ಗ್ರಾಮವಿದೆ. ಅದರ ಹೆಸರು ಕನ್ನಡ ಎಂಬುದಾಗಿದೆ. ಅದು ಗ್ರಾಮ ಮಾತ್ರ ಅಲ್ಲ, ತಾಲ್ಲೂಕ್ ಹೆಡ್ ಕ್ವಾರ್ಟರ್, ಅಜಂತಾದಿಂದ ಔರಂಗಾಬಾದಿಗೆ ಹೋಗಬೇಕಾದರೆ ಕನ್ನಡ ಎಂಬ ಗ್ರಾಮದ ಮೇಲೆಯೇ ಹೋಗಬೇಕು. ಅಲ್ಲದೆ ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ನಮ್ಮ ಕರ್ಣಾಟಕ ದೇಶದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ತಮ್ಮ ಕಾವ್ಯಗಳ ಮೂಲಕ ಬೆಳೆಸಿ ಉನ್ನತ ಸ್ಥಿತಿಗೆ ತರಲು ಪ್ರಯತ್ನ ಮಾಡಿದ ಪಂಪ, ರನ್ನ ಮತ್ತು ಜನ್ನ—ಈ ಮೂರು ಕವಿಗಳಿಗೂ ಕೂಡ ಆ ಒಂದು ಕಾಲದಲ್ಲಿ ಕರ್ಣಾಟಕ ಕವಿರತ್ನ ತ್ರಯಗಳೆಂದು ಬಿರುದು ಬಂದಿದೆ. ಕನ್ನಡ ಭಾಷೆಯಲ್ಲಿ ಅಗ್ಗಳವಾದ ಒಳ್ಳೆಯ ಕ್ಲಿಷ್ಟ ರೂಪವಾದ ಕಾವ್ಯರಚಿಸಿದ ರನ್ನನಿಗೆ ಕರ್ಣಾಟಕ ಕವಿ ಚಕ್ರವರ್ತಿ ಎಂಬ ಬಿರುದಿತ್ತು. ಇದು ಅನೇಕರಿಗೆ ಗೊತ್ತಿದೆ. ನಮ್ಮ ಮೈಸೂರು ಸರ್ಕಾರದಿಂದ ಮುದ್ರಿಸಲ್ಪಟ್ಟಿರುವ ಲಕ್ಷ್ಮೀಶ ಕವಿಯಿಂದ ರಚಿತವಾದ ಜೈಮಿನಿ ಭಾರತವು ಹೃದಯಂಗಮವಾಗಿಯೂ, ಮಾಧುರ್ಯವಾಗಿಯೂ, ರಸಭರಿತವಾಗಿಯೂ ಇದ್ದುದರಿಂದ ಈ ಕವಿಗೆ ಕರ್ಣಾಟಕ ಕವಿ ಚೂತವನ ಚೈತ್ರ ಎಂಬ ಬಿರುದು ಬಂದಿತ್ತು. ಇಂಥ ಯಾವ ಮಹಾಶಯರಿಂದ ಬಂದಿರುವ ಈ ಕರ್ಣಾಟಕ ಎಂಬ ಶಬ್ದ ನಮ್ಮೆಲ್ಲರ ಹೃದಯದ ಮೇಲೆ ಸುಂದರವಾಗಿಯೂ, ನಿರ್ಮಲವಾಗಿಯೂ ಉಳಿದಿದೆ. ಹಾಗಿರುವಾಗ ಈ ಶಬ್ದವನ್ನು ತಾವು ಯಾವುದೋ ಒಂದು ದೃಷ್ಟಿಯಿಂದ ವಿರೋಧಿಸುತ್ತೀರಲ್ಲಾ! ಇದು ನೀತಿಯೇ ಸ್ವಾಮಿ ? ಹೀಗೆಯೇ ವಿಚಾರ ಮಾಡುತ್ತಾ ಹೋದರೆ ನಮ್ಮ ಹಿಂದಿನ ಅರಸರಾಗಿದ್ದ ರಾಜ್ಯಪಾಲರಿಗೆ ಒಂದು ಬಿರುದಿತ್ತು. ಅದನ್ನೂ ಸಹ ನೋಡಬಹುದು. ಕರ್ಣಾಟಕ ರತ್ನ ಸಿಂಹಾಸನಾಧೀಶ್ವರ ಶ್ರೀಮದ್ ರಾಜಾಧಿರಾಜ ಜಯಚಾಮರಾಜ ಒಡೆಯರ್ ಬಹದ್ದೂರ್ ಎಂಬ ಬಿರುದು ಅವರಿಗಿತ್ತು. ಸವಾಗೆ ಕಿರೀಟ ಪ್ರಾಯರಾಗಿರುವ ಅವರಿಗೆ ಕರ್ಣಾಟಕದ ರಾಜ್ಯಪಾಲರ ಪದವಿ ಲಭಿಸಿದೆ. ಇದನ್ನೆಲ್ಲಾ ವಿಚಾರ ಮಾಡಿ ನೋಡಿ ಸಂತೋಷಕರವಾದ ಕರ್ಣಾಟಕ ಎಂಬ ಹೆಸರಿನಿಂದ ಈ ದೇಶವನ್ನು ಕರೆದರೆ, ಆ ಒಂದು ನಾಮ ಕೊಟ್ಟರೆ ಏನು ತೊಂದರೆಯೂ ಆಗಲಿಕ್ಕಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಹೇಳುವುದು ಸರಿಯಲ್ಲ. ಮಹಾರಾಷ್ಟ್ರದಲ್ಲಿ ಔರಂಗಾಬಾದ್ ಡಿಸ್ಟ್ರಿಕ್ಟಿನಲ್ಲಿ ಕನ್ನಡ ಎಂಬ ಒಂದು ಹಳ್ಳಿ ಇದೆ, ಅಷ್ಟೆ. ಆದರೆ ಆ ಹಳ್ಳಿಗೂ ಕರ್ಣಾಟಕ ಎಂಬುದಕ್ಕೂ ಇಮಾಂಸಾಬರಿಗೂ ಗೋಕುಲಾಷ್ಟಮಿಗೂ ಎಷ್ಟು ಸಂಬಂಧವಿದೆಯೋ ಅಷ್ಟೇ ಸಂಬಂಧವಿದೆ. (ನಗು.)

ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಮಂತ್ರಿಗಳು).—ಶ್ರೀ ಮುಕ್ಕಣ್ಣಪ್ಪನವರು ಹೇಳುವುದು ನಿಜವಲ್ಲ. ಔರಂಗಾಬಾದ್ ಹತ್ತಿರ ಕನ್ನಡ ಎಂಬ ಸ್ಥಳವಿದೆ. ನಾನು ಅಲ್ಲಿಗೆ ಹೋಗಿದ್ದಾಗ ಅದರ ಹೆಸರು ಕೇಳಿ ಆಶ್ಚರ್ಯವಾಯಿತು. ಅದು ಹಳ್ಳಿಯಲ್ಲ. ಅದು ತಾಲ್ಲೂಕ್ ಸ್ಥಳವೇ ಆಗಲಿ, ಹಳ್ಳಿಯೇ ಆಗಲಿ, ಏನೇ ಇರಲಿ ಮುಕ್ಕಣ್ಣಪ್ಪನವರು ಅಥವಾ ಇತರರು ಅದರ ಚರ್ಚೆ ಮಾಡುವುದು ಬೇಡ.

ಶ್ರೀ ಮಹಂತಸ್ವಾಮಿ ವಿರೂಪಾಕ್ಷಯ್ಯ.—ಸ್ವಾಮಿ, ನಮ್ಮ ಕರ್ಣಾಟಕದ ಸಾಮ್ರಾಟರಿಂದ ರಚಿಸಲ್ಪಟ್ಟ

ರುವ ಗುಹೆಗಳಿಗೆ ಹೋಗಬೇಕಾದರೆ ಕನ್ನಡ ಎಂಬ ತಾಲ್ಲೂಕ್ ಹೆಡ್‌ಕ್ವಾರ್ಟರ್ ಹಾದಿಯಲ್ಲಿ ಸಿಗುತ್ತದೆ. ಅದಿರಲಿ, ಕರ್ಣಾಟಕ ಮಾತೆ, ಕರ್ಣಾಟಕಾಂಬೆ, ಕರ್ಣಾಟಕದ ರಾಜರಾಜೇಶ್ವರಿ ಎಂಬ ಹಲವಾರು ವಿಧವಾದ ನಾಮಗಳು ತಮ್ಮ ಹೃದಯಾಂತರಾಳದ ಚಿತ್ರಪಟದ ಮೇಲೆ ಪ್ರಕಾಶಮಾನವಾಗಿರುವಾಗ ಕರ್ಣಾಟಕ ಎಂಬ ಶಬ್ದ ಬೇಡ ಎಂದು ಹೇಳುವುದು ಯಾವ ನ್ಯಾಯ ?

ಮೈಸೂರು ಎಂದು ಕರೆಯುವುದಕ್ಕೆ ಹಿನ್ನೆಲೆ ಉಂಟು ಎಂದು ಮೈಸೂರು ಮಿತ್ರರು ಹೇಳಿದರು, ಇರಬಹುದು. ಕನ್ನಡನಾಡಿನ ಘನತೆಯನ್ನು, ಶ್ರೇಯಸ್ಸನ್ನು, ಸಂಸ್ಕೃತಿಯನ್ನು ಕವಿಗಳು ತಮ್ಮ ಕೃತಿಯಲ್ಲಿ ಲೇಖನಗಳಲ್ಲಿ ಕಾಪಾಡಿ ಕರ್ಣಾಟಕದ ಕೀರ್ತಿಯನ್ನು ಹರಡಿದ್ದಾರೆ. ಇಡೀ ಹಿಂದೂಸ್ಥಾನ ದಲ್ಲಿ ಕನ್ನಡ ಕವಿಗಳು ಒಳ್ಳೆಯ ಹಿರಿಮೆಯನ್ನು ಬೆಳೆಸಿರುವಾಗ ಸಮಯಬಂದಲ್ಲಿ ಕರ್ಣಾಟಕಕ್ಕೆ ಕೊರತೆಯುಂಟೆ ? ಇಂಥ ಮಹಾ ಕವಿಗಳು ನಮ್ಮಲ್ಲಿ ಇದ್ದರು. ಕರ್ಣಾಟಕದ ಹಿರಿಮೆಯನ್ನು ಮತ್ತು ಕರ್ಣಾಟಕ ಎಂಬ ಶಬ್ದದ ಪ್ರಾಚೀನತೆಯನ್ನು ವಿಚಾರ ಮಾಡಿ ವಿಶಾಲ ಮೈಸೂರಿಗೆ ಕರ್ಣಾಟಕ ಎಂಬ ಒಂದು ಹೃದಯಂಗಮವಾದ ಹೆಸರನ್ನಿಟ್ಟರೆ ಯಾವ ತಪ್ಪಿದೆ ? ಕನ್ನಡ ಭಾಷೆಯನ್ನು ಅನ್ವಯ ಮಾಡಿ ಕೊಂಡಿರುವ ಈ ಮೈಸೂರಿಗೆ ಯಾವ ಕರ್ಣಾಟಕ ಎಂಬ ಸುಂದರವಾದ ಹೆಸರನ್ನಿಡಬೇಕೆಂದು ಹೇಳು ವುದನ್ನು ತಾವೆಲ್ಲರೂ ನಿರ್ಮಲ ಮನಸ್ಸಿನಿಂದ ಕೂಲಂಕಷವಾಗಿ ವಿಚಾರಮಾಡಬೇಕು. ಈಗ ನಮ್ಮ ಪಾಟೀಲರು ಮಂಡಿಸಿರುವ ಗೊತ್ತುವಳಿಯನ್ನು ಎಲ್ಲರೂ ಕೂಲಂಕಷವಾಗಿ ಪರಿಶೀಲಿಸಿ ಸ್ವಾಗತಿಸ ಬೇಕು ಎಂದು ವಿನಂತಿಮಾಡಿ ಆ ರೀತಿ ಮಾಡುವರೆಂದು ನಂಬಿ ನಾನು ನನ್ನ ಸ್ಥಾನವನ್ನು ಸ್ವೀಕರಿಸುತ್ತೇನೆ.

†Sri D. VENKATARAMIAH (Rebertsonpet).—Mr. Speaker, in my humble view the present resolution is most inopportune. Passing of this resolution will create mutual disaffection, misunderstanding and discontentment in the country. The resolution is to change the name of Mysore—instead of Mysore as Karnataka. So there must be something wrong in the name of Mysore.

Why should we change that name ? A case must be made out to change that name from Mysore to Karnataka. If you find something wrong with Mysore, by all means let us remove it. Let us follow the Constitution. What is the name of our Country ? India, not Bharath. Baratha Desha was the name given three thousand years ago, as ancient history tells us. But yet It is the Indian Republic, and not Bharat Republic; India that is Bharath. If really the elders wanted, our senior politicians wanted to change the name from India to Barath, the same rule applies even to Karnataka. Bharatha Desha, that was not changed. India, that name continues to remain there. Why is it ? As said by very many of my friends, certainly there is nothing wrong or bad in any name. It is all in what we mean about that name.

The constituency from which I have been elected is purely a Tamil area. I do not know even to speak Tamil, nor write Tamil. Still I have been elected from that Constituency. I have been born as an Andra, from Andhra territory. I am from Kolar District. The whole of Kolar District—more than seventy percent of the people in Kolar District speak Telugu. Even today about 20 to 25 percent do not know Kannada. At the time of the re-organisation of the State, when the Commission had gone over to Kolar, all the parties, even the independents as well, approached it to give their statement. What was the case they made out? Because Bangalore was nearer to Kolar, the capital was nearer, the High Court was near, trade and commerce and other things to the capital would be near, they opted out to be part of Mysore State. Otherwise, believe me, Sir,—even resolutions have been made by many of the organisations—they would have opted out for Andhra. Still, they—we did not want to go. We wanted to remain in Mysore territory. We are as much Kannadigas as any other Kannadigas from the integrated parts. Much has been made out of the fact of old Mysore and new Mysore. After all, even in the States Re-organisation Committee report, what we find is, various parts have been added on to Mysore. Mysore has been expanded. No new State has been formed. Mysore has become bigger—Visala Mysore. That is Mysore. Now the man in the street, the ordinary citizen in Mysore is not worried about this name at all. The worry is—it is only in the minds of the politicians. Beleive me, when I go in the Law Association or in the streets, what I find is—the politicians want to change this name to Karnataka or Mysore, on account of what they term it as a question of fanaticism and prestige.

(SRI D. VENKATARAMIAH)

I may be brutally frank in stating this. It is the party politicians, whether they be communists, Congress, Socialists or Swatantra, and there is division among them. It is not worrying the minds of the ordinary public. But it has become a question of prestige to change this name. That is the feeling that we have evoked in the public at large. I appeal to all my friends here, all honourable members here – is it fair that we should do it ? Have we not got better business than this ? We have got better work to do. Change the name to Karnataka—is it important ? In what respect ? By such a change, are we improving the economic condition of the people ? Are we improving by providing their necessities in life ? Certainly not, whether we continue as Mysoreans of people of Karnataka. The well-being of the people of this State consisting or two crores of people is in our hands. That, we have got to look to. This could certainly wait, for five or ten or fifteen or even fifty years. Why I say this is—somehow there has been some kind of moral agreement, moral re-approachment at the time of integration that the name Mysore should be retained and Bangalore should be the capital of Mysore. The new Mysore or Karnataka has come to us. All of us know what is called national integration. We know that the people of both the areas are being brought together. Officers in this area are being posted to the other areas, and the officers from other areas are being posted to this area. At this stage, it is a pity that we are trying to change the name. There has been a sinister move whether from the majority or the minority that somehow we should get Karnataka. God willing, I think it will not be. But if Karnataka were to be formed, what is it that you create ? It is disaffection, not only in the minds of friends here who had been part and parcel of the agitation to form this Karnataka, but in the whole of Mysore State, particularly in old Mysore State. You will create disaffection that may breed anything. I only appeal to the mover not to press this resolution.

†ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು)—ಸ್ವಾಮಿ, ಈ ಸಭೆಯ ಮುಂದೆ ಒಂದು ಜಟಿಲವಾದ ಪ್ರಶ್ನೆ ನಮಗೆ ಬಂದಂತಿದೆ. ನಾನು ಈ ವಿಷಯವನ್ನೆತ್ತಿ ಹೇಳುವುದಾದರೆ, ಇದೊಂದು ಹಳೆಯ ರೋಗ ಉಲ್ಬಣಾವಸ್ಥೆಯನ್ನು ತಳೆದಂಥಾದ್ದಾಗಿದೆ. ಈ ರೋಗವನ್ನು ಹೇಗಾದರೂ ಮಾಡಿ, ಯಾವ ಚಿಕಿತ್ಸೆಯಿಂದಲಾದರೂ ಗುಣಪಡಿಸುವುದು ಒಳ್ಳೆಯದು. ಏಕೆಂದರೆ ಈ ರೋಗ ಇನ್ನೂ ಹೆಚ್ಚಿನ ಉಲ್ಬಣಾವಸ್ಥೆಯನ್ನು ಮುಟ್ಟಿದರೆ ಅದಕ್ಕೆ ಮದ್ದೇ ಇಲ್ಲದಂತಾಗುತ್ತದೆಂಬ ಭಯ ನಮಗಿದೆ. ಈ ರೋಗದ ಮೂಲ ಬೀಜ ಬಿತ್ತಿದವರು ನಮ್ಮ ಸರ್ಕಾರವನ್ನು ನಡೆಸಿಕೊಂಡು ಬರುವ ಕಾಂಗ್ರೆಸ್ ಪಾರ್ಟಿಯವರೇ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಭಾಷಾವಾರು ತತ್ವದ ಮೇಲೆ ಪ್ರಾಂತ್ಯಗಳ ರಚನೆಯಾಗಬೇಕೆಂದು ಈ ಮಹಾತ್ಮಾ ಗಾಂಧಿಯವರ ಭಕ್ತರು ಹೇಳಿಕೊಂಡು ಬಂದರು. 1956ನೆಯ ಇಸವಿಯಲ್ಲಿ ಭಾಷಾವಾರು ತತ್ವದ ಮೇಲೆ ವಿಶಾಲ ಮೈಸೂರು ಯಾವಾಗ ಸ್ಥಾಪನೆಯಾಯಿತೋ, ಅಂದಿನ ದಿವದಿಂದ ಅಧಿಕಾರದ ವ್ಯಾಮೋಹಕ್ಕೊಳಗಾಗಿ ಈ ರಾಜ್ಯದ ಹೆಸರನ್ನು ಕರ್ಣಾಟಕವೆಂದು ಕರೆಯಬೇಕೆಂದು ಮೈಸೂರಿನ ಕೆಲವು ಜನ ಕಾಂಗ್ರೆಸ್ ಮಿತ್ರರೇ ಹೇಳಿಕೊಂಡು ಬಂದರು. ಈಗ ಆ ಅಧಿಕಾರವನ್ನು ಕೈಯಲ್ಲಿ ಉಳಿಸಿಕೊಳ್ಳುವುದಕ್ಕೆ, ಈಗ ಇಲ್ಲಿ ಬೇರೆ ಬೇರೆ ಭಾಗಗಳಿಂದ ಬಂದ ಕರ್ಣಾಟಕದ ಪ್ರತಿನಿಧಿಗಳ ಮನೋಭಾವವನ್ನೂ ಕಡೆಗಾಣಿಸಿ, ಈಗಾಗಲೇ ನಾವು ಮೈಸೂರಿನವರು, ಅವರು ಉತ್ತರ ಕರ್ಣಾಟಕದವರು, ಇವರು ದಕ್ಷಿಣ ಕರ್ಣಾಟಕದಿಂದ ಬಂದವರು, ಮತ್ತೊಬ್ಬರು ಹಿಮಾಲಯ ಕರ್ಣಾಟಕದಿಂದ ಬಂದವರು ಎಂದು ಭೇದ ಭಾವವನ್ನುಂಟು ಮಾಡುವ ಹೇಳಿಕೆಗಳನ್ನು ಈ ಸಭೆಯಲ್ಲಿ ಕೊಡುತ್ತಿರುವುದು ನಮಗೆಲ್ಲರಿಗೂ ಗೊತ್ತು. ಮೊನ್ನೆ ಮಾನ್ಯ ಮಂತ್ರಿಗಳೊಬ್ಬರು ಮಾತನಾಡಿ ನಮ್ಮದನ್ನು ಹಳೆಯ ಮೈಸೂರಿನವರು ತಿಳಿದುಕೊಂಡಿಲ್ಲವೆಂದು ಹೇಳಿದರು. ಇದು ಒಳ್ಳೆಯ ತಿಳಿವಳಿಕೆಯ ಮಾತಲ್ಲ ಅಂಥವರ ಬಾಯಿಂದ ಬರಬಾರದು. ಎಂದು ಮಾತ್ರ ನಾನು ಹೇಳಬಲ್ಲೆ. ಇನ್ನು ಕರ್ಣಾಟಕದ ವಿಷಯವಾಗಿ ಒಂದು ಮಾತು ಬಿಚ್ಚಿ ಹೇಳುವುದಾದರೆ, ಕರ್ಣಾಟಕವೆಂಬ ಹೆಸರಿಗೆ ಒಂದು ಬಲವಾದ ಹಿನ್ನೆಲೆಯಿದೆ. ನೃಪತುಂಗ ಮಹಾಕವಿ ಇದರ ವಿಷಯವಾಗಿ ಹೇಳುತ್ತ, ಕರ್ನಾಟಕ ಗೋದಾವರಿಯವರೆಗೂ ಹಬ್ಬಿತ್ತು ಎಂದು ನಮ್ಮ ಮಿತ್ರರು ಉದ್ಧರಿಸಿ ಕೂಡ ಇದ್ದಾರೆ. ಇಷ್ಟೇ ಅಲ್ಲದೆ, ನಮ್ಮ ಮಿತ್ರರು ಹೇಳಿದ ಹಾಗೇ, ಆದಿಕವಿ ಪಂಪ, ರನ್ನ, ರಾಘವಾಂಕ, ನಾರಣಪ್ಪ ಮುಂತಾದ ಅನೇಕ ಕವಿಗಳು ಕರ್ಣಾಟಕದ ಹಿನ್ನೆಲೆಯನ್ನು ಬಣ್ಣಿಸಿ, ಕರ್ಣಾಟಕದ ವೈಶಾಲ್ಯವೇನು, ಜನರ ಸಂಸ್ಕೃತಿಯೇನು ಎಂದು ತಿಳಿಸಿ, ಚಾರಿತ್ರವಾಗಿ, ಬಲವತ್ತರವಾದ ಹಿನ್ನೆಲೆ ಕರ್ಣಾಟಕಕ್ಕಿದೆ ಎಂದು ಹೇಳಿದ್ದಾರೆ. ಅಷ್ಟೇಕೆ, ಮುದ್ದಣ ಕವಿ ರಾಮಾಶ್ವಮೇಧವನ್ನು ವಿವರಿಸುತ್ತಿರುವಾಗ ತನ್ನ ಹೆಂಡತಿ ಸಂಸ್ಕೃತದಲ್ಲಿ ಒಂದು ಪದವನ್ನು ಹೇಳಿದ್ದನ್ನು ಆಕ್ಷೇಪಿಸಿ ಅದರೂ ಕನ್ನಡದಲ್ಲೇಕೆ ಹೇಳಲಿಲ್ಲ, 'ಕನ್ನಡ ಕಸ್ತೂರಿಯಲ್ತೆ' ಎಂದಿರುವುದು ಪುರಾತನ ಕವಿಯ ಆಶೋತ್ತರಗಳನ್ನು ವ್ಯಕ್ತಪಡಿಸುತ್ತದೆ. ಕನ್ನಡವು ಕಸ್ತೂರಿ ಎಂದು ಹೇಳಿದ್ದಾರೆ ಅವರು.

ಯಾರೋ ನನ್ನ ಮಿತ್ರರೊಬ್ಬರು ಹೇಳಿದರು ನಮ್ಮ ಆರ್ಥಿಕ ಸ್ಥಿತಿ ಕೆಟ್ಟಿರುವಾಗ ಕರ್ಣಾಟಕವೆಂಬ

ಹೆಸರನ್ನು ಈ ರಾಜ್ಯಕ್ಕೆ ಇಡುವುದು ಸರಿಯಲ್ಲ, ಆರ್ಥಿಕ ಸ್ಥಿತಿ ಬದಲಾವಣೆಯೇನೂ ಈ ಸಮಸ್ಯೆಯಿಂದ ಆಗುವುದಿಲ್ಲ ಎಂದು. ನಾನಾದರೂ ಹೇಳುತ್ತೇನೆ, ಆರ್ಥಿಕ ಸ್ಥಿತಿ ಬದಲಾವಣೆ ಒಳ್ಳೆಯ ರೀತಿ ಆಗ ಬೇಕಾಗಿದ್ದರೆ ನಾವೆಲ್ಲರೂ ಕನ್ನಡಿಗರು ಒಗ್ಗಟ್ಟಾಗಿ, ಒಟ್ಟುಗೂಡಿ ಕರ್ಣಾಟಕದ ಧ್ವಜವನ್ನು ಎತ್ತಿ ಹಿಡಿದು ನಿಲ್ಲಬೇಕು. ಆ ರೀತಿ ಮಾಡದೆ ನಾವು ದಕ್ಷಿಣ ಕನ್ನಡ ದವರು, ಗುಲ್ಬರ್ಗಾ ಜಿಲ್ಲೆಯವರು, ಮತ್ತು ನಾವು ಇನ್ನೊಂದು ಮತ್ತೊಂದು ಭಾಗದವರು ಎಂಬುದಾಗಿ ಒಬ್ಬರಿಗೊಬ್ಬರು ಭೇದ ಭಾವ ಮಾಡುವುದನ್ನು ಬಿಟ್ಟು ಕನ್ನಡ ಮಾತೆಯ ನೆರಳಿನ ಅಡಿಯಲ್ಲಿ ನಿಂತು ಜೀವಿಸುವವರಾಗಿರಬೇಕು. ಒಂದೇ ಐಕ್ಯ ಭಾವನೆ ಯನ್ನು ಹೊಂದಿರಬೇಕು. ನಮ್ಮಲ್ಲಿ ಯಾವತ್ತು ಒಗ್ಗಟ್ಟು ಇರಲಿಕ್ಕಿಲ್ಲ ಅಂದಿನವರೆಗೂ ನಮ್ಮ ಕೆಲಸ ಕಾರ್ಯಗಳು ಸುಗಮವಾಗಿ ಸಾಗಲು ಸಾಧ್ಯವಾಗು ವುದಿಲ್ಲವೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಮತ್ತೆ ಕೆಲವರು ಇದು ಜಾತ್ಯಾತೀತ ಮತ್ತು ಕ್ರಾಂತಿ ಯುತ ಚಳುವಳಿಗೆ ಕಾರಣವಾಗುತ್ತದೆ ಎಂಬುದಾಗಿ ಹೇಳಿದರು. ಇವರಲ್ಲಿ ಆ ಜಿಲ್ಲೆ, ಈ ಜಿಲ್ಲೆಯಿಂದ ಬಂದವರು ಎಂಬ ಭಾವನೆ ಯೇನೂ ಉಂಟಾಗ ಬಾರದು. ಆ ಪಕ್ಷದವರು ಈ ಪಕ್ಷದವರು ಎಂಬ ಭೇದ ಬರಬಾರದು ಎಂದು ನಾನು ಹೇಳುತ್ತೇನೆ. ಈಗ ಸರ್ಕಾರದ ಫೈಲುಗಳಲ್ಲೂ ಕೂಡ ಓ. ಎಂ. ಮತ್ತು ಎನ್. ಎಂ. ಎಂದು ಬರೆಯುತ್ತಿದ್ದಾರೆ. ಇದು ಎಷ್ಟರ ಮಟ್ಟಿಗೆ ಸುಳ್ಳೋ ನಿಜವೋ ನೀವೇ ತಿಳಿಯಬಹುದು. ಇದರ ಅರ್ಥ ಓ. ಎಂ. ಎಂದರೆ ಹಳೆಯ ಮೈಸೂರು ಎಂದೂ, ಎನ್. ಎಂ. ಎಂದರೆ ಹೊಸ ಮೈಸೂರು ಎಂದೂ ಆಗುತ್ತದೆ. ವಿಧಾನಸೌಧದಲ್ಲಿ ಯಾವ ಫೈಲುಗಳನ್ನು ನೋಡಿದರೂ ಈ ರೀತಿ ಇರುವುದನ್ನು ಕಾಣಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದು ಜತ್ತಿಯವರ ಕಾಲದಲ್ಲಿ ಮಾಡಿದ್ದು.

ಶ್ರೀ ಬಿ. ಭಾಸ್ಕರಶೆಟ್ಟಿ.—ನಾನು ಸತ್ಯವಾಗಿ ಹೇಳುವುದಾದರೆ, ಮೈಸೂರಿನ ಮಿತ್ರರೆಲ್ಲರೂ ಬಿಚ್ಚು ಮನಸ್ಸಿನಿಂದ ಈ ವಿಷಯವನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡುವುದಾದರೆ ಕನ್ನಡ ಮಾತೆ ಮಕ್ಕಳಿಗೆ ಕರ್ಣಾಟಕ ರಾಜ್ಯವೆಂಬ ಹೆಸರನ್ನು ಈ ದೇಶಕ್ಕೆ ಇಡಬೇಕೆಂಬುದೇ ಆಶಯವಾಗಿದೆ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ನಾವು ಈ ಸಂದರ್ಭದಲ್ಲಿ ಒಂದು ಆಲೋಚನೆ ಮಾಡಬೇಕು. ಮೈಸೂರು ಎಂಬುದು ಯಾವ ಹೆಸರೂ ಇಲ್ಲ. ನನ್ನ ಮಿತ್ರರು ಕೆಲವರು ಹೇಳಿದರು ಇದು ಮೈಸೂರು ದೇಶಕ್ಕೆ ಒಂದು ಮುಖ್ಯ ಪಟ್ಟಣವೆಂದು. ಮಧ್ಯ ಪ್ರದೇಶ ಮತ್ತು ಆಂಧ್ರ ಪ್ರದೇಶ ಆಯಾ ಪ್ರದೇಶದ ಹೆಸರನ್ನು ಒಳಗೊಂಡಿದೆ. ಮೈಸೂರು ಒಂದು ಮುಖ್ಯ ಪಟ್ಟಣ. ಅದು ಒಂದು ಹೆಸರು ಅಲ್ಲ. ಅದು ಒಂದು ಜಿಲ್ಲೆಯ ಹೆಸರು ಅಂತಹ ಒಂದು ಹೆಸರನ್ನು ಈ ಅಖಂಡ ಕರ್ಣಾಟಕಕ್ಕೆ ಕೊಡುವುದು ಅಹಿತವಾದುದು ಮತ್ತು ಸಮಂಜಸ ವಾದುದಲ್ಲವೆಂದು ನಾನು ಹೇಳುತ್ತೇನೆ. ಅಲ್ಲದೆ ಈಗ ಕರ್ಣಾಟಕಕ್ಕೆ ಕನ್ನಡ ಭಾಷೆ ಮಾತನಾಡುವ ಪ್ರದೇಶವೆಂದು ಹೆಸರು ಕೊಡುವುದೂ ಸಹ ಸರಿಯಲ್ಲ ಏಕೆಂದರೆ ಇದು ಹೇಗಿದೆಯೆಂದರೆ ಒಂದು ಉದಾಹರಣೆ ಯನ್ನು ಈ ಸಂದರ್ಭದಲ್ಲಿ ನಾನು ಕೊಡಬೇಕಾಗಿದೆ ಸಾಮಾನ್ಯವಾಗಿ ನಮ್ಮ ದೇಹದಲ್ಲಿ ಎಷ್ಟೋ ಅಂಗಾಂಗ ಗಳಿರುತ್ತವೆ. ಕೈ, ಕಾಲು, ಮೂಗು, ಕಣ್ಣು, ಕಿವಿ ಎಂಬುದಾಗಿ ಏತಕ್ಕೋಸ್ಕರ ಈ ದೇಹಕ್ಕೆ ಹೆಸರು ಕೊಡಲಿಲ್ಲ? ಎಲ್ಲ ತರಹ ಅಂಗಾಂಗಗಳ ಹೆಸರನ್ನು ಕೊಟ್ಟು ಕರೆಯಬಹುದಾಗಿತ್ತು. ಆ ರೀತಿ ಕರೆಯದೆ ದೇಹ ಎಂಬ ಹೆಸರನ್ನು ಕೊಟ್ಟಿದ್ದಾರೆ. ಇದು ನನ್ನ ಅನುಭವದ ಮಾತು. ನಾವು ದಕ್ಷಿಣ ಕನ್ನಡ ಜಿಲ್ಲೆ ಯವರು, ನಾವು ಬಿಜಾಪುರದವರು, ಬೇರೆಕಡೆಯಿಂದ ಬಂದವರು, ಕರ್ಣಾಟಕದ ಜನಕ್ಕಾಗಿ ಲಾಟಿ ಏಟು ಗಳನ್ನು ತಿಂದು ಇಲ್ಲಿಗೆ ಬಂದಿದ್ದೇವೆ. ಎಂಬುದಾಗಿ ಹೇಳಿ ಬೇರೆ ಬೇರೆ ರೀತಿಯ ಹೆಸರನ್ನು ಇಡಬೇಕೆಂದು ಕೇಳುವುದು ಸಾಧುವಾದುದಲ್ಲ. ಇದಕ್ಕೆ ಒಂದು ಗಾದೆಯನ್ನು ಹೇಳಬಹುದು. ಒಂದು ದೊಡ್ಡ ಪರ್ವತದ ಅಡಿಯಲ್ಲಿ ನಿಂತು ಪರ್ವತದಿಂದ ಒಂದು ದೊಡ್ಡ ಸುಂಡಿಲಿಯನ್ನು ಹೊರಗೆ ಬರಸಿದಂತೆ ಇದು ಆಗುತ್ತದೆ. ನಾವು ಎಲ್ಲರೂ ಒಟ್ಟಿಗೆ ಬಂದು ಇಲ್ಲಿ ನೋಡಿದರೆ ಏನೋ ಒಂದು ಜಿಲ್ಲೆ ಹೆಸರು ಈ ಕರ್ಣಾಟ ಕಕ್ಕೆ ಬಂದಿದೆ ಎಂಬ ಭಾವನೆ ಉಂಟಾಯಿತು. ಆದ್ದರಿಂದ ನನ್ನ ಮಾನ್ಯ ಮಿತ್ರರೆಲ್ಲರೂ ಯಾವ ರೀತಿಯ ಭಿನ್ನಾಭಿಪ್ರಾಯವನ್ನು ಹೊಂದದೆ ನಮ್ಮ ಮುಂದೆ ಈಗ ಬಂದಿರುವ ಈ ನಿರ್ಣಯವನ್ನು ಐಕಮತ್ಯವಾಗಿ ಅನು ಮೋದಿಸಿ ಈ ರಾಜ್ಯಕ್ಕೆ ಕರ್ಣಾಟಕವೆಂಬ ಹೆಸರನ್ನು ಇಡ ಬೇಕೆಂದು ನಾನು ಎಲ್ಲ ಸದಸ್ಯರಲ್ಲೂ ಮತ್ತು ಸರ್ಕಾರದವರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಎ. ಪಿ. ಅಪ್ಪಣ್ಣ (ವೀರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಇಲ್ಲಿ ಆಗುತ್ತಿರುವ ಚರ್ಚೆಯನ್ನು ನಾನು ನೋಡುತ್ತಾ ಇದ್ದರೆ, ಈ ದೇಶಕ್ಕೆ ಕೊಡಗು ಎಂದು ಹೆಸರನ್ನು ಇಡುವುದಕ್ಕೆ ಒಂದು ಹೋರಾಟವನ್ನು ನಡೆಸಿದ್ದರೂ ಚೆನ್ನಾಗಿತ್ತು ಎಂದು ನನಗೆ ಆಲೋಚನೆ ಬರುತ್ತಾ ಇದೆ. ಏಕೆಂದರೆ ಮೈಸೂರು ಬೇಕು ಎಂದು ಹೇಳುವವರು. ಇದಕ್ಕೆ ಒಂದು ಚರಿತ್ರೆ ಇದೆ, ಸಂಸ್ಕೃತಿ ಇದೆ ಮತ್ತು ಈ ಸ್ಥಳದಲ್ಲಿ ಒಂದು ಇತಿಹಾಸ ವಿದೆಯೆಂದು ಹೇಳುತ್ತಾರೆ. ಕೊಡಗಿಗೆ ಏನು ಕಡಿಮೆ ? ಕೆಲವರು ಹೇಳುತ್ತಾರೆ, ಮೈಸೂರಿನ ಆರ್ಥಿಕ ಸ್ಥಿತಿ ಬಹಳ ಒಳ್ಳೆಯ ಮಟ್ಟದಲ್ಲಿತ್ತು ಮತ್ತು ರಾಜ್ಯಭಾರವೂ ಸಹ ಬಹಳ ಒಳ್ಳೆಯ ಮಟ್ಟದಲ್ಲಿತ್ತು ಎಂಬುದಾಗಿ. ಕೊಡಗು ಇದರಲ್ಲಿಯೂ ಏನು ಕಡಿಮೆ ? ನಮ್ಮ ಕೊಡಗು ದೇಶ ಹಾಗೂ ಆಡಳಿತ ಆರ್ಥಿಕ ನೀತಿಯಲ್ಲಿ ಇಡೀ ಕರ್ಣಾಟಕಕ್ಕೆ ಮಾರ್ಗ ದರ್ಶನವಾಗಿದೆ ಎಂಬುದಾಗಿ ನಾನು ಹೇಳುವುದಕ್ಕೆ ಹಿಂಜರಿಯುವುದಿಲ್ಲ. ಕೊಡಗು ಕರ್ಣಾಟಕಕ್ಕೆ ಹೋಗ ಬೇಕೆಂದು ಹೇಳುವ ವ್ಯಕ್ತಿ ನಾನಲ್ಲ. ಶ್ರೀಮಾನ್ ಮಾದೇಗೌಡರು. ಮೈಸೂರು ಎಂಬ ಮನೆಗೆ ಬೆಂಕಿ ಹಚ್ಚಲಿಕ್ಕೆ ಹೊರಟಿದ್ದಾರೆ. ಅದು ಸರಿಯಲ್ಲ. ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ಈಗಿನ ಮೈಸೂರು ಎಂಬ ಹೆಸರನ್ನು ಕರ್ಣಾಕವೆಂಬುದಾಗಿ ಮಾಡಬೇಕೆಂಬುದೇ ನನ್ನ ಇಚ್ಛೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೋಪ ಬಂದು ಬಿಟ್ಟಿದೆಯೇ ?

ಶ್ರೀ ಎ. ಪಿ. ಅಪ್ಪಣ್ಣ.—ನನ್ನ ಕೋಪವೇನೂ ಮಾಡುವುದಿಲ್ಲ. ನನ್ನ ವಿಚಾರವನ್ನು ಮಾತ್ರ ನಾನು ಹೇಳುತ್ತೇನೆ. ಮೈಸೂರಿನ ಮನೆಯಲ್ಲಿ ಬಂದು ನಾವು ಸೇರಿಕೊಂಡಿದ್ದೇವೆ. ನಾವು ಬಂದು ಈ ಮನೆಗೆ ಬೆಂಕಿ ಇಡುತ್ತಿದ್ದೇವೆ. ಕರ್ಣಾಟಕ ರಾಜ್ಯ ದೊಡ್ಡ ದಾಗಲಿ ಎಂಬ ಭಾವನೆಯಿಂದ ನಮ್ಮ ಕೊಡಗು ವಿಲೀನ ಹೊಂದಿದೆಯೇ ವಿನಾ ಮೈಸೂರಿನ ಹೆಸರನ್ನು ನೋಡಿ ಅಲ್ಲವೆಂಬುದಾಗಿ ನಾನು ಹೇಳುತ್ತೇನೆ.

(ಶ್ರೀ ಎ. ಪಿ. ಅಪ್ಪಣ್ಣ)

ಊಟಕ್ಕೆ ಗಂಜಿ ಇಲ್ಲವೆಂದು ನಾವು ಇಲ್ಲಿಗೆ ಬಂದು ಸೇರಿಲ್ಲ. ಮೈಸೂರಿಗೆ ಸೇರಿದ ಪ್ರತಿಯೊಬ್ಬರೂ ಕನ್ನಡ ದೇಶವನ್ನು ಕಟ್ಟಬೇಕೆಂಬ ಒಂದು ಧೋರಣೆಗೆ ಒಪ್ಪಿ ಇದರೊಳಗೆ ಸೇರಿದ್ದಾರೆಯೇ ವಿನಹ ಮತ್ತೆ ಬೇರೆ ಏನೂ ಇಲ್ಲ. ಆದ್ದರಿಂದ ಮೈಸೂರು ಎಂಬ ಹೆಸರನ್ನೇ ಇಟ್ಟುಕೊಂಡು ಹೋಗಬೇಕು ಎನ್ನುವ ದೃಷ್ಟಿ ಸರಿಯಲ್ಲ.

ಒಬ್ಬ ಮಾನ್ಯ ಸದಸ್ಯರು.—ಕಾಸರಗೋಡು ಬಿಟ್ಟು ಇಲ್ಲಿಗೆ ಏಕೆ ಬಂದಿರಿ ?

ಶ್ರೀ ಎ. ಪಿ. ಅಪ್ಪಣ್ಣ.—ಅದು ಬೇರೆ ವಿಚಾರ. ಈಗ ನಮ್ಮ ದೇಶದಲ್ಲಿ ಊಟಕ್ಕೆ ಗಂಜಿಯಿಲ್ಲವೆಂದು ನಾವು ಇಲ್ಲಿಗೆ ಬರಲಿಲ್ಲ. ಆರ್ಥಿಕ ಸ್ಥಿತಿ ಸರಿಯಿಲ್ಲ, ಆಡಳಿತ ಮಟ್ಟ ಕ್ರಮ ಬದ್ಧವಾಗಿಲ್ಲ. ಕರ್ಣಾಟಕ ಪ್ರಾಂತದಲ್ಲಿ ಕನ್ನಡ ಭಾಷೆ ಮಾತನಾಡುವವರು ಒಂದು ಪ್ರಾಂತವನ್ನು ರಚನೆ ಮಾಡುವ ಸಂದರ್ಭದಲ್ಲಿ ನಮ್ಮ ಸ್ಥಿತಿಗತಿಗಳು ಎಷ್ಟೇ ಇದ್ದರೂ ಸಹ ಇದರೊಳಗೇ ಸೇರಬೇಕೆಂಬ ಇಚ್ಛೆ ನಮಗಿದ್ದುದರಿಂದ ನಾವು ಬಂದು ಬೆಂಕಿ ಇಟ್ಟಿದ್ದೇವೆ, ಇನ್ನೂ ಮೈಸೂರು ದೇಶ ಎಂಬ ಹೆಸರನ್ನೇ ಹೇಳುತ್ತಿದ್ದೇವೆ. ಕರ್ಣಾಟಕ ವೆಂದು ಹೆಸರು ಹೇಳುವವರ ಮನನೋಯಿಸುವುದಕ್ಕೆ ಆಗುವುದಿಲ್ಲ. ಬೆಂಕಿ ಇಟ್ಟಿದ್ದೇವೆ ಎಂಬ ಮನೋ ಭಾವದಿಂದ ಕೆಲವರು ಮಾತನಾಡುತ್ತಿರುವುದರಿಂದಲೇ ಕರ್ಣಾಟಕ ವೆಂಬುದಾಗಿ ಬದಲು ಮಾಡಬೇಕೆಂಬುದೇ ನನ್ನವಾದ. ಕೆಲವರು ಏನು ಭಾವನೆಯಿಂದ ಮೈಸೂರಿಗೆ ಬಂದು ಸೇರಿಕೊಂಡಿದ್ದು ಎಂದು ಕೇಳು ತ್ತಾರೆ. ಇದರ ಬಗ್ಗೆ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ, ಇಲ್ಲಿ ಮೈಸೂರು ಕೊಡಗು ಮತ್ತು ಇತರ ಭಾಗಗಳು ಸೇರಿ ವಿಶಾಲವಾದ ಒಂದು ಕನ್ನಡ ಭಾಷೆ ಮಾತನಾಡತಕ್ಕ ಒಂದು ಕರ್ಣಾಟಕ ಪ್ರಾಂತ್ಯ ವನ್ನು ರಚನೆ ಮಾಡಿದ್ದಾರೆಯೇ ವಿನಹ ಎಲ್ಲರೂ ಬಂದು ಈ ಮೈಸೂರಿಗೆ ಸೇರಿದ್ದಾರೆಂದು ಹೇಳುವ ವಾದ ಸರಿಯಲ್ಲ. ಎಸ್. ಆರ್. ಸಿ. ವರದಿಯಲ್ಲಿರ ತಕ್ಕಂಥಾದ್ದನ್ನು ನೋಡಿ ಮಾಡುವುದು ಒಳ್ಳೆಯದು.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ಮೈಸೂರು-ಕರ್ಣಾಟಕ ಎಂಬುದಾಗಿ ಎರಡು ಹೆಸರುಗಳನ್ನೂ ಕೊಡೋಣ.

ಶ್ರೀ ಎ. ಪಿ. ಅಪ್ಪಣ್ಣ.—ಹಾಗೆಯೇ ಮಾಡಿ. ಅದಕ್ಕೆ ಸರಿಯಾದಂತಹ ಪ್ರಜಾಪ್ರಭುತ್ವದಲ್ಲಿ ಮನ್ನಣೆ ತೆಗೆದುಕೊಂಡು ಮಾಡಿ ಎಂದು ನಾನು ಹೇಳುತ್ತೇನೆ. ಇದನ್ನು ನಾನು ಮಾಡುವಂಥಾದ್ದು ಅಲ್ಲ. ಮತ್ತೆ ಕೆಲವರು ಒಂದು ಸಲಹೆಯನ್ನು ಕೊಟ್ಟರು. ಮೈಸೂರು ಎಂಬ ಹೆಸರು ಇದ್ದಂತೆಯೇ ಇರಲಿ, ವ್ಯವಹಾರದಲ್ಲಿ ಕರ್ಣಾಟಕ ವೆಂದು ಹೆಸರನ್ನು ಇಟ್ಟು ಕೊಳ್ಳೋಣ. ಇದಕ್ಕೆ ನನ್ನ ಅಭಿಪ್ರಾಯ ವೇನೆಂದರ ಈ ರೀತಿ ಮಾಡಿದರೆ ಸರಿ ಹೊಗುತ್ತದೆಯೇ ಇಲ್ಲವೇ ಎಂಬುದನ್ನು ಆಲೋಚನೆ ಮಾಡಬೇಕು. ಈ ಸಮಸ್ಯೆ ಅನೇಕ ವರ್ಷಗಳಿಂದ ನಮ್ಮ ಮುಂದಿದೆ. ಈ ಸಮಸ್ಯೆ ಯನ್ನು ಬಗೆ ಹರಿಸುವುದರಿಂದ ನಮ್ಮ ಆರ್ಥಿಕ ಸ್ಥಿತಿ ಏನು ಮಟ್ಟಕ್ಕೆ ಬರುತ್ತದೋ ಆ ಮಟ್ಟಕ್ಕೆ ಬಾರದೆ ಮತ್ತಾವುದಾದರೂ ಬೇರೆ ಒಂದು ಮಟ್ಟಕ್ಕೆ ಬರುತ್ತದೋ ಏನೋ ಎಂಬ ಭಾವನೆಯನ್ನು ನಾವು ಇಟ್ಟುಕೊಂಡಿಲ್ಲ.

ಅಂಥ ಒಂದು ಸಣ್ಣ ಸಮಸ್ಯೆಯನ್ನು ಎದುರಿಸ ಬೇಕು. ಅಂಥಾ ಒಂದು ತೀರ್ಮಾನಕ್ಕೆ ಬರಬೇಕು. ಎದುರಿಸುವಂಥಾ ಯೋಗ್ಯತೆ ನಮಗೆ ಇಲ್ಲದೇ ಇದ್ದರೆ ಈ ದೊಡ್ಡ ಸಮಸ್ಯೆಯನ್ನು ಬಗೆ ಹರಿಸುವಂಥಾ ಶಕ್ತಿ ನಮ್ಮಲ್ಲಿ ಇರುವುದಿಲ್ಲ. ಇದು ಪುನಃ ಪುನಃ ಬೆಳೆದು ನಮ್ಮಲ್ಲಿ ಒಂದು ಮನಃಕ್ಲೇಷವುಂಟಾಗುತ್ತದೆ ಎಂಬ ದೃಷ್ಟಿಯಿಂದ ಇದು ಯಾವ ರೀತಿಯಲ್ಲಿ ತೀರ್ಮಾನ ವಾಗಬೇಕು ಎಂದರೆ ಪ್ರಜಾ ಪ್ರಭುತ್ವದಲ್ಲಿ ನಿರ್ಣಯ ವಾದ ಅನೇಕ ತೀರ್ಮಾನಗಳು ಮಾನ್ಯ ಸಭೆಗೆ ಗೊತ್ತಿವೆ. ಅದೇ ರೀತಿ ತೀರ್ಮಾನವಾಗಬೇಕೆಂದು ನನ್ನ ಧೋರಣೆ. ಮೈಸೂರು ಎಂಬ ಹೆಸರು ತೆಗೆದು ಹಾಕಿದರೆ ನಮ್ಮ ಸಂಸ್ಕೃತಿ ಏನಿದೆ, ಚರಿತ್ರೆ ಏನಿದೆ, ನಮ್ಮ ಹಿನ್ನೆಲೆ ಏನಿದೆ ಅದೆಲ್ಲಾ ಹೋಗುತ್ತದೆ ಎಂದು ಕೆಲವರು ಹೇಳಿದರು. ಮೈಸೂರು ಎನ್ನುವ ಹೆಸರು ತೆಗೆದು ಕರ್ನಾಟಕ ಎಂದು ಮಾಡುವ ಸಂದರ್ಭದಲ್ಲಿ ಮೈಸೂರಿನ ಒಂದು ಹಿನ್ನೆಲೆ, ಅದರ ಸಂಸ್ಕೃತಿ ಹೋಗುತ್ತದೆ ಎನ್ನುವುದಾದರೆ ಆ ಹೆಸರನ್ನು ಪರಂಪರ ವಾಗಿ ಇಟ್ಟುಕೊಳ್ಳಲಿಕ್ಕೆ ಮೈಸೂರು ಡಿಸ್ಟ್ರಿಕ್ಟ್ ಎನ್ನು ವುದು ಇದ್ದೇ ಇದೆ. ಇದಕ್ಕೆ ಸಂಸ್ಕೃತಿಯಿದೆ, ಸಂಸ್ಕೃತಿ ಬೆಳೆದು ಬಂದಂಥಾ ದೇಶ, ಇಲ್ಲ ಎಂದು ಹೇಳು ವುದಕ್ಕಾಗುವುದಿಲ್ಲ.

5-00 P.M.

ಆದರೆ ಈಗ ಕರ್ನಾಟಕ ಎಂದು ದೇಶದ ಹೆಸರನ್ನು ಬದಲು ಮಾಡಬೇಕೆಂದು ಹೊರಟಿದ್ದೇವೆಯೇ ಹೊರತು ಮೈಸೂರು ಪಾಕ್, ಎಂಬುದನ್ನು ಬದಲು ಮಾಡು ವುದಕ್ಕಾಗಲೀ (ನಗು), ಮೈಸೂರು ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ ಎಂಬ ಹೆಸರನ್ನು ಬದಲು ಮಾಡಲಿಕ್ಕಾಗಲೀ, ಮೈಸೂರು ಲ್ಯಾಂಪ್ ವರ್ಕ್ಸ್ ಎಂಬುದನ್ನು ಬದಲು ಮಾಡಬೇಕೆಂದಾಗಲೀ ನಾವು ಹೊರಟಿಲ್ಲ. ಮೈಸೂರು ಪಾಕ್‌ಗೆ ಮೈಸೂರು ಪಾಕ್ ಅಂದರೇ ರುಚಿಯಾಗಿರುತ್ತದೆ. ಅದರ ಹೆಸರು ಬದಲಾಯಿಸಿ ಕರ್ನಾಟಕ ಪಾಕ್ ಎಂದರೆ ಆ ರುಚಿ ಎಲ್ಲಾ ಬದಲಾಯಿಸುತ್ತದೆ ಎಂದು ಯಾರೂ ತಿಳಿದುಕೊಳ್ಳಬಾರದು. ಮೈಸೂರು ಎನ್ನುವ ಹೆಸರು ಅನೇಕ ರೀತಿಯಲ್ಲಿ ಬರುತ್ತದೆ. ಇದರ ಹಿನ್ನೆಲೆಯನ್ನು ಮುಂದಿನವರು ಜ್ಞಾಪಕದಲ್ಲಿಟ್ಟು ಕೊಳ್ಳಲು ಇದೇ ಹೆಸರಿರಬೇಕೆಂದೇನೂ ಇಲ್ಲ, ಚರಿತ್ರೆ ಯನ್ನು ಅಳಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ಇವತ್ತು ಇದಕ್ಕೆ ಒಂದು ಹಿನ್ನೆಲೆ ಇದೆ, ಇದಕ್ಕೆ ಒಂದು ಸಂಸ್ಕೃತಿ ಇದೆ. ಇದಕ್ಕೆ ಒಂದು ಚರಿತ್ರೆ ಇದೆ ಎನ್ನುವಂಥಾ ಧೋರಣೆಯನ್ನು ಒಪ್ಪಿ ಕೊಂಡರೆ, ಅದನ್ನೇ ಎಲ್ಲಾ ಜನರೂ ಒತ್ತಾಯ ಪಡಿಸುತ್ತಾರೆ. ಆದ್ದರಿಂದ ಇವತ್ತು ನಮ್ಮ ದೇಶದಲ್ಲಿ ಯಾವ ಧೋರಣೆಯಿಂದ ಈ ಪ್ರಾಂತ ರಚನೆಮಾಡಿ ದರು, ಅಭಿಪ್ರಾಯ ಏನಿತ್ತು, ಧೋರಣೆ ಏನಿತ್ತು ಎಂಬುದಕ್ಕೆ ಮನ್ನಣೆಕೊಟ್ಟು ಈ ಪ್ರಾಂತ್ಯಕ್ಕೆ ನಾವು ಈ ದಿನ ಹೆಸರಿಡಬೇಕೇ ಹೊರತು ಪ್ರತಿಯೊಬ್ಬನಿಗೂ ತನ್ನ ತನ್ನ ಚರಿತ್ರೆ ಇದ್ದೇ ಇರುತ್ತದೆ, ಒಂದು ಸಂಸ್ಕೃತಿ ಹಿನ್ನೆಲೆ ಇದ್ದೇ ಇರುತ್ತದೆ. ಅವರು ಇಂಟಿಗ್ರೇಟೆಡ್ ಏರಿಯದಿಂದ ಬಂದವರು, ಇವರು old Mysore ನವರು ಎಂಬುದಾಗಿ ಇಷ್ಟರವರೆಗೂ ಹೇಳುತ್ತಾ ಇದ್ದರು.

ಒಬ್ಬ ಮಾನ್ಯ ಸದಸ್ಯರು.— ವಿದ್ಯಾ ಮಂತ್ರಿಗಳನ್ನು ಕೇಳಿ ?

ಶ್ರೀ ಎ. ಪಿ. ಅಪ್ಪಣ್ಣ.—ವಿದ್ಯಾ ಮಂತ್ರಿಗಳು ಒಬ್ಬರೇ ಅಲ್ಲ, ಎಲ್ಲರೂ ಹೇಳುತ್ತಾರೆ. ಇಂಟಗ್ರೇಟೆಡ್ ಏರಿಯಾದಿಂದ ಬಂದವರು ಎಂದರೆ ಇಂಟಿಗ್ರೇಟೆಡ್

ಏರಿಯಾ ಯಾವುದು ? ನಾವು ಮೈಸೂರಿಗೆ ಇಂಟಿಗ್ರೇಟ್ ಆದವರೇನು ? ಈ ರೀತಿ ಎಲ್ಲಾ ಹೇಳುವಾಗ ನಮ್ಮಂಥವರಿಗೆ ಬಹಳ ನೋವು ಆಗುತ್ತದೆ. ಅದಕ್ಕೇ ನಾವು ಇಂಟಿಗ್ರೇಟ್ ಆಗಿದ್ದು ಎಲ್ಲಾ ಸೇರಿ ಕನ್ನಡ ದೇಶ ಆಗುವಂಥಾ ಒಂದು ಪ್ರಾಂತರಚನೆ ಮಾಡಿದರೆ, ಕರ್ನಾಟಕ ಪ್ರಾಂತ ಎಂದು ಹೆಸರು ಇಡಿ ಎಂದು ಹೇಳಿದರೆ, ಮೈಸೂರಿಗೆ ನಾವು ವಿರೋಧ ಇದ್ದೇವೆ ಎಂದು ಮೈಸೂರುವಾದ ಮಾಡುವವರು ತಿಳಿದು ಕೊಳ್ಳಬಾರದು. ಏಕೆಂದರೆ ಈ ಪ್ರಾಂತ್ಯಕ್ಕೆ ಸೇರಿದಂಥಾ ಕೆಲವು ಭಾಗಗಳವರು ತಮ್ಮ ಆರ್ಥಿಕ, ತಮ್ಮ ರಾಜಕೀಯ ಮತ್ತು ತಮ್ಮ ಆಡಳಿತ ನೀತಿಯನ್ನು ತೆಗೆದುಕೊಂಡರೆ ಅವು ಮೈಸೂರಿನಂತೆಯೇ ಮಾದರಿಯಾಗಿದ್ದುವು. ಆದರೂ ಕರ್ನಾಟಕ ರಾಜ್ಯಕ್ಕೆ ಸೇರಿದರೆ ಕನ್ನಡ ಭಾಷೆ ಮಾತನಾಡುವ ರಾಜ್ಯಕ್ಕೆ ಸೇರಿದವರಾಗುತ್ತೇವೆ ಎಂಬ ಧೋರಣೆಯಿಂದ ಸೇರಿದ್ದೇವೆಯೇ ಹೊರತು ಮೈಸೂರಿಗೆ ಸೇರಿದರೆ ನಮಗೆ ಏನೋ ಸಿಕ್ಕುತ್ತದೆ ಎಂಬ ಭಾವನೆಯಿಂದ ಸೇರಿದೆವೆಂದು ತಪ್ಪು ಅಭಿಪ್ರಾಯವನ್ನು ಇಟ್ಟುಕೊಳ್ಳಬಾರದು. ಆ ದೃಷ್ಟಿಯಿಂದ ಇದನ್ನು ನಾವು ಇತ್ಯರ್ಥ ಮಾಡಬೇಕೇ ಹೊರತು ಚರಿತ್ರೆಯ ಹಿನ್ನೆಲೆಯ ಒಂದು ದೃಷ್ಟಿಯನ್ನು ತಾಳಿದ್ದೇ ಆದರೆ ಇದಕ್ಕೆ ನಿಜವಾದಂಥ ಒಂದು ಹೆಸರನ್ನು ಕೊಟ್ಟಂತೆ ಆಗುವುದಿಲ್ಲ ಎಂದು ನನ್ನ ಭಾವನೆ. ಕನ್ನಡ ಭಾಷೆ ಆಡುವಂಥ ಜನರ ಒಂದು ಪ್ರಾಂತ ರಚನೆ, ಭಾಷಾವಾರು ಪ್ರಾಂತ ರಚನೆ ಮಾಡಬೇಕೆಂಬ ಧೋರಣೆಯನ್ನು ಒಪ್ಪಿ ಈ ಪ್ರಾಂತವನ್ನು ರಚನೆ ಮಾಡಿದ್ದರಿಂದ ಭಾಷೆಗೆ ಹೊಂದಿಕೊಂಡಂಥ ಹೆಸರಿಗೆ ಮನ್ನಣೆ ಕೊಡಬೇಕೇ ವಿನಾ ಚರಿತ್ರೆಯ ಹಿನ್ನೆಲೆ ನೋಡಿಕೊಟ್ಟದ್ದೇ ಆದರೆ ಯಾವ ಗುರಿಯನ್ನು ಇಟ್ಟುಕೊಂಡಿದ್ದೇವೆಯೋ ಅದನ್ನು ಸಾಧನೆ ಮಾಡಿದಂತಾಗುವುದಿಲ್ಲ ಎಂದು ಹೇಳಿ ಇವತ್ತು ಮಂಡಿಸಿರುವ ಈ ನಿರ್ಣಯಕ್ಕೆ ನಾನು ನನ್ನ ಸಮ್ಮತಿಯನ್ನು ಸೂಚಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Business of the House.

Mr. SPEAKER.—I find many members indicating a desire to participate in the debate. I am entirely in the hands of the House. I have already told the House that I have no discretion to extend the period of 3½ hours. At 6 O'Clock I have to put it to the vote because it is not left to me to accommodate all. So, members must help me.

Sri G. J. MUCKANNAPPA.—Let the time be extended.

Sri S. R. KANTHI.—Under the Rules, you, Sir, have the power to extend the period by one hour.

Mr. SPEAKER.—May I pass on a copy of the Rules and request the Hon'ble Minister to point out that relevant rule ? Is the Hon'ble Minister aware that this is not the Business Advisory Committee ?

Sri S. R. KANTHI.—I am sorry, Sir. But on the same analogy, you can extend the time by one hour. There is no harm in that.

Sri S. SIVAPPA (Sravanabelagola).—Sir, extension of time by one hour will not help because a large number of members want to participate. This is a very important resolution concerning a very vital question of the State. My submission is that time for the discussion of this resolution may be extended by a day or two.

Mr. SPEAKER.—I do not know whether the Leader of the Opposition carrys the whole House with him when he says so.

Sri S. SIVAPPA.—At least one more day should be given.

Sri B. D. JATTI.—Sir, it may not be correct to extend the time by one or two days. If the Hon'ble Members want to take some more time, the time can be extended by two hours.

Mr. SPEAKER.—Is it the desire of the House that the time be extended by two hours *i.e.*, we sit till 8 P. M. ?

Sri S. SIVAPPA.—If the four days allotted for non-official business is over, this resolution can be carried over to the next non-official day. This is a very vital question and we must have a full-dress debate on it.

Sri B. D. JATTI.—Today we can sit up to 8 O'clock. This question was discussed not once, but twice or thrice. There is no point in saying we have not discussed. There was proper and full-dressed discussion about it. So, we can sit up to 8 O'clock and finish it.

Sri A. S. PATIL (Nargund).—It may be closed at 7 O'clock.

Sri S. SIVAPPA.—You are speaking from your Party's point of view. My party wants one day more. Why do you stand in the way ?

Sri S. R. KANTHI.—Let it not be postponed till tomorrow. Let us finish it today.